Swabhimani Sahakari
Pages : 48 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 17
Issue - 05
May - 2020

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

## ಆನ್‌ಲೈನ್ ತರಬೇತಿಯತ್ತ ಸಂಯುಕ್ತ ಸಹಕಾರಿ ಹೆಜ್ಜೆ

## ಆನ್‌ಲೈನ್‌ನಲ್ಲಿ ಡಿ.ಸಿ.ಬಿ.ಎಂ ಕೋರ್ಸ್‌ನ ಸಂಪರ್ಕ ವರ್ಗ



ಮೇ 1,
ಕಾರ್ಮಿಕ ದಿನ



ಮೇ 25, ರಂಜಾನ್
ಶುಭಾಶಯಗಳು

ಧ್ಯಾನ ಹೆಚ್ಚಾದಂತೆ
ಜ್ಞಾನ ಹೆಚ್ಚಾಗುವುದು
ಜ್ಞಾನ ಹೆಚ್ಚಾದಂತೆ
ಮೌನ ಹೆಚ್ಚಾಗುವುದು
–ಗೌತಮ ಬುದ್ಧ

ಮೇ 7,
ಬುದ್ಧ ಪೂರ್ಣಿಮೆ
ಶುಭಾಶಯಗಳು

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4966

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1335



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಮೇ 1 ಕಾರ್ಮಿಕ ದಿನಾಚರಣೆ, ಕಾರ್ಮಿಕರಿಗೆ ಶುಭಾಶಯ ಹೇಳುವ ಸಮಯ ಇದಲ್ಲ. ಅವರಿಗೆ ಧೈರ್ಯ ಹೇಳುವ ಆತ್ಮವಿಶ್ವಾಸ ತುಂಬುವ ಸಮಯ ಇದಾಗಿದೆ. ಆದರೆ ಈ ಕೋವಿಡ್-19 ನಿಂದಾಗಿ ಸ್ಥಗಿತವಾಗಿರುವ ಅನೇಕ ಕಾರ್ಯಚಟುವಟಿ-ಕೆಗಳಿಂದಾಗಿ ರಾಜ್ಯದ ಹಾಗೂ ದೇಶದ ಕಾರ್ಮಿಕರು ಬಡಜನರು, ಕೂಲಿಕಾರ್ಮಿಕರು ಕೆಲಸವಿಲ್ಲದೇ ದಿನ ನಿತ್ಯದ ಆಹಾರಕ್ಕೂ ತೊಂದರೆ ಅನುಭವಿಸುತ್ತಿರುವುದು ಅತ್ಯಂತ ದುಃಖದ ವಿಷಯ. ಆಹಾರ ಸಮಸ್ಯೆ ಉಂಟಾಗಿರುವ ಹಿನ್ನೆಲೆಯಲ್ಲಿ ಅನೇಕ ಸೌಹಾರ್ದ ಸಹಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಜನರಿಗೆ ಸಹಾಯ ಮಾಡುತ್ತಿರುವುದು ಶ್ಲಾಘನೀಯ ಹಾಗೂ ಅಭಿನಂದನೀಯ.

# ಎಲ್ಲರ ಆರೋಗ್ಯ ರಕ್ಷಣೆಗೆ ಆದ್ಯತೆ. ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಮತ್ತು ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನಕ್ಕೆ ಆದ್ಯತೆ. ಮುಂಬರುವ ದಿನಗಳು ದೇಶದ ಕಾರ್ಮಿಕರುಗಳಿಗೆ ಒಳ್ಳೆಯದಾಗಿರಲಿ.

**ಆತ್ಮೀಯ ಸಹಕಾರಿ ಬಂಧುಗಳೆ,**

ರಾಷ್ಟ್ರವ್ಯಾಪಿ ಹಾಗೂ ವಿಶ್ವವ್ಯಾಪಿ ದಿನೇ ದಿನೇ ಹರಡುತ್ತಿರುವ ಈ ಕೋವಿಡ್-19 ಮಹಾಮಾರಿ ಸಂದರ್ಭದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಕ್ಷೇಮವಾಗಿರಲೆಂದು, ಆರೋಗ್ಯವಾಗಿರಲೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಎಲ್ಲಕ್ಕೂ ಮೊದಲು ಆರೋಗ್ಯ ನಂತರ ಸೌಹಾರ್ದ ಸಹಕಾರಿ ಸಂಘ ಸಂಸ್ಥೆಗಳ ಕಾರ್ಯನಿರ್ವಹಣೆಯ ಬಗ್ಗೆ ಚಿಂತನೆಗೆ ಆದ್ಯತೆ.

ಕರ್ನಾಟಕ ಸರಕಾರ ಹಾಗೂ ಕೇಂದ್ರ ಸರಕಾರ ತೆಗೆದುಕೊಂಡಿರುವ ಲಾಕ್‌ಡೌನ್‌ನಿಂದಾಗಿ ದೇಶದ ಎಲ್ಲ ಉದ್ದಿಮೆಗಳು ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳು ಸಹಕಾರಿ ಬ್ಯಾಂಕುಗಳ ಸಂಸ್ಥೆಗಳ ಹಾಗು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡು ಪ್ರಗತಿಯಲ್ಲಿ ಹಿನ್ನಡೆಯಾಗಿದೆ. ಇದರಿಂದಾಗಿ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿದೆ. ಅನೇಕ ಸವಾಲುಗಳು ಎದುರಾಗಿವೆ. ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಹಾಗು ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಶಕ್ತಿಯನ್ನು ದೇವರು ನಮ್ಮೆಲ್ಲರಿಗೂ ದಯಪಾಲಿಸಲಿ ಎಂದು ಹಾರೈಸುತ್ತೇನೆ. (ಸರ್ವೇ ಜನಃ ಸುಖಿನೊ ಭವಂತು : ಸಮಸ್ತ ಸನ್ಮಂಗಲಾನಿ ಭವಂತು)

ಮೇ 1 ಕಾರ್ಮಿಕ ದಿನಾಚರಣೆ, ಕಾರ್ಮಿಕರಿಗೆ ಶುಭಾಶಯ ಹೇಳುವ ಸಮಯ ಇದಲ್ಲ. ಅವರಿಗೆ ಧೈರ್ಯ ಹೇಳುವ ಆತ್ಮವಿಶ್ವಾಸ ತುಂಬುವ ಸಮಯ ಇದಾಗಿದೆ. ಆದರೆ ಈ ಕೋವಿಡ್-19 ನಿಂದಾಗಿ ಸ್ಥಗಿತವಾಗಿರುವ ಅನೇಕ ಕಾರ್ಯಚಟುವಟಿಕೆಗಳಿಂದಾಗಿ ರಾಜ್ಯದ ಹಾಗು ದೇಶದ ಕಾರ್ಮಿಕರು ಬಡಜನರು, ಕೂಲಿಕಾರ್ಮಿಕರು ಕೆಲಸವಿಲ್ಲದೇ ದಿನ ನಿತ್ಯದ ಆಹಾರಕ್ಕೂ ತೊಂದರೆ ಅನುಭವಿಸುತ್ತಿರುವುದು ಅತ್ಯಂತ ದುಃಖದ ವಿಷಯ. ಆಹಾರ ಸಮಸ್ಯೆ ಉಂಟಾಗಿರುವ ಹಿನ್ನೆಲೆಯಲ್ಲಿ ಅನೇಕ ಸೌಹಾರ್ದ ಸಹಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಜನರಿಗೆ ಸಹಾಯ ಮಾಡುತ್ತಿರುವುದು ಶ್ಲಾಘನೀಯ ಹಾಗೂ ಅಭಿನಂದನೀಯ. ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳು ಈ ಸಂದರ್ಭದಲ್ಲಿ ಅವರುಗಳಿಗಾಗಿ ಹಮ್ಮಿಕೊಂಡಿರುವ ಕಾರ್ಯಚಟುವಟಿಕೆಗಳ ಬಗ್ಗೆ ತಿಳುವಳಿಕೆ ನೀಡುವುದು ಅವರುಗಳು ಈ ಯೋಜನೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ತಮ್ಮ ಆರೋಗ್ಯ ರಕ್ಷಣೆ ಮಾಡಿಕೊಳ್ಳುವುದರ ಜೊತೆಗೆ ತಮ್ಮ ಜೀವನ ನಿರ್ವಹಣೆಯನ್ನು ಮಾಡಿಕೊಳ್ಳಲು ಸಹಾಯವಾಗುವಂತೆ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಕಾರ್ಮಿಕ ವರ್ಗಕ್ಕೆ ಮುಂಬರುವ ದಿನಗಳು ಒಳ್ಳೆಯದಾಗಿರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ಕಾರ್ಯವನ್ನು 1ನೇ ನವೆಂಬರ ದಿನಾಂಕದವರೆಗೆ ಮುಂದೂಡಲಾಗಿದೆ. ಅದೇ ರೀತಿ ಪಟ್ಟಣ ಸಹಕಾರ ಬ್ಯಾಂಕುಗಳ ಶಾಸನಬದ್ಧ ಲೆಕ್ಕಪತ್ರಗಳ ಸಿದ್ಧತೆಗಾಗಿ ಕೇಂದ್ರದ ನೇರ ತೆರಿಗೆ ಬೋರ್ಡ್‌ನವರು ಸಹ ಕ್ರಮವಿಡಲು ಸಂಬಂಧಿಸಿದವರನ್ನು ವಿನಂತಿಸಲು ಕ್ರಮವಿಡಲಾಗುತ್ತಿದೆ. ಸಹಕಾರಿಗಳು ನಿಬಂಧಕರಿಗೆ ವಾರ್ಷಿಕ ತಃಖ್ತೆಗಳನ್ನು ಸಲ್ಲಿಸುವ ದಿನಾಂಕವನ್ನು ನವೆಂಬರವರೆಗೆ ಮುಂದೂಡಲಾಗಿದೆ. ವಾರ್ಷಿಕ ಸಾಮಾನ್ಯ ಸಭೆಯ ಬಗ್ಗೆಯೂ ಶೀಘ್ರದಲ್ಲಿ ನಿರ್ಣಯ ತೆಗೆದುಕೊಳ್ಳಲು ಸರಕಾರದ ಗಮನ ಹರಿಸಲು ಕೋರಿದೆ. ಆದ್ದರಿಂದ ಸೌಹಾರ್ದ ಸಹಕಾರಿಗಳು ಆತಂಕಕ್ಕೆ ಒಳಗಾಗಬೇಕಿಲ್ಲ. ಸೌಹಾರ್ದ ಸಹಕಾರಿಗಳು ಈ ಸಂದರ್ಭದಲ್ಲಿ ಸರಕಾರದ ನಿರ್ದೇಶನದಂತೆ ಕಾರ್ಯನಿರ್ವಹಿಸುವುದು ಮತ್ತು ಯಾವುದೇ ಅನಗತ್ಯ ಕಾರ್ಯಕ್ರಮಗಳನ್ನು ಜಾರಿಮಾಡದಿರುವುದು ಹಣಕಾಸಿನ ಶಿಸ್ತುಬದ್ಧ ಕಾರ್ಯನಿರ್ವಹಣೆ ಕ್ಷೇಮಕರವೆನಿಸುತ್ತದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ............................................... 5-15
ಸರ್ಕಾರದ ಸುತ್ತೋಲೆ..................... 16-18
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ..................................................... 19-40
ಲೇಖನ.......................................... 41-48

# ಸಂಪಾದಕೀಯ

## ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ ಆನ್‌ಲೈನ್ ತರಬೇತಿ ಪ್ರಾರಂಭ ಸೌಹಾರ್ದ ಸಹಕಾರಿಗಳಿಗಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಹಕಾರಿಗಳೊಂದಿಗೆ ಆನ್‌ಲೈನ್ ಸಮಾಲೋಚನೆ.

ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಪ್ರಾರಂಭದಿಂದಲೂ ಮುಂಚೋಣಿಯಲ್ಲಿರುವುದು ಸಹಕಾರಿಗಳಿಗೆ ತಿಳಿದಿರುವ ವಿಷಯ. ಪ್ರಸಕ್ತ ಕೋವಿಡ್-19 ರೋಗ ಹರಡುವಿಕೆಯಿಂದಾಗಿ ಲಾಕ್‌ಡೌನ್ ಇರುವುದರಿಂದ ರಾಜ್ಯದಾದ್ಯಂತ ಹೊರಾಂಗಣವಾಗಲಿ ಅಥವಾ ಒಳಾಂಗಣ ತರಬೇತಿಗಳನ್ನು ನಡೆಸಲು ಸಾಧ್ಯವಾಗದೇ ಇರುವುದನ್ನು ಗಮನಿಸಿದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಆನ್‌ಲೈನ್ ತರಬೇತಿ ಪ್ರಾರಂಭಿಸಲು ತೀರ್ಮಾನಿಸಿ ಪ್ರಾಯೋಗಿಕವಾಗಿ ದಿನಾಂಕ 13.04.2020 ರಿಂದ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ತರಬೇತಿಯನ್ನು ಏರ್ಪಡಿಸಿ ಯಶಸ್ವಿಯಾದ ನಂತರ ದಿನಾಂಕ 18.04.2020, 20.04.2020, 21.04.2020, 22.04.2020, 27.04.2020, 30.04.2020 ಹಾಗೂ 02.05.2020 ರಂದು ರಾಜ್ಯದ ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗಾಗಿ ಆನ್‌ಲೈನ್ ತರಬೇತಿಗಳನ್ನು ನಿರಂತರ ಏರ್ಪಡಿಸುತ್ತ ಬರುತ್ತಿರುವುದು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳೊಡನೆ ಕೋರೊನಾ ಮಹಾಮಾರಿಯ ಪರಿಣಾಮಗಳು ಹಾಗೂ ಅದನ್ನು ಎದುರಿಸುವಲ್ಲಿ ಸೌಹಾರ್ದ ಸಹಕಾರಿಗಳು ಅನುಸರಿಸಬಹುದಾದ ಕಾರ್ಯಕ್ರಮಗಳ ಬಗ್ಗೆ ವಿಡಿಯೂ ಕಾನ್ಪರೆನ್ಸ್ ಕಾಲ್ ಮುಖಾಂತರ ಚರ್ಚಾಗೋಷ್ಠಿಯನ್ನು ನಡೆಸಿರುವುದು ಅತ್ಯಂತ ಸಂತೋಷದ ವಿಷಯ.

ಪ್ರಸುತ್ತ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗಾಗಿ ಹಲವಾರು ವಿಷಯಗಳ ಮೇಲೆ ಆನ್‌ಲೈನ್ ತರಬೇತಿ ನೀಡುವುದಾಗಿ ಸಂಯುಕ್ತ ಸಹಕಾರಿ ಸಿದ್ಧತೆ ನಡೆಸಿರುವುದು ಸ್ವಾಗತಾರ್ಹ. ಈ ಬಗ್ಗೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಆನ್‌ಲೈನ್ ತರಬೇತಿಗಾಗಿ ಸಂಯುಕ್ತ ಸಹಕಾರಿಯಲ್ಲಿ ನೊಂದಣಿ ಮಾಡಿಕೊಳ್ಳುವುದು ಮತ್ತು ತಮಗೆ ಅವಶ್ಯವಿರುವ ತರಬೇತಿ ವಿಷಯದ ಬಗ್ಗೆ ಸಂಯುಕ್ತ ಸಹಕಾರಿಗೆ ತಿಳಿಸುವುದು ಅಗತ್ಯವಾಗುತ್ತದೆ. ಸಂಯುಕ್ತ ಸಹಕಾರಿ ಈ ಬಗ್ಗೆ ಪ್ರಾಂತೀಯ ಅಧಿಕಾರಿಗಳಿಗೆ ಹಾಗೂ ಜಿಲ್ಲಾ ಸಂಯೋಜಕರಿಗೆ ನೋಂದಣಿಗೆ ಕ್ರಮವಿಡಲು ಸೂಚಿಸಲಾಗಿದೆ.

ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿ ಪ್ರಾರಂಭದಿಂದಲೂ ಸವಾಲು ಮತ್ತು ಬದಲಾವಣೆಯನ್ನು ಎದರಿಸುತ್ತ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಬರುತ್ತಿವೆ. ಆದರಂತೆ ಲಾಕ್‌ಡೌನ್ ಸಂದರ್ಭದಲ್ಲಿ ಸಹ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ ಮಾನಸಿಕ ಸ್ಥೈರ್ಯ ಮತ್ತು ವೃತ್ತಿ ನೈಪುಣ್ಯತೆಯನ್ನು ಹೆಚ್ಚಿಸಿಕೊಳ್ಳಲು ಅನುವಾಗುವಂತೆ ಸೌಹಾರ್ದ ಸಹಕಾರಿಯು ಹಲವಾರು ಆನ್‌ಲೈನ್ ತರಬೇತಿ ಕಾರ್ಯಕ್ರಮ ಹಾಗೂ ಸಮಾಲೋಚನಾ ಸಭೆಗಳನ್ನು ನಡೆಯುತ್ತಿರುತ್ತದೆ. ರಾಜ್ಯದ ಪ್ರತಿಷ್ಠಿತ ಬ್ಯಾಂಕಗಳಲ್ಲಿ ಒಂದಾಗ ಸುಕೋ ಬ್ಯಾಂಕ್ ಸಹ ಆನ್‌ಲೈನ್‌ನಲ್ಲಿ ತಮ್ಮ ಸಿಬ್ಬಂದಿಯವರಿಗೆ ದಿನಾಂಕ 11.04.2020 ರಿಂದ 14.04.2020 ರವರೆಗೆ ಆನ್‌ಲೈನ್ ತರಬೇತಿಯನ್ನು ಯಶಸ್ವಿಯಾಗಿ ನಡೆಸಿರುತ್ತದೆ. ಆದ್ದರಿಂದ ಸೌಹಾರ್ದ ಸಹಕಾರಿಗಳು ತಾಂತ್ರಿಕತೆಯನ್ನು ಅಳವಡಿಸಿಕೊಂಡು ಪ್ರಗತಿಯನ್ನು ಸಾಧಿಸುತ್ತಿರುವುದನ್ನು ಸರ್ಕಾರಕ್ಕೆ ಹಾಗೂ ಸಾರ್ವಜನಿಕರಿಗೆ ಮನವರಿಕೆಯನ್ನು ಮಾಡಿಕೊಡುವ ಹಾಗೂ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದುವಲ್ಲಿ ಯಶಸ್ವಿಯಾಗಬೇಕಾಗಿದೆ.

ಶ್ರೇಣಿ 49



# ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ಕಣ್ಮುಂದಿರುವವರು ಕೈಬಿಟ್ಟಾಗ ಕಾಣದವನು ಕೈ ಹಿಡಿಯುತ್ತಾನೆ"

ಎಲ್ಲದಕ್ಕೂ ಔಷಧವಿದೆಯೆಂಬ ವಿಜ್ಞಾನಿಗಳ ಗರ್ವಕ್ಕೆ ಮರ್ಮಾಘಾತ ನೀಡಿ, ವೈದ್ಯಕೀಯ ಕ್ಷೇತ್ರಕ್ಕೆ ಸವಾಲೆಸೆದು ವಿಶ್ವದ ಎಲ್ಲ ದೇಶಗಳ ಜನತೆಯ ಎದೆಯೊಳಗದಲ್ಲಿ ಜೀವಭಯದ ಭುಗಲೆಬ್ಬಿಸಿರುವ ಈಗತ್ತಲಾಗನ "ಕೋವಿಡ್–19"ರ ಕರಾಳ ಚಿತ್ರಣವು ಯಾವುದೇ ಕಥೆಯಲ್ಲೋ, ಕನಸಿನಲ್ಲೋ ಕೇಳಿದ ಘಟನೆಯ ನೆನಪನ್ನು ತರುತ್ತದೆ. ನಿಜಕ್ಕೂ ಇದೊಂದು ವಿಸ್ಮಯವೇ. ಕೆಲವೇ ದಿವಸಗಳ ಅಂತರದಲ್ಲಿ ಊಹಿಸಲಾಗದ ಸನ್ನಿವೇಶದ ಸೃಷ್ಟಿ.

ಜಗತ್ತಿನ ಸೃಷ್ಟಿ, ಸ್ಥಿತಿ ಲಯಗಳಿಗೆ ಕರ್ತನಾದ ಭಗವಂತನು ಗುಟ್ಟು, ಪಾಲನೆ ಹಾಗೂ ವಿನಾಶಗಳೆಂಬ ಮೂರು ಕರ್ತವ್ಯಗಳನ್ನು ನಿರ್ವಹಿಸುತ್ತಾ ಅಧರ್ಮ ಹೆಚ್ಚಾದಾಗ ಲಯದ ಗುರಿಯನ್ನಿಟ್ಟುಕೊಂಡು, ಆಗಾಗ್ಯ ಇಂತಹ ಪ್ರಾಕೃತಿಕ ವಿಕೋಪಗಳನ್ನು ಬರ, ಕ್ಷಾಮ, ಪ್ರವಾಹ, ಖಾಯಿಲೆ ಹಾಗೂ ಭೀಕರ ಯುದ್ಧಗಳ ರೂಪದಲ್ಲಿ ಘಟಿಸಲು ಏರ್ಪಡು ಮೂಡುತ್ತಿರುತ್ತಾನೆಂಬ ಬಗ್ಗೆ ಭಗವದ್ಗೀತೆಯ "ಯದಾಯದಾಹ ಧರ್ಮಸ್ಸ ಗ್ಲಾನಿರ್ಭವತು ಭಾರತ, ಅಭ್ಯುತ್ತಾನಾಂ ಅಧರ್ಮಶ್ಸ ತದಾತ್ಮಾನಂ ಸೃಜಾ ಮ್ಯಹಂ" ಎಂಬ ಸತ್ಸವಾಕ್ಯಗಳ ಮೂಲಕ ಇಂಥಹ ದುರ್ಘಟನೆ ಮತ್ತು ವಿಕೋಪಗಳನ್ನು ಪರಮಾತ್ಮನ ನಿರ್ದೇಶನವೆಂದೇ ಪರಿಗಣಿಸಲು ಸೂಚಿಸಲಾಗಿದೆ. ಇಂದಿನ ರೋಗದ ವಿಸ್ತರಣೆ, ಸಾವಿನ ಸಂಖ್ಯೆ, ಮಾಧ್ಯಮಗಳಲ್ಲಿ ಭಿತ್ತರವಾಗುವ ಸುದ್ಧಿ ಪ್ರತಿಯೊಬ್ಬರ ತಲೆಕಡಿಸುತ್ತಿದೆ ಹಾಗೂ ದಿಗಲುಬೀಳಿಸುತ್ತಿದೆಯೆಂಬಂಶವನ್ನು ಚಿತ್ತೀಕರಿಸುವ ಡಿವಿಜಿ ಯವರ ಪದ್ಯ ಪ್ರಸಕ್ತ ವಿದ್ಯಮಾನಕ್ಕೆ ಕನ್ನಡಿ ಹಿಡಿದಂತಿದೆ.

ಮುತ್ತಿರುವುದಿಂದು ಭೂಮಿಯನದೊಂದು ದುರ್ದೈವ
ಮೃತ್ಸು ಕುಣೀಯುತಲಹನು ಕೇಕೆ ಹಾಕುತಲಿ
ಸುತ್ತಿಪುದು ತಲೆಯವನುದಿನದ ಲೋಕದ ವಾರ್ತೆ
ಎತ್ತಲಿಕದೆಲ್ಲ ಕಡೆ? ॥ಮಂಕುತಿಮ್ಮ॥

ಇಂದು ಭೂಮಿಯನ್ನು ಒಂದು ದುರ್ದೈವ ಮುತ್ತಿಕೊಂಡಿದೆ. ಪತ್ರಿಕೆಗಳನ್ನು ಓದಿದರೆ ಪ್ರತಿದಿನವೂ ತಲೆ ಸುತ್ತಿ ಬೀಳುವಂಥಹ ಸುದ್ಧಿಗಳೆ ಕೇಳಸಿಗುತ್ತವೆ. ಪ್ರಸಕ್ತದ ಸಾಂಕ್ರಾಮಿಕಕ್ಕೆ ಔಷದಿ ಇನ್ನೂ ದೊರೆತಿಲ್ಲವಾದ ಕಾರಣ "ಸಾಮಾಜಿಕ ಅಂತರ ನಿರ್ವಹಣೆಯೇ" ಔಷದವೆಂದಾಗಿ ನಿರೂಪಿತವಾಗಿದೆ.

ಇಂತಹ ಆಪತ್ತು, ವಿಪತ್ತು ಹಾಗೂ ದುರ್ದೆಶಿಯ ಅನಿಷ್ಟಗಳನ್ನು ನಿರ್ನಾಮಮಾಡಿ ಎಲ್ಲರಿಗೂ ಸಂಪದ್ಭರಿತತೆಯನ್ನು ತಂದೊದಗಸುವವನು ಸರ್ವಶತ್ತ ದೇವರೆಂಬುದನ್ನು ನಾವು ಮನಗಾಣಬೇಕಾಗಿದೆ. ಹೇಗೂ ಸಂದರ್ಭದ ಅನಿವಾರ್ಯತೆಯಿಂದ ಮನೆಯಲ್ಲಿರಬೇಕಾದ ಪಂಪಾತಕ್ಕೆ ಒಣ್ಣಕೊಂಡಿರುವ ನಾವುಗಳು ಮನೆಯಲ್ಲಿರುವ ಎಲ್ಲ ಕ್ಷಣಗಳಲ್ಲೂ ಭಗವಂತನ ಲೀಲೆಗಳ ನೆನಪು ತರುವ ಸಚಿಂತನೆ, ಸತ್ಸಂಗ, ಭಜನೆ ಪೂಜಾದಿ ಕಾರ್ಯಕ್ರಮಗಳನ್ನು ತೊಡಗಿಸಿಕೊಂಡು ಸ್ವಾರ್ಥಪರ ಚಿಂತನೆಗಳನ್ನು ಬದಿಗಿಟ್ಟು ಮನಸ್ಸನ್ನು ಸತ್ಪಲಗಳ ಹೊದೋಟವಾಗಿ ಪರಿವರ್ತಿಸಿಕೊಳ್ಳುವ ಮೂಲಕ ಜೀವನ ಸಫಲತೆಯನ್ನು ಪಡೆಯತಕ್ಕದ್ದಾಗಿದೆ.

"ಕೊಲ್ಲಿಪನೆ ಬೆಳೆಯಪನು" ಎಂದು ತಿಳಿದು ಹರಸಿ ಹಾರೈಸುವ ಸರ್ವಶಕ್ತನಲ್ಲಿ ಶರಣು ಹೊಂದಿದಾಗ ಎಲ್ಲ ಆಂತಂಕಗಳು ಮರೆಯೊಣ ಶುಭವು ತಂತಾನೇ ಪ್ರತ್ಸಕ್ಷವಾಗುವುದೆಂಬದೇ ಈ ಪದ್ಯದ ಸಾರಾಂಶವಾಗಿದೆ. ಇದೇ ಅಂಶವನ್ನು ಆಂಗ್ಲ ಲುಕ್ತಿಯೊಂದು ಹೀಗೆ ನಿರ್ದೇಶಿಸುತ್ತದೆ.

**"Those who leave everything in GOD's hands
will eventually see GOD's hand in every thing"**

ಪದ್ಯದ ಅಂತರಾರ್ಥವನ್ನು ಅರಿತು ಸರ್ವಭಾರವನ್ನು ಭಗವಂತನ ಪದತಲಕ್ಕೆ ಸಮರ್ಪಿಸೋಣ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–8,487, ಬೆಂಗಳೂರು:–1,913, ಮೈಸೂರು:–922 ಹಾಗೂ ಕಲಬುರಗಿ:–2,078 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 13,400 ಆಗಿರುತ್ತದೆ. ಇವುಗಳ ಪೈಕಿ 6,222 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,178.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,410 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 224 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 146 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2040 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 998 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 91 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 80 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 827 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

**ಗಮನಿಸಿ : ಏಪ್ರಿಲ್ ಮಾಹೆಯಲ್ಲಿ ಪ್ರಕರಣಗಳ ವಿಲೇವಾರಿಗೆ ಅವಕಾಶ ಆಗಿರುವುದಿಲ್ಲ.**

# ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ತಾಂತ್ರಿಕತೆ ಅಳವಡಿಕೆಗೆ ಹೊಸ ಅಧ್ಯಾಯ

# ಸಹಕಾರ ಕ್ಷೇತ್ರದ ತರಬೇತಿ ಹಾಗೂ ಶಿಕ್ಷಣದಲ್ಲಿ ಆನ್‌ಲೈನ್ ತರಬೇತಿ ಪ್ರಾರಂಭ

## ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಆನ್‌ಲೈನ್‌ನಲ್ಲಿ ನಾಯಕತ್ವ ಅಭಿವೃದ್ಧಿ ತರಬೇತಿ ಕಾರ್ಯಕ್ರಮ - ಡಾ. ನಂದೀಶ ಹಿರೇಮಠ,



ದೇಶದಲ್ಲಿ ಕೋವಿಡ್–19 ಮಹಾಮಾರಿಯಿಂದಾಗಿ ಕಳೆದ 23–3–2020 ರಿಂದ ಲಾಕ್‌ಡೌನ್ ಜಾರಿ ಇರುವುದರಿಂದ ಸಂಯುಕ್ತ ಸಹಕಾರಿಯು ತನ್ನ ಕಾರ್ಯಚಟುವಟಿಕೆಗಳಲ್ಲಿ ಹೊಸತನವನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಚಿಂತನೆ ನಡೆಸಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಅವರಿರುವ ಜಾಗದಲ್ಲಿಯೇ ಆನ್‌ಲೈನ್ ತರಬೇತಿ ನೀಡುವುದರ ಬಗ್ಗೆ ಆಲೋಚಿಸಿ ಮೊದಲು ತನ್ನ ಸಿಬ್ಬಂದಿಯವರನ್ನು ಈ ನಿಟ್ಟಿನಲ್ಲಿ ತರಬೇತಿಗೊಳಿಸುವುದಕ್ಕಾಗಿ ಅವರುಗಳಿಗೆ ಆನ್‌ಲೈನ್ ತರಬೇತಿಯನ್ನು ಏಪ್ರಿಲ್ 2020 ಮಾಹೆಯಲ್ಲಿ ಪ್ರಾರಂಭಿಸಿ ಯಶಸ್ವಿಯಾಗಿದೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ತರಬೇತಿ ವಿಧಾನಗಳಲ್ಲಿ ಹೊಸತನವನ್ನು ಅಳವಡಿಸಬೇಕೆಂಬ ಉದ್ದೇಶ ಹೊಂದಿದ್ದು ಈ ಬಗ್ಗೆ ಮೊದಲು ತನ್ನ ಅಧಿಕಾರಿಗಳನ್ನು ಆನ್‌ಲೈನ್ ತರಬೇತಿಯಲ್ಲಿ ಸಿದ್ಧಪಡಿಸುವುದಕ್ಕಾಗಿ ದಿನಾಂಕ 18–4–2020 ರಿಂದ 23–4–2020 ಅವಧಿಯಲ್ಲಿ 4 ದಿನಗಳಲ್ಲಿ (18,20,21,23) ಪ್ರತಿದಿನ 90 ನಿಮಿಷಗಳ ಕಾಲ ಆನ್‌ಲೈನ್‌ನಲ್ಲಿ ಬೆಂಗಳೂರಿನ ಡಾ. ನಂದೀಶ ಹಿರೇಮಠ ಇವರಿಂದ ನಾಯಕತ್ವ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ 45ಕ್ಕಿಂತ ಹೆಚ್ಚು ಅಧಿಕಾರಿಗಳು ಭಾಗವಹಿಸಿ ಪ್ರಯೋಜನ ಪಡೆದರು.

ನಾಯಕತ್ವ ಅಭಿವೃದ್ಧಿಗಾಗಿ ಹಲವು ವಿಷಯಗಳ ಬಗ್ಗೆ ಗಮನ ಹರಿಸುವುದರ ಜೊತೆಗೆ ಅವುಗಳನ್ನು ಅಳವಡಿಸಿಕೊಳ್ಳುವುದು ಅವಶ್ಯಕ ಎಂದು ಡಾ. ನಂದೀಶ ಹಿರೇಮಠ ತಮ್ಮ ತರಬೇತಿ ಅವಧಿಯಲ್ಲಿ ತಿಳಿಸಿದರು

**ತರಬೇತಿಯ ಮುಖ್ಯಾಂಶಗಳು :**

ನಾಯಕತ್ವದ ಗುಣಲಕ್ಷಣಗಳೆಂದರೆ ನಾಯಕನ ವ್ಯಕ್ತಿತ್ವ ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರುವಂತಿರಬೇಕು ಅಧಿಕಾರದಿಂದ ಪ್ರಭಾವವಿರಬಾರದು ನಾಯಕತ್ವವು ಅನೇಕ ನಾಯಕರುಗಳನ್ನು ತಯಾರು ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರಬೇಕು. ನಾಯಕತ್ವವು ಸಮಾಜದ ಅಭಿವೃದ್ಧಿಯ ಗುರಿಯನ್ನು ಹೊಂದಿರಬೇಕು.

ಸಮಾಜದ ಸಾಮೂಹಿಕ ಪ್ರಗತಿಯ ಗುರಿಯನ್ನು ಹೊಂದಿರಬೇಕು. ಇದು ನಿರಂತರ ಪ್ರಕ್ರೀಯೆಯಾಗಿರುತ್ತದೆ. ನಿಜವಾದ ನಾಯಕರುಗಳಲ್ಲಿ ಮೊದಲು ಸಮಾಜದ ಅಭಿವೃದ್ಧಿಗೆ ಆದ್ಯತೆ ತನ್ನ ವ್ಯಯಕ್ತಿಕ ಕೌಟುಂಬಿಕ ವಿಷಯಗಳಿಗೆ ಎರಡನೇಯ ಆದ್ಯತೆ ಇರಬೇಕಾಗುತ್ತದೆ.

**ನಾಯಕರುಗಳ ಮಹತ್ವದ ಗುಣಗಳು :**

1. ವಿಷಯಗಳ ಪೂರ್ಣಜ್ಞಾನ ಹಾಗು ಸ್ವಯಂನಿಯಂತ್ರಣ ಮತ್ತು ಸ್ವಯಂ ಆಡಳಿತ
2. ಸ್ವಯಂಶಿಸ್ತು ಹೊಂದಿರುವುದು. ಇತರರಿಗೆ ಮಾದರಿಯಾಗುವಂತಿರುವುದು.
3. ದೂರದೃಷ್ಟಿ ಇರಬೇಕು.
4. ಆತ್ಮವಿಶ್ವಾಸದವರಾಗಿರಬೇಕು.
5. ವಿಷಯಗಳಿಗೆ ಉತ್ತಮವಾಗಿ ಸ್ಪಂದಿಸುವವರಾಗಿರಬೇಕು.
6. ಜೀವನದ ಹಾಗು ಸಾಮಾಜಿಕ ವಿಷಯಗಳಲ್ಲಿ ಸಂದರ್ಭಾನುಸಾರ ವಯೋಮಾನಕ್ಕುಗುಣವಾಗಿ ಸಮತೋಲನ ಕಾಯ್ದುಕೊಳ್ಳುವ ಸ್ವಭಾವ.
7. ಪ್ರಾಮಾಣಿಕತೆ
8. ಲವಲವಿಕೆ ಹಾಗು ಉತ್ಸಾಹದ ವ್ಯಕ್ತಿತ್ವವನ್ನು ಹೊಂದಿರುವುದು.
9. ವ್ಯಯಕ್ತಿಕವಾಗಿ, ಸಾಮಾಜಿಕವಾಗಿ ಹಾಗೂ ಇತರೆ ಸಂದರ್ಭಗಳಲ್ಲಿ ಉತ್ತಮವಾದುದನ್ನೆ ಆಯ್ಕೆ ಮಾಡುವ ಸ್ವಭಾವ
10. ತನ್ನ ವ್ಯಯಕ್ತಿಕ ಹಾಗು ಸಾಮಾಜಿಕ ಕೊಡುಗೆಯ ಬಗ್ಗೆ ಚಿಂತನೆ.
11. ಅಲ್ಪ ಶ್ರಮ ಹಾಗು ಅಲ್ಪ ಕೊಡುಗೆಯಿಂದ ಹೆಚ್ಚಿನ ಪ್ರಗತಿಯ ಬಗ್ಗೆ ಚಿಂತನೆ.
12. ಬದಲಾವಣೆಗೆ ಮುಕ್ತ ಮನಸ್ಸು ಹೊಂದಿರುವುದು. ಚೌಕಟ್ಟಿನ ಹೊರಗೆ ಚಿಂತನೆ ಮಾಡುವ ಸ್ವಭಾವದಾಗಿರಬೇಕು. ಸಮಸ್ಯೆಯನ್ನು ಬುದ್ಧಿವಂತಿಕೆಯಿಂದ ಸಕಾರಾತ್ಮಕವಾಗಿ ಬಗೆಹರಿಸುವ ಸ್ವಭಾವದವರಾಗಿರಬೇಕು ಸಮಸ್ಯೆಯನ್ನು ಹುಟ್ಟು ಹಾಕುವವರಾಗಿರಬಾರದು.

ನಾಯಕತ್ವರೂಢಿಸಿ ಕೊಳ್ಳುವವರಲಿ ಒಳ್ಳೆಯ ಧೋರಣೆಯನ್ನು ಹೊಂದಿದಾಗ ಯಶಸ್ಸು ಸಾಧಿಸುತ್ತಾರೆ. ಆದ್ದರಿಂದ ನೀವು ಉತ್ತಮ ಧೋರಣೆಯನ್ನು ಹೊಂದುವುದು ಅವಶ್ಯಕ. ನಿಮ್ಮಲ್ಲಿರುವ ನಕಾರಾತ್ಮಕ ಭಾವನೆಗಳನ್ನು ತೆಗೆಯಬೇಕು. ಯಾವಾಗಲು ಸಕಾರಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುವುದು ಅವಶ್ಯಕ. ಸಮಯವನ್ನು ಸದುಪಯೋಗಪಡಿಸಿಕೊಳ್ಳಿ.

ಸಮಯ ಅತ್ಯಂತ ಮಹತ್ವದ್ದು. ಸಾಮಾನ್ಯವಾಗಿ ಸಮಯವನ್ನು ಹಣ ಎಂದು ಹೇಳಲಾಗುತ್ತದೆ.

ಆದರೆ ಹಣದಿಂದ ಮನೆಯನ್ನು ಖರೀದಿಸಬಹುದು ಆದರೆ ಮನೆಯ ಜನರ ಮನವನ್ನು ಖರೀದಿಸಲಾಗದು.

ಹಣದಿಂದ ಗಡಿಯಾರ ಖರೀದಿಸಬಹುದು ಆದರೆ ಸಮಯವನ್ನು ಖರೀದಿಸಲಾಗದು. ಹಣದಿಂದ ಉತ್ತಮ ಹಾಸಿಗೆಯನ್ನು ಖರೀದಿಸಬಹುದು ಆದರೆ ನಿದ್ರೆಯನ್ನು ಖರೀದಿಸಲಾಗದು. ಹಣದಿಂದ ಒಂದು ಪುಸ್ತಕವನ್ನು ಖರೀದಿಸಬಹುದು ಆದರೆ ಜ್ಞಾನವನ್ನು ಖರೀದಿಸಲಾಗದು. ಹಣದಿಂದ ಒಳ್ಳೆಯ ವೈದ್ಯರನ್ನು ಭೇಟಿ ಮಾಡಬಹುದು ಆದರೆ ಆರೋಗ್ಯ ಖರೀದಿಸಲಾಗದು. ಹೀಗೆ ಹಣದಿಂದಲೇ ಎಲ್ಲವೂ ಆಗುವುದಿಲ್ಲ ಎಂಬುದನ್ನು ಅರಿಯಬೇಕು. ಸಮಯವೇ ಜೀವನ ಅದಕ್ಕಾಗಿ ಉತ್ತಮ ಗುರಿಯನ್ನು ಹೊಂದಬೇಕು. ಉತ್ತಮ ದೃಷ್ಟಿಯಿರಬೇಕು. ಉತ್ತಮ ಕಾರ್ಯನಿರ್ವಹಣೆಗೆ ಯೋಜನೆ ಮಾಡಿಕೊಳ್ಳಬೇಕು. ಉತ್ತಮ ಮೌಲ್ಯಗಳನ್ನೂ ರೂಢಿಸಿಕೊಳ್ಳಬೇಕು ವ್ಯಯಕ್ತಿವಾಗಿ ಹಾಗೂ ಸಾಂಸ್ಥಿಕವಾಗಿ ಉತ್ತಮ ಬಾಂಧವ್ಯಗಳನ್ನು ಬೆಳೆಸಿಕೊಂಡು ಕಾರ್ಯನಿರ್ವಹಣೆಗೆ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ನೆಟ್ವರ್ಕ ಉಪಯೋಗ ಮಾಡಿಕೊಳ್ಳಿ. ಸಂಘಟಿತರಾಗಿ ಕಾರ್ಯ ನಿರ್ವಹಿಸಿ. ಜೀವನವನ್ನು ಕರ್ಮಭೂಮಿಯನ್ನಾಗಿ ಉತ್ತಮ ಕಾರ್ಯಗಳನ್ನು ಮಾಡಿ ಯಶಸ್ಸು ಸಾಧಿಸಿ.

## ಈ ಜೀವನ ಮತ್ತೆ ಬರುವುದಿಲ್ಲ. (ಲೈಫ್ ದುಬಾರಾ ನಹಿ ಮಿಲೆಗಾ)

### - ಶ್ರೀ ಎಸ್.ಕಮಲಕುಮಾರ, ಕಾರ್ಪೋರೇಟ್ ಟ್ರೇನರ್ ರಾಯಚೂರು

## Life Na Milegi Dobara - Life is a Journey, Not a Destination

ದಿನಾಂಕ 22.04.2020 ರಂದು ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ನಡೆದ ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಶ್ರೀ ಎಸ್ ಕಮಲಕುಮಾರ್, ಕಾರ್ಪೋರೇಟ್ ಟ್ರೇನರ್, ರಾಯಚೂರು ಇವರು ಲೈಫ್ ದುಬಾರಾ ನಹಿ ಮಿಲೆಗಾ ಇದರ ಬಗ್ಗೆ ತರಬೇತಿ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 75 ಸಿಬ್ಬಂದಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

ಜೀವನ ಒಂದು ಪಯಣ, ಜೀವನ ಗುರಿಯಾಗಿರುವುದಿಲ್ಲ. ಈ ವಿಶ್ವ ನಿಮ್ಮ ಜೀವನವನ್ನು ವ್ಯಾಖ್ಯಾನಿಸಿದ ರೀತಿಯಲ್ಲಿರುವುದಿಲ್ಲ. ನೀವು ಜೀವನವನ್ನು ಸಮಯ ಸಂದರ್ಭಗಳಿಗೆ ತಕ್ಕಂತೆ ಪುನರ್ ವ್ಯಾಖ್ಯಾನಿಸುವುದು ಅವಶ್ಯಕ. ಜೀವನದ ಅನುಭವಗಳು ನಮ್ಮ ಜೀವನವನ್ನು ಬದಲಾಯಿಸುತ್ತವೆ. ಜೀವನ ನಮಗೆ ಅನೇಕ ಪಾಠಗಳನ್ನು ಕಲಿಸುತ್ತದೆ. ಸಮಸ್ಯೆಗಳು ಸಮಸ್ಯೆಗಳಾಗಿರುವುದಿಲ್ಲ. ನಾವು ಸಮಸ್ಯೆಗಳನ್ನು ಹೇಗೆ ಸ್ಪಂದಿಸುತ್ತೇವೆ ಎಂಬುವುದು ಮುಖ್ಯವಾಗುತ್ತದೆ. ಅದರಿಂದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ. ಜೀವನ ಅತ್ಯಂತ ಮೌಲ್ಯವಾದುದು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 75 ಜನ ಸಿಬ್ಬಂದಿಗಳು ಭಾಗವಹಿಸಿದರು.

**ಯಶಸ್ಸು ಅಥವಾ ತೃಪ್ತಿ ಯಾವುದು ಮುಖ್ಯ :**

ಜೀವನದಲ್ಲಿ ತೃಪ್ತಿ ಮುಖ್ಯ. ತೃಪ್ತಿ ಬಂದರೆ ಯಶಸ್ಸು ತಾನಾಗಿಯೆ ಬರುತ್ತದೆ. ನಾವು ಸಮಸ್ಯೆಗಳನ್ನು ಉತ್ತಮ ರೀತಿಯಲ್ಲಿ ಸ್ಪಂದಿಸುವುದು ಅವಶ್ಯಕ. ಸಮಸ್ಯೆಗಳು ತಾವಾಗಿಯೇ ಬಗೆ ಹರಿಯುತ್ತವೆ. ನಮ್ಮಲ್ಲಿರುವವುಗಳನ್ನು ಆನಂದಿಸಬೇಕು. ಇರಲಾರದ್ದರ ಬಗ್ಗೆ ಚಿಂತಿಸಬಾರದು. ಎಲ್ಲವೂ ನಮ್ಮ ಮಾನಸಿಕ ಸ್ಥಿತಿಗತಿಗಳ ಮೇಲೆ ಅವಲಂಬಿತವಾಗುತ್ತದೆ. ಒಂದು ಕಲ್ಲು ದೇವಸ್ಥಾನದಲ್ಲಿ ದೇವರಾಗುವುದಾದರೆ ಪ್ರತಿದಿನ ದೇವಸ್ಥಾನಕ್ಕೆ ಹೋಗುವ ಮನುಷ್ಯ ಯಾಕೆ ದೇವರಾಗುವುದಿಲ್ಲ. ಸಕಾರಾತ್ಮ ಮನೋಭಾವ ಬೆಳೆಸಿಕೊಂಡು ನಕಾರಾತ್ಮಕ ವಿಷಯಗಳನ್ನು ತೆಗೆದುಹಾಕಿದರೆ ಎಲ್ಲವೂ ಸರಿಹೋಗುತ್ತದೆ. ನಮ್ಮ ಸಮಸ್ಯೆಗಳನ್ನು ಇತರರೊಂದಿಗೆ ಹೇಳಿಕೊಂಡರೆ ಪ್ರಯೋಜನವಾಗುವುದಿಲ್ಲ. ಯಾವ ಸಮಸ್ಯೆಯೂ ಪರಿಹಾರವಿಲ್ಲದೆ ಇರುವುದಿಲ್ಲ. ಎಲ್ಲದಕ್ಕೂ ಪರಿಹಾರವಿದೆ. ಅನಗತ್ಯ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಒಳ್ಳೆಯದನ್ನು ಮಾತಾಡಲು ಕಲಿಯಬೇಕು.

ಜೀವನದಲ್ಲಿ ಯಶಸ್ಸು ಅಥವಾ ತೃಪ್ತಿ/ಸಂತೃಪ್ತಿ ಮುಖ್ಯವೋ ಎಂಬುದರ ಬಗ್ಗೆ ಪರಾಮರ್ಶಿಸುವುದು ಅವಶ್ಯಕ. ಕೊನೆಗೆ ತೃಪ್ತಿಯನ್ನು ಹೊಂದುವುದೇ ಗುರಿಯಾಗಬೇಕು. ತೃಪ್ತಿಯನ್ನು ಹೊಂದುವುದೇ ನಮಗೆ ಯಶಸ್ಸನ್ನು ಕೊಡುತ್ತದೆ.

ಸಂಘಟಿತ ಕಾರ್ಯಗಳು ಯಶಸ್ಸನ್ನು ಕೊಡುತ್ತವೆ. ಒಬ್ಬ ವ್ಯಕ್ತಿ ಸಾಧಿಸಲಾದದ್ದನ್ನು ಅನೇಕರು ಕೂಡಿ ಸಾಧಿಸಬಹುದು. ಉತ್ತಮ ಬಾಂಧವ್ಯಗಳನ್ನು ಹೊಂದಿದಾಗ, ಆಂತರಿಕ ಸಂಬಂಧಗಳ ನಿರ್ವಹಣೆ ಮಾಡಿದಾಗ ಕೌಟುಂಬಿಕ, ಸಾಮಾಜಿಕ ಹಾಗು ಸಾಂಸ್ಥಿಕ ಯಶಸ್ಸು ಸಾಧಿಸಬಹುದು. ಆದ್ದರಿಂದ ಸಂಘಟಿತರಾಗಿ ಕಾರ್ಯನಿರ್ವಹಿಸುವುದು ಅವಶ್ಯಕ. ಸಮಯಕ್ಕೆ ತಕ್ಕಂತೆ ಬದಲಾವಣೆಯನ್ನು ಒಪ್ಪಿಕೊಳ್ಳಬೇಕು. ಸಂಪನ್ಮೂಲಗಳನ್ನು ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿ ನಮ್ಮ ಹಾಗೂ ಸಂಸ್ಥೆಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕು. ಯಶಸ್ಸು ಸಾಧಿಸಬೇಕು. ಇದುವೇ ಜೀವನ ಈ ಜೀವನ ಮತ್ತೆ ಬರುವುದಿಲ್ಲ. ಸಾರ್ಥಕ ಜೀವನ ನಡೆಯಬೇಕು.

## ಸೌಹಾರ್ದ ಸಹಕಾರಿಗಳಿಗೆ ವಿವಿಧ ವಿಷಯಗಳ ಬಗ್ಗೆ ಆನ್‌ಲೈನ್ ತರಬೇತಿ

ರಾಜ್ಯದ ಸೌಹಾರ್ದ ಸಹಕಾರಿಗಳಿಗಾಗಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ವಿವಿಧ ವಿಷಯಗಳ ಬಗ್ಗೆ ಆನ್‌ಲೈನ್ ತರಬೇತಿ ಯೋಜನೆಯನ್ನು ಪ್ರಾರಂಭಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಯವರು ಭಾಗವಹಿಸಬಹುದಾಗಿದೆ.

ಈ ತರಬೇತಿಯಲ್ಲಿ ಭಾಗವಹಿಸುವವರು ತಮ್ಮಲ್ಲಿರುವ Destop, Laptop, tab ಅಥವಾ Android phone ಮೂಲಕ ತರಬೇತಿ ಪಡೆಯಲು ಅವಕಾಶವಿರುತ್ತದೆ. ಭಾಗವಹಿಸುವವರು ತಮ್ಮ ಹೆಸರು, ಸಹಕಾರಿಯ ಹೆಸರು, ಹಾಗೂ ತಮ್ಮ ಮೊಬೈಲ್ ಸಂಖ್ಯೆಯೊಂದಿಗೆ ತಾವು ಆಯ್ದುಕೊಳ್ಳುವ ವಿಷಯಗಳ ಬಗ್ಗೆ ಸಂಯುಕ್ತ ಸಹಕಾರಿಯಲ್ಲಿ ಈ ಬಗ್ಗೆ ತಮ್ಮ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಯೋಜನಾಧಿಕಾರಿಗಳಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ಅಧಿಕಾರಿಗಳಲ್ಲಿ ನೊಂದಣಿ ಮಾಡಿಕೊಳ್ಳುವುದು. ನೊಂದಣಿ ಶುಲ್ಕ ಇರುವುದಿಲ್ಲ. ನೊಂದಣಿ ಪ್ರಕ್ರೀಯೆ ಮುಗಿದ ನಂತರ ತರಬೇತಿಗಳನ್ನು ಪ್ರಾರಂಭಿಸಲಾಗುವುದು. ಆನ್‌ಲೈನ್ ತರಬೇತಿಯ ದಿನಾಂಕ, ಸಮಯ ಹಾಗೂ ವಿಷಯಗಳನ್ನು ಸಹಕಾರಿಗಳಿಗೆ e-mail ಹಾಗೂ whats app ಮೂಲಕ ಸಹಕಾರಿಗಳ ಅಗತ್ಯ ಅನುಗುಣವಾಗಿ ತಿಳಿಸಲಾಗುವುದು.

## ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್ ಮೇ 2020ರ ಮಾಹೆಯಲ್ಲಿ ನಡೆಸಲಾಗುವ "ಆನ್ ಲೈನ್" ಸಂಪರ್ಕ ವರ್ಗದ ವೇಳಾಪಟ್ಟಿ

## Time Table for Online Contact Classes to be conducted in May 2020

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ನಡೆಸುತ್ತಿರುವ ಡಿಸಿಬಿಎಮ್ ಕೋರ್ಸನ 2ನೇ ತಂಡದ 2ನೇ ಸಂಪರ್ಕವರ್ಗವನ್ನು, ಕೋವಿಡ್–19 ಮಹಾಮಾರಿಯ ಕಾರಣದಿಂದಾಗಿ ರಾಜ್ಯ ಹಾಗೂ ದೇಶದಾದ್ಯಂತ ಲಾಕ್‌ಡೌನ್‌ಇದ್ದ ಪ್ರಯುಕ್ತ ಏಪ್ರಿಲ್ ಮಾಹೆಯಲ್ಲಿ ನಡೆಸಲು ಸಾಧ್ಯವಾಗದ ಕಾರಣ, ಈ ಸಂಪರ್ಕವರ್ಗವನ್ನು ಇದೇ ಮೇ 2020 ರಲ್ಲಿ "ಆನ್‌ಲೈನ್" ಮೂಲಕ ನಡೆಸಲು ತೀರ್ಮಾನಿಸಲಾಗಿದೆ. ಈ "ಆನ್‌ಲೈನ್" ಸಂಪರ್ಕವರ್ಗದ ವೇಳಾಪಟ್ಟಿಯು ಈ ಕೆಳಕಂಡಂತೆ ಇರುತ್ತದೆ.

**ಸೂಚನೆಗಳು :**

1. ಸಂಪರ್ಕ ವರ್ಗಗಳಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ಹಾಜರಾತಿಯಿಂದ 20 ಅಂಕಗಳು ಬರುತ್ತದೆ.
2. ಸಂಪರ್ಕ ವರ್ಗದಲ್ಲಿ ಪ್ರತಿದಿನ 90 ನಿಮಿಷಗಳ ಎರಡು ವಿಷಯಗಳ ಕುರಿತು ತರಗತಿಗಳು ನಡೆಯುವುದರಿಂದ, ಒಟ್ಟಾರೆ ಮೂರು ಗಂಟೆ ಅವಧಿಗೆ ಅಗತ್ಯವಾದ ಇಂಟರ್‌ನೆಟ್ ಮತ್ತು ಬ್ಯಾಟರಿ ಚಾರ್ಜ್ ಬ್ಯಾಕಪ್ ಇಟ್ಟುಕೊಳ್ಳುವುದು.
3. ತರಬೇತಿಯ ಸಂದರ್ಭದಲ್ಲಿ Data Connection/Internet on ಆಗಿರಬೇಕು. ಮೂರು ಗಂಟೆಗಳ ಅವಧಿಯ ಆನ್‌ಲೈನ್ ತರಗತಿಗೆ ಗರಿಷ್ಠ 1.5 GB ಯವರೆಗೆ Internet Data ಬೇಕಾಗುತ್ತದೆ.
4. ಸಂಪರ್ಕವರ್ಗವನ್ನು "Go to meeting" ಆ್ಯಪ್ ಮೂಲಕ ಆನ್‌ಲೈನ್‌ನಲ್ಲಿ ನಡೆಸಲಾಗುವುದರಿಂದ "Go to meeting" ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವುದು ಅವಶ್ಯಕ.
5. ಆನ್‌ಲೈನ್ ತರಗತಿಗೆ ಸೇರುವ ವೆಬ್ ಲಿಂಕ್‌ನ್ನು ಶಿಬಿರಾರ್ಥಿಗಳಿಗೆ ತರಗತಿಯ ದಿನದಂದು ಬೆಳಿಗ್ಗೆ ಕಳುಹಿಸಲಾಗುವುದು, ಶಿಬಿರಾರ್ಥಿಗಳು ತರಬೇತಿ ಪ್ರಾರಂಭಕ್ಕೆ 10 ನಿಮಿಷ ಮೊದಲು login ಆಗುವ ಮೂಲಕ ತಮ್ಮ ಹಾಜರಾತಿಯನ್ನು ಸೂಚಿಸಬೇಕು.
6. ಅಧ್ಯಯನ ವರದಿಗಳನ್ನು (ಕೇಸ್‌ಸ್ಟಡಿ ರಿಪೋರ್ಟ್‌ನ್ನು) ಪೋಸ್ಟ್/ಕೋರಿಯರ್ ಮೂಲಕ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಕಳುಹಿಸುವುದು. ಇಲ್ಲವಾದಲ್ಲಿ ಜೂನ್ ಮಾಹೆಯಲ್ಲಿ ನಡೆಸಲಾಗುವ ಅಂತಿಮ ಪರೀಕ್ಷೆಯ ಮೊದಲು ಸಲ್ಲಿಸುವುದು.
7. ಜೂನ್ 2020ರ ಮಾಹೆಯಲ್ಲಿ ನಡೆಸುವ ಮೂರನೇ ಸಂಪರ್ಕ ವರ್ಗವನ್ನು ಕೂಡ ಆನ್‌ಲೈನ್ ಮೂಲಕ ನಡೆಸಲಾಗುವುದು.
8. ಹೆಚ್ಚಿನ ವಿವರಗಳಿಗೆ ಸೌಹಾರ್ದ ಸಹಕಾರಿ ಜಿಲ್ಲಾ ಸಂಯೋಜಕರನ್ನು, ಕಿರಿಯ ಅಧಿಕಾರಿ ಶ್ರೀಮತಿ ಕವಿತ, ಸಹಾಯಕರಾದ ಶ್ರೀ ಉಮೇಶ ಇವರನ್ನು, ತಾಂತ್ರಿಕ ಮಾಹಿತಿಗಾಗಿ ಶ್ರೀಮತಿ ಸಿಂಧು ರವರನ್ನು ಸಂಪರ್ಕಿಸಬಹುದಾಗಿದೆ ಹಾಗೂ ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿ ಶ್ರೀ ವಿ.ಜೆ ಕಾರಕೂನ್, ಉಪಪ್ರಧಾನ ವ್ಯವಸ್ಥಾಪಕ ಶ್ರೀ ರಘುನಂದನ್ ಇವರನ್ನು ಕೂಡ ಸಂಪರ್ಕಿಸಬಹುದಾಗಿದೆ.

## ಬೆಳಗಾವಿ ಹಾಗೂ ಮುಧೋಳ ಕೇಂದ್ರದ ಸಂಪರ್ಕವರ್ಗದ ವೇಳಾಪಟ್ಟಿ

## ದಿನಾಂಕ 09.05.2020 ರಿಂದ 11.05.2020 ರವರೆಗೆ

| Sl.No.<br>ಕ್ರ. ಸಂ | Subjects<br>ವಿಷಯಗಳು | Date & Time<br>ದಿನಾಂಕ ಮತ್ತು ಸಮಯ | Name of the Faculty<br>ಸಂಪನ್ಮೂಲ ವ್ಯಕ್ತಿಗಳು |
|---|---|---|---|
| 1 | **ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ.**<br>ಅಧ್ಯಾಯ –3 ವಿವಿಧ ರೀತಿಯ ಸಹಕಾರ ಸಂಘಗಳು. ರಾಜ್ಯಮಟ್ಟದ ಸಹಕಾರ ಸಂಸ್ಥೆಗಳು (ಅಧ್ಯಯನ ಸಾಹಿತ್ಯದಲ್ಲಿ ಹೆಚ್ಚುವರಿ ಸೇರಿಸಬೇಕಾದುದು)<br>ಅಧ್ಯಾಯ – 4 ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ. | 9–5–2020<br>ಬೆಳಿಗ್ಗೆ 10–00<br>ರಿಂದ 11–30 | ಡಾ.ಎಸ್.ಎ ಸಿದ್ಧಾಂತಿ |
| 2 | **ಸಹಕಾರ ಪತ್ತು ನಿರ್ವಹಣೆ**<br>ಅಧ್ಯಾಯ –3<br>ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಕಿಸಾನ ಕಾರ್ಡಗಳು, ರುಪೇ ಕಾರ್ಡ, ಸಾಲ ವಸೂಲಾತಿ ವಿಧಾನ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಿನ್ನಲೆ, ವ್ಯಾಖ್ಯಾನ ಮತ್ತು ವಿವರಣೆ, ಸಾಲಗಳು<br>ಅಧ್ಯಾಯ – 4<br>ರಾಜ್ಯ ಸಹಕಾರ ಬ್ಯಾಂಕುಗಳು ವ್ಯಾಖ್ಯಾನ ಮತ್ತು ವಿವರಣೆ. ವೈದ್ಯನಾಥನ್ ವರದಿ | 9–5–2020<br>ಮಧ್ಯಾಹ್ನ 12.00<br>ರಿಂದ 01.30 | ಶ್ರೀ ಹೆಚ್. ಎಸ್.ನಾಗರಾ–ಜಯ್ಯ |
| 3 | **ಬ್ಯಾಂಕಿಂಗ ಮೂಲ ಮಾಹಿತಿ**<br>ಅಧ್ಯಾಯ 03 : ಗ್ರಾಹಕರ ಪರಿಚಯ (ಕೆ.ವೈ.ಸಿ)–ಗ್ರಾಹಕ ಯಾರು, ಬ್ಯಾಂಕ್ ಗ್ರಾಹಕನ ವ್ಯಾಖ್ಯಾಯನ, ಕೆ.ವೈ.ಸಿ ಕಾರ್ಯನೀತಿ, ಕಂಪನಿ ಮತ್ತು ಸಂಸ್ಥೆಗಳ ಖಾತೆಗಳು, ಹಣವರ್ಗಾವಣೆಗಳ ನಿಗಾ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ಸ್ಮಾರ್ಟ್ ಕಾರ್ಡ್, ಹಣ ಛಪಾವಣೆ ಅಧಿನಿಯಮ –2002<br>ಅಧ್ಯಾಯ 04 : ಠೇವಣಿಗಳು – ವಿವಿದ ಬಗೆಯ ಬ್ಯಾಂಕ್ ಖಾತೆಗಳು, ಚಾಲ್ತಿ ಖಾತೆ, ಆವರ್ತ ಠೇವಣಿ ಖಾತೆ, ನಿಗದಿತ ಠೇವಣಿ ಖಾತೆ, ಸಿ.ಆರ್.ಆರ್ ಮತ್ತು ಎಸ್, ಎಲ್. ಆರ್. ಡಿಮ್ಯಾಟ್ ಖಾತೆ , ಮೂಲದಲ್ಲೇ ತೆರಿಗೆ ಸಂಗ್ರಹ, ಅಕೌಂಟ್ ಪ್ರಾರಂಭಿಸುವ ವಿಧಾನ. | 10–5–2020<br>ಬೆಳಿಗ್ಗೆ 10–00<br>ರಿಂದ 11–30 | ಶ್ರೀ ಜಿ. ಎಸ್. ರವೀಂದ್ರ |
| 4 | **ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರ ಅನ್ವಯಿಸುವ ಕಾಯ್ದೆಗಳು**<br>ಅಧ್ಯಾಯ 03 : ಬ್ಯಾಂಕಿಂಗ್ ನಿಯಮನ ಅಧಿನಿಯಮ, 1949–ಬ್ಯಾಂಕಿನ ವ್ಯಾಖ್ಯೆ, ಶೇರುಗಳಲ್ಲಿ ಹೊಡಿಕೆ ಮತ್ತು ನಿರ್ದೇಶಕರಿಗೆ ನೀಡುವ ಸಾಲಗಳ ಮೇಲೆ ನಿರ್ಬಂಧ, ಮುಂಗಡಗಳ ಮೇಲೆ ರಿಸರ್ವ್ ಬ್ಯಾಂಕಿನ ನಿಯಂತ್ರಣ, ಪ್ರತಿಭೂತೀಕರಣ ಅಧಿನಿಯಮ<br>ಅಧ್ಯಾಯ 04 : ಪರಕ್ರಾಮ್ಯ ಸಂಲೇಖಗಳ ಅಧಿನಿಯಮ, 1881–ಚೆಕ್ಕು ದರದು ಹುಂಡಿಗಳು (ಅಕಾಮಡೇಶನ್ ಬಿಲ್ಸ್) | 10–5–2020<br>ಮಧ್ಯಾಹ್ನ 12.00<br>ರಿಂದ 01.30 | ಶ್ರೀ ಶಿವಾನಂದ ಕುಲಕರ್ಣಿ |
| 5 | **ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ**<br>ಅಧ್ಯಾಯ 04 : ಲೆಕ್ಕಪತ್ರ ನಿರ್ವಹಣೆಯ ಅಂತಿಮ ಖಾತೆಗಳು ಅರ್ಥ, ಅಂತಿಮ ಖಾತೆಗಳ ತಯಾರಿಕೆ<br>ಅಧ್ಯಾಯ 05 : ಬ್ಯಾಂಕುಗಳು ಲೆಕ್ಕ ಬರಹ ಪದ್ಧತಿ –ಬ್ಯಾಂಕುಗಳಲ್ಲಿನ ಲೆಕ್ಕಬರಹದ ವ್ಯವಸ್ಥೆಯ ಲಕ್ಷಣಗಳು, ಅಡಾವೆ ಪತ್ರಿಕೆಯ ತಯಾರಿಕೆ. | 11–5–2020<br>ಬೆಳಿಗ್ಗೆ 10–00<br>ರಿಂದ 11–30 | ಶ್ರೀ ಸುನೀಲ್ ಪತ್ತಾರ್ |
| 6 | **ಮಾಹಿತಿ ತಂತ್ರಜ್ಞಾನ**<br>ಅಧ್ಯಾಯ 04 : ಬ್ಯಾಂಕಿಂಗ್ ಮಾಹಿತಿ ತಂತ್ರಜ್ಞಾನ – ಪಾವತಿ ವ್ಯವಸ್ಥೆ – ನೆಫ್ಟ್, ಪ್ರಕ್ರಿಯೆಯ ಸಿಸ್ಟಮ್, ಸ್ವಿಫ್ಟ್<br>ಅಧ್ಯಾಯ 05 : ಬ್ಯಾಂಕುಗಳಲ್ಲಿ ಮಾಹಿತಿ ತಂತ್ರಜ್ಞಾನ – ಪ್ಲಾಸ್ಟಿಕ್ ಕಾರ್ಡ್,<br>ಅಧ್ಯಾಯ 06 : ಬ್ಯಾಂಕ್‌ಗಳಲ್ಲಿ ಮಾಹಿತಿ ತಂತ್ರಜ್ಞಾನ – ಸ್ವಯಂ ನಿರ್ವಹಣೆಯ ಕ್ಲಿಯರಿಂಗ್ ಹೌಸ್. | 11–5–2020<br>ಮಧ್ಯಾಹ್ನ 12.00<br>ರಿಂದ 01.30 | ಶ್ರೀ ಜಿ. ಎಸ್. ರವೀಂದ್ರ |

# ಬೆಂಗಳೂರು, ಶಿವಮೊಗ್ಗ, ರಾಯಚೂರು ಕೇಂದ್ರದ ಸಂಪರ್ಕವರ್ಗದ ವೇಳಾಪಟ್ಟಿ
## ದಿನಾಂಕ 23.05.2020 ರಿಂದ 25.05.2020 ರವರೆಗೆ

| Sl.No.<br>ಕ್ರ. ಸಂ | Subjects<br>ವಿಷಯಗಳು | Date & Time<br>ದಿನಾಂಕ ಮತ್ತು ಸಮಯ | Name of the Faculty<br>ಸಂಪನ್ಮೂಲ ವ್ಯಕ್ತಿಗಳು |
|---|---|---|---|
| 1 | **ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ.**<br>ಅಧ್ಯಾಯ –3 ವಿವಿಧ ರೀತಿಯ ಸಹಕಾರ ಸಂಘಗಳು. ರಾಜ್ಯಮಟ್ಟದ ಸಹಕಾರ ಸಂಸ್ಥೆಗಳು (ಅಧ್ಯಯನ ಸಾಹಿತ್ಯದಲ್ಲಿ ಹೆಚ್ಚುವರಿ ಸೇರಿಸಬೇಕಾದುದು)<br>ಅಧ್ಯಾಯ – 4 ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ. | 23–5–2020<br>ಬೆಳಿಗ್ಗೆ 10–00<br>ರಿಂದ 11–30 | ಶ್ರೀ ಯಶವಂತ್ ಡೊಂಗ್ರೆ |
| 2 | **ಸಹಕಾರ ಪತ್ತು ನಿರ್ವಹಣೆ**<br>ಅಧ್ಯಾಯ –3<br>ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಕಿಸಾನ ಕಾರ್ಡಗಳು, ರುಪೇ ಕಾರ್ಡ, ಸಾಲ ವಸೂಲಾತಿ ವಿಧಾನ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಿನ್ನಲೆ, ವ್ಯಾಖ್ಯಾನ ಮತ್ತು ವಿವರಣೆ, ಸಾಲಗಳು<br>ಅಧ್ಯಾಯ – 4<br>ರಾಜ್ಯ ಸಹಕಾರ ಬ್ಯಾಂಕುಗಳು ವ್ಯಾಖ್ಯಾನ ಮತ್ತು ವಿವರಣೆ. ವೈದ್ಯನಾಥನ್ ವರದಿ | 23–5–2020<br>ಮಧ್ಯಾಹ್ನ 12.00<br>ರಿಂದ 01.30 | ಶ್ರೀ ಭಾಸ್ಕರ ಹೆಗಡೆ |
| 3 | **ಬ್ಯಾಂಕಿಂಗ ಮೂಲ ಮಾಹಿತಿ**<br>ಅಧ್ಯಾಯ 03 : ಗ್ರಾಹಕರ ಪರಿಚಯ (ಕೆ.ವೈ.ಸಿ)–ಗ್ರಾಹಕ ಯಾರು, ಬ್ಯಾಂಕ್ ಗ್ರಾಹಕನ ವ್ಯಾಖ್ಯಾಯನ, ಕೆ.ವೈ.ಸಿ ಕಾರ್ಯನೀತಿ, ಕಂಪನಿ ಮತ್ತು ಸಂಸ್ಥೆಗಳ ಖಾತೆಗಳು, ಹಣವರ್ಗಾವಣೆಗಳ ನಿಗಾ, ಕ್ರೆಡಿಟ್ ಕಾರ್ಡ, ಡೆಬಿಟ್ ಕಾರ್ಡ, ಸ್ಮಾರ್ಟ್ ಕಾರ್ಡ, ಹಣ ಛಪಾವಣೆ ಅಧಿನಿಯಮ –2002<br>ಅಧ್ಯಾಯ 04 : ಠೇವಣಿಗಳು – ವಿವಿದ ಬಗೆಯ ಬ್ಯಾಂಕ್ ಖಾತೆಗಳು, ಚಾಲ್ತಿ ಖಾತೆ, ಆವರ್ತ ಠೇವಣಿ ಖಾತೆ, ನಿಗದಿತ ಠೇವಣಿ ಖಾತೆ, ಸಿ.ಆರ್.ಆರ್ ಮತ್ತು ಎಸ್, ಎಲ್. ಆರ್. ಡಿಮ್ಯಾಟ್ ಖಾತೆ , ಮೂಲದಲ್ಲೇ ತೆರಿಗೆ ಸಂಗ್ರಹ, ಅಕೌಂಟ್ ಪ್ರಾರಂಭಿಸುವ ವಿಧಾನ. | 24–5–2020<br>ಬೆಳಿಗ್ಗೆ 10–00<br>ರಿಂದ 11–30 | ಶ್ರೀ ಬಿ. ಎಸ್. ಚಂದ್ರಶೇಖರ್ |
| 4 | **ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರ ಅನ್ವಯಿಸುವ ಕಾಯ್ದೆಗಳು**<br>ಅಧ್ಯಾಯ 03 : ಬ್ಯಾಂಕಿಂಗ್ ನಿಯಮನ ಅಧಿನಿಯಮ, 1949–ಬ್ಯಾಂಕಿನ ವ್ಯಾಖ್ಯೆ, ಶೇರುಗಳಲ್ಲಿ ಹೂಡಿಕೆ ಮತ್ತು ನಿರ್ದೇಶಕರಿಗೆ ನೀಡುವ ಸಾಲಗಳ ಮೇಲೆ ನಿರ್ಬಂಧ, ಮುಂಗಡಗಳ ಮೇಲೆ ರಿಸರ್ವ್ ಬ್ಯಾಂಕಿನ ನಿಯಂತ್ರಣ, ಪ್ರತಿಭೂತೀಕರಣ ಅಧಿನಿಯಮ<br>ಅಧ್ಯಾಯ 04 : ಪರಕ್ರಾಮ್ಯ ಸಂಲೇಖಗಳ ಅಧಿನಿಯಮ, 1881–ಚೆಕ್ಕು ದರದು ಹುಂಡಿಗಳು (ಅಕಾಮಡೇಶನ್ ಬಿಲ್) | 24–5–2020<br>ಮಧ್ಯಾಹ್ನ 12.00<br>ರಿಂದ 01.30 | ಶ್ರೀ ಜಿ.ಎಸ್ ರವೀಂದ್ರ |
| 5 | **ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ**<br>ಅಧ್ಯಾಯ 04 : ಲೆಕ್ಕಪತ್ರ ನಿರ್ವಹಣೆಯ ಅಂತಿಮ ಖಾತೆಗಳು ಅರ್ಥ, ಅಂತಿಮ ಖಾತೆಗಳ ತಯಾರಿಕೆ<br>ಅಧ್ಯಾಯ 05 : ಬ್ಯಾಂಕುಗಳು ಲೆಕ್ಕ ಬರಹ ಪದ್ಧತಿ –ಬ್ಯಾಂಕುಗಳಲ್ಲಿನ ಲೆಕ್ಕಬರಹದ ವ್ಯವಸ್ಥೆಯ ಲಕ್ಷಣಗಳು, ಅಡಾವೆ ಪತ್ರಿಕೆಯ ತಯಾರಿಕೆ. | 25–5–2020<br>ಬೆಳಿಗ್ಗೆ 10–00<br>ರಿಂದ 11–30 | ಶ್ರೀ ಬಿ.ವಿ. ರವೀಂದ್ರನಾಥ್ |
| 6 | **ಮಾಹಿತಿ ತಂತ್ರಜ್ಞಾನ**<br>ಅಧ್ಯಾಯ 04 : ಬ್ಯಾಂಕಿಂಗ್ ಮಾಹಿತಿ ತಂತ್ರಜ್ಞಾನ – ಪಾವತಿ ವ್ಯವಸ್ಥೆ – ನೆಫ್ಟ್, ಪ್ರಕ್ರಿಯೆಯ ಸಿಸ್ಟಮ್, ಸ್ವಿಫ್ಟ್<br>ಅಧ್ಯಾಯ 05 : ಬ್ಯಾಂಕುಗಳಲ್ಲಿ ಮಾಹಿತಿ ತಂತ್ರಜ್ಞಾನ – ಪ್ಲಾಸ್ಟಿಕ್ ಕಾರ್ಡ,<br>ಅಧ್ಯಾಯ 06 : ಬ್ಯಾಂಕ್‌ಗಳಲ್ಲಿ ಮಾಹಿತಿ ತಂತ್ರಜ್ಞಾನ – ಸ್ವಯಂ ನಿರ್ವಹಣೆಯ ಕ್ಲಿಯರಿಂಗ್ ಹೌಸ್. | 25–5–2020<br>ಮಧ್ಯಾಹ್ನ 12.00<br>ರಿಂದ 01.30 | ಶ್ರೀ ಅಮೃತ ಜೋಶಿ |

# ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಸೌಹಾರ್ದ ಜಿಲ್ಲಾ ಸಂಯೋಜನಾಧಿಕಾರಿಗಳ ಜೊತೆಗೆ ಆನ್‌ಲೈನ್‌ನಲ್ಲಿ ವ್ಯವಹರಿಸುವುದು ಅತ್ಯವಶ್ಯಕ. ಸಂಯುಕ್ತ ಸಹಕಾರಿಯ ಅಧಿಕಾರಿಗಳ ಹೆಸರು, ಮೊಬೈಲ್ ಸಂಖ್ಯೆ, ಹಾಗೂ ಇ-ಮೇಲ್ ಐ.ಡಿ ವಿವರಗಳು

ರಾಜ್ಯದ ಸೌಹಾರ್ದ ಸಹಕಾರಿಗಳು ಸಂಪೂರ್ಣ ಆಧುನಿಕತೆಯನ್ನು ಹೊಂದಿರಬೇಕು. ಮಾಹಿತಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದಾಗಿ ಸಹಕಾರಿಯ ಹಲವಾರು ವಿಧದ ವೆಚ್ಚಗಳಲ್ಲಿ ಮಿತವ್ಯಯವನ್ನು ಸಾಧಿಸಬಹುದು. ವಿಷಯಗಳನ್ನು ನಿರ್ದಿಷ್ಟವಾಗಿ ಅಚ್ಚುಕಟ್ಟಾಗಿ ಕಳಿಸಬಹುದು. ಸಮಯ ಉಳಿತಾಯವಾಗುತ್ತದೆ. ಮತ್ತು ಎಲ್ಲಕ್ಕೂ ಮೇಲಾಗಿ ಸೌಹಾರ್ದ ಸಹಕಾರಿಗಳು ಅಪಡೇಟ್ ಆಗಿರಲು ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಕಳುಹಿಸಬೇಕಾದ ವಾರ್ಷಿಕ, ಅರ್ಧವಾರ್ಷಿಕ ಮಾಹಿತಿಗಳು ಸಂಯುಕ್ತ ಸಹಕಾರಿ ಆಗಿಂದ್ದಾಗ್ಗೆ ಕೇಳುವ ಅಗತ್ಯ ಮಾಹಿತಿಗಳನ್ನು ಆನ್‌ಲೈನ್‌ನಲ್ಲಿ ಕಳುಹಿಸುವುದು.

ಈಗಾಗಲೇ ಸಂಯುಕ್ತ ಸಹಕಾರಿಯು ತನ್ನ ಎಲ್ಲ ಸಿಬ್ಬಂದಿಯವರಿಗೆ ಆನ್ ವ್ಯವಹಾರದ ಬಗ್ಗೆ ತರಬೇತಿ ನೀಡಿರುತ್ತದೆ. ಎಲ್ಲ ಸೌಹಾರ್ದ ಸಹಕಾರಿಗಳು ಆನ್‌ಲೈನ್‌ನಲ್ಲಿ ಕಾರ್ಯನಿರ್ವಹಿಸಲು ಅಗತ್ಯವಾದ ತರಬೇತಿಯನ್ನು ಸಹ ನೀಡುತ್ತದೆ. ತರಬೇತಿಯ ಅಗತ್ಯವಿದ್ದಲ್ಲಿ ಸಂಯುಕ್ತ ಸಹಕಾರಿಗೆ ತಿಳಿಸಿ. ಇನ್ನು ಮುಂದೆ ತಾವುಗಳೆಲ್ಲ ಆನ್‌ಲೈನ್‌ನಲ್ಲಿ ವ್ಯವಹರಿಸಲು ಕೋರಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ರಾಜ್ಯದ ಸೌಹಾರ್ದ ಸಹಕಾರಿಗಳು ಆನ್‌ಲೈನ್ ವ್ಯವಹಾರ ಮಾಡುವುದು ಸಹಕಾರಿ ಕ್ಷೇತ್ರದ ಹೆಮ್ಮೆಯ ವಿಷಯ.

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಜಿಲ್ಲಾವಾರು ಜಿಲ್ಲಾ ಸಂಯೋಜಕರ ಹೆಸರು ಸಂಪರ್ಕ ದೂರವಾಣಿ ಸಂಖ್ಯೆ ಹಾಗೂ ಇ–ಮೇಲ್ ವಿಳಾಸ**

| ಸಿಬ್ಬಂದಿಯ ಹೆಸರು | ಜಿಲ್ಲೆ | ಕಛೇರಿ ಸಂಪರ್ಕ ಸಂಖ್ಯೆ | ವೈಯಕ್ತಿಕ ಸಂಪರ್ಕ ಸಂಖ್ಯೆ | ಇ–ಮೇಲ್ ವಿಳಾಸ |
|---|---|---|---|---|
| ಬೆಂಗಳೂರು ವಿಭಾಗ | | | | |
| ನಾರಾಯಣ ಹೆಗಡೆ | ಪ್ರಾಂತೀಯ ವ್ಯವಸ್ಥಾಪಕರು | 8884466704 | 9480579882 | narayanhegade@souharda.coop |
| ನಟರಾಜ | ಚಿತ್ರದುರ್ಗ & ದಾವಣಗೆರೆ | 8884460264 | 7411229197 | nataraj@souharda.coop |
| ಶಶಿಕುಮಾರ್ ಎಸ್. | ಶಿವಮೊಗ್ಗ | 8884460261 | 9844758559 | shashikumar@souharda.coop |
| ರಾಜೇಶ್. ಕೆ.ಎಂ | ರಾಮನಗರ & ಬೆಂಗಳೂರು ನಗರ | 8884460263 | 8970590999 | rajeshkm@souharda.coop |
| ಉಮೇಶ ಎ.ಎಸ್ | ಚಿಕ್ಕಬಳ್ಳಾಪುರ ಮತ್ತು ಕೋಲಾರ | 9513566604 | 7892364236 | ckb-klrsdo@souharda.coop |
| ಕುಶಾಲ್ ಹೆಚ್.ಎಂ | ತುಮಕೂರು | 9513566613 | 9964321234 | tmksdo@souharda.coop |
| ಅನೀಲ್ ಕುಮಾರ್ ಎಂ | ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ | 8884460285 | 8884460285 | anilkumar@souharda.coop |

| | | | | |
|---|---|---|---|---|
| | | ಬೆಳಗಾವಿ ವಿಭಾಗ | | |
| ಶ್ರೀಕಾಂತ ಬರುವೆ | ಪ್ರಾಂತೀಯ ವ್ಯವಸ್ಥಾಪಕರು | 8884466706 | 9916814888 | srikanth@souharda.coop |
| ಬಸವರಾಜ ಹೊಂಗಲ | ಬೈಲಹೊಂಗಲ, ಸವದತ್ತಿ, ಖಾನಾಪುರ, ರಾಮದುರ್ಗ, ಚೆನ್ನಮ್ಮನ ಕಿತ್ತೂರು, ಹೀರೆಬಾಗೇವಾಡಿ | 8884466719 | 8970980937 | basavaraj@souhrda.coop |
| ವೃಷಭನಾಥ ಪರಪ್ಪನವರ | ಹುಕ್ಕೇರಿ | 8884460268 | 9886099964 | vrashabhanath@souharda.coop |
| ಗಂಗಾರಾಮ ಸಗ್ಗು ಕೊಳಾಪ್ಪೆ | ಉತ್ತರ ಕನ್ನಡ | 8884460262 | 9632698761 | gangaram@souharda.coop |
| ಜವಾಹರ ಮುಗ್ಗನವರ | ಅಥಣಿ, ಚಿಕ್ಕೋಡಿ, ರಾಯಭಾಗ, ಕಾಗವಾಡ, ನಿಪ್ಪಾಣಿ | 9513566607 | 7406740550 | jawahar@souhrda.coop |
| ಕಲ್ಮೇಶ್ ಎಸ್ ಎಂ. | ಹಾವೇರಿ | 9513566615 | 9449454040 | hvrsdo@souharda.coop |
| ಸುಜಯ್ ಡಿ ಬೆಳವಿ | ಗೋಕಾಕ, ಮೂಡಲಗಿ | 9513566614 | 8884643229 | sujayd@souharda.coop |
| ನಾಗರಾಜ ಜಿ ಹೆಚ್ | ಬಾಗಲಕೋಟೆ | 9513566608 | 9741112366 | bgksdo@souharda.coop |
| ಶಿವಕಾಂತ ಎನ್ | ವಿಜಯಪುರ | 8884466725 | 8197258938 | shivakanth@souharda.coop |
| ಬಸವರಾಜ ಎಸ್.ಟಿ | ಧಾರವಾಡ ಹಾಗೂ ಗದಗ | 8884460272 | 8904968196 | basawarajs@souharda.coop |
| | | ಕಲಬುರಗಿ ವಿಭಾಗ | | |
| ರಾಜಶೇಖರ್ ಹೆಚ್ | ಪ್ರಾಂತೀಯ ವ್ಯವಸ್ಥಾಪಕರು | 8884466720 | 9916009416 | raju@souharda.coop |
| ವೀರಶೆಟ್ಟಿ | ಬೀದರ್ ಹಾಗೂ ಯಾದಗಿರಿ | 8884460270 | 9901722010 | veershetty@souharda.coop |
| ಓಂಕಾರ ಧರಣೆ | ಕಲಬುರಗಿ | 8884460274 | 9844442499 | omkar@souharda.coop |
| ವೆಂಕಟೇಶ ರಾಠೋಡ | ರಾಯಚೂರು | 8884466731 | 8095413929 | venkatesh@souharda.coop |
| ಪವನ್ ಎಂ ಆರ್ | ಕೊಪ್ಪಳ ಜಿಲ್ಲೆ | 9513566605 | 9880877430 | kplsdo@souharda.coop |
| ರವಿಕುಮಾರ್ | ಬಳ್ಳಾರಿ ಜಿಲ್ಲೆ | 9513566609 | 9019523622 | belsdo@souharda.coop |
| | | ಮೈಸೂರು ವಿಭಾಗ | | |
| ಶಿವಕುಮಾರ ಬಿರಾದರ | ಪ್ರಾಂತೀಯ ವ್ಯವಸ್ಥಾಪಕರು | 8884466712 | 9844454995 | shivkumar@souharda.coop |
| ಗುರುಪ್ರಸಾದ್ ಬಂಗೇರ | ದಕ್ಷಿಣ ಕನ್ನಡ | 8884466713 | 9845440355 | gprasad@souharda.coop |
| ಸುರೇಶ. ಆರ್.ಎಸ್ | ಮೈಸೂರು & ಕೊಡುಗು | 8884466717 | 9945236219 | sureshrs@souharda.coop |
| ವಿಜಯ ಬಿ.ಎಸ್ | ಉಡುಪಿ | 8884460275 | 9164118565 | vijaybs@souharda.coop |
| ಚಂದ್ರಶೇಖರಯ್ಯ ಎಂ. | ಚಾಮರಾಜನಗರ & ಮಂಡ್ಯ | 8884460266 | 9341830331 | chandrashekr@souharda.coop |
| ಸಂತೋಷ ಕುಮಾರ್ ಎಂ ಜೆ | ಹಾಸನ & ಚಿಕ್ಕಮಗಳೂರು | 9513566612 | 8892275401 | hsn-ckm@souharda.coop |

# ಲಾಕ್‌ಡೌನ್ ಕಾರಣದಿಂದ ಸೌಹಾರ್ದ ಸಹಕಾರ ಕ್ಷೇತ್ರದ ಮೇಲೆ ಉಂಟಾಗುವ ಪರಿಣಾಮ ಹಾಗೂ ಪರಿಹಾರೋಪಾಯಗಳು.

**– ಶ್ರೀ ಶ್ರೀಕಾಂತ ಬರುವೆ, ಉಪಪ್ರಧಾನ ವ್ಯವಸ್ಥಾಪಕರು, ಬೆಳಗಾವಿ, ಶ್ರೀ ರಘುನಂದನ್ ಕೆ, ಉಪಪ್ರಧಾನ ವ್ಯವಸ್ಥಾಪಕರು, ಬೆಂಗಳೂರು, ಶ್ರೀ ರಾಜಶೇಖರ್ ಹೆಚ್, ಸಹ ಪ್ರಧಾನ ವ್ಯವಸ್ಥಾಪಕರು, ಕಲಬುರಗಿ ಇವರುಗಳು ಕಳುಹಿಸಿದ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಿದೆ.**

ಕರೋನಾ ರಕ್ಕಸನ ಅಟ್ಟಹಾಸಕ್ಕೆ ಇಡೀ ಜಗತ್ತು ನಲುಗಿದೆ. ಕರೋನಾ ಮಹಾಮಾರಿಯನ್ನು ತಡೆಗಟ್ಟಲು ಅನಿವಾರ್ಯವಾಗಿ ದೇಶವು ಲಾಕ್ಡೌನ್‌ಗೆ ಒಳಗಾಗಿದೆ. ಇದರ ಪರಿಣಾಮವಾಗಿ ಜಗತ್ತಿನ ಹಲವು ದೇಶಗಳಂತೆ ಭಾರತವೂ ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿದೆ. ಕರೋನಾ ಮಹಾಮಾರಿಯ ಕರಿನೆರಳು ಇತರೆ ಆರ್ಥಿಕ ಕ್ಷೇತ್ರಗಳ ಮೇಲೆ ಬಿದ್ದಿರುವಂತೆ ಸಹಕಾರ ಕ್ಷೇತ್ರದ ಮೇಲೂ ಬಿದ್ದಿದೆ. ಇದರಿಂದಾಗಿ ಸಹಕಾರ ಕ್ಷೇತ್ರ ಎದುರಿಸಬೇಕಾದ ಸವಾಲುಗಳು ಮತ್ತು ಎದುರಿಸಬೇಕಾದ ತೊಂದರೆಗಳು ಅಪಾರ. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ಪ್ರಸಕ್ತ ಬೆಳವಣಿಗೆಗಳಿಗೆ ಪೂರಕವಾಗಿ ಕಾರ್ಯಯೋಜನೆಯನ್ನು ರೂಪಿಸಬೇಕಾದ ಅನಿವಾರ್ಯತೆ ಇದೆ.

ಲಾಕ್‌ಡೌನ್ ಕಾರಣದಿಂದ ಸೌಹಾರ್ದ ಸಹಕಾರ ಕ್ಷೇತ್ರದ ಮೇಲೆ ಉಂಟಾಗುವ ಪರಿಣಾಮ ಹಾಗೂ ಪರಿಹಾರೋಪಾಯಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದ್ದು ಇವುಗಳಲ್ಲಿ ಅಗತ್ಯ ಬದಲಾವಣೆ/ಸೇರ್ಪಡೆಗಳನ್ನು ಮಾಡಿಕೊಳ್ಳುವುದರೊಂದಿಗೆ ಸೌಹಾರ್ದ ಸಹಕಾರಿಗಳು ಸೂಕ್ತ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕೆನ್ನುವುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ.

### ಲಾಕ್‌ಡೌನ್ ಕಾರಣದಿಂದ ಸೌಹಾರ್ದ ಸಹಕಾರ ಕ್ಷೇತ್ರದ ಮೇಲೆ ಉಂಟಾಗುವ ಪರಿಣಾಮ :

1. ಲಾಕ್‌ಡೌನ್ ಕಾರಣದಿಂದಾಗಿ ಸಹಕಾರಿಯ ಸದಸ್ಯರು ಹಣಕಾಸಿನ ಮುಗ್ಗಟ್ಟು ಎದುರಿಸುವ ಕಾರಣ ಲಾಕ್‌ಡೌನ್ ಅವಧಿ ಮುಗಿದ ನಂತರ ಹಣ ಹಿಂಪಡೆಯಲು ಸದಸ್ಯರು ಹೆಚ್ಚಿನ ಬೇಡಿಕೆ ಇಡಲಾರಂಭಿಸುತ್ತಾರೆ. ಈ ಸಮಯದಲ್ಲಿ ದ್ರವ್ಯಾಸ್ತಿ ನಿರ್ವಹಣೆ ಮಾಡದ ಸಹಕಾರಿಗಳು ಸಂಕಷ್ಟಕ್ಕೆ ಸಿಲುಕುತ್ತವೆ.
2. ಸಾಲ ಮರುಪಾವತಿ ವಿಳಂಬವಾಗುವ ಕಾರಣದಿಂದ ಸಾಲ ವಸೂಲಾತಿ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇರುತ್ತದೆ.
3. ಸಹಕಾರಿಯು ನಿಗದಿಪಡಿಸಿಕೊಂಡಿರುವ ಗುರಿಯನ್ನು ತಲುಪಲು ಕಷ್ಟಸಾಧ್ಯವಾಗುವುದರಿಂದ ಸಹಕಾರಿಗಳ ವ್ಯವಹಾರದಲ್ಲಿ ಮತ್ತು ಲಾಭ ಗಳಿಕೆಯಲ್ಲಿ ಇಳಿಮುಖವಾಗಬಹುದು.
4. ಸಹಕಾರಿಗೆ ಗುಣಮಟ್ಟದ ಸಾಲಗಾರರ ಲಭ್ಯತೆ ಕಷ್ಟಸಾಧ್ಯವಾಗಬಹುದು.
5. ಕಡಿಮೆ ಲಾಭ ಗಳಿಸುತ್ತಿರುವ ಸಹಕಾರಿ ಸಂಸ್ಥೆಗಳು ನಷ್ಟಕ್ಕೆ ಒಳಗಾಗಬಹುದು. ಪ್ರಸ್ತುತ ನಷ್ಟದಲ್ಲಿರುವ, ಆದರೆ ಮುಂದಿನ ದಿನಗಳಲ್ಲಿ ಲಾಭ ಗಳಿಸಬಹುದೆಂದು ಆಶಾಭಾವನೆ ಹೊಂದಿದ್ದ ಸಹಕಾರಿಗಳ ಕಾರ್ಯನಿರ್ವಹಣೆ ಕಷ್ಟಸಾಧ್ಯವಾಗುವ ಸಾಧ್ಯತೆ ಹೆಚ್ಚಿರುತ್ತದೆ.
6. 2019–20 ಮತ್ತು 2020–21ನೇ ಸಾಲಿನಲ್ಲಿ ಸಹಕಾರಿಗಳ ಲಾಭ ಗಳಿಕೆಯ ಪ್ರಮಾಣ, ದುಡಿಯುವ ಬಂಡವಾಳದ ಬೆಳವಣಿಗೆಯ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇರುತ್ತದೆ.
7. ನೂತನವಾಗಿ ಆರಂಭಗೊಂಡಿರುವ ಸಹಕಾರಿಗಳ ಬೆಳವಣಿಗೆಯ ಹಾದಿ ದುರ್ಗಮವಾಗುವ ಸಾಧ್ಯತೆ ಇರುತ್ತದೆ.

### ಪರಿಹಾರೋಪಾಯಗಳು :

1. ಸದಸ್ಯರೊಂದಿಗೆ ನಿರಂತರ ಸಂಪರ್ಕದಲ್ಲಿರುವ ಮೂಲಕ ಹಾಗೂ ಸದಸ್ಯರ ಕಷ್ಟಗಳ ನಿವಾರಣೆಯಲ್ಲಿ ಭಾಗಿಯಾಗುವ ಮೂಲಕ ಸಹಕಾರಿಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳಲು ಶ್ರಮಿಸುವುದು
2. ಸಹಕಾರಿಯ ವ್ಯವಹಾರಾಭಿವೃದ್ಧಿ ಯೋಜನೆಯನ್ನು ರೂಪಿಸಿಕೊಂಡು ತ್ರೈಮಾಸಿಕ ಪ್ರಗತಿ ಪರಿಶೀಲನೆ ಮಾಡುವುದು.
3. ಸಹಕಾರಿಯ ಆದಾಯದ ಸೋರಿಕೆ ಎಲ್ಲೆಲ್ಲಿ ಆಗುತ್ತಿದೆ ಎನ್ನುವುದನ್ನು ಪತ್ತೆಹಚ್ಚಿ ಸೋರಿಕೆಯನ್ನು ತಡೆಗಟ್ಟುವುದು.
4. ಎರಡು ವರ್ಷಗಳಿಗಿಂತ ಹೆಚ್ಚು ನಷ್ಟದಲ್ಲಿರುವ ಶಾಖೆಗಳನ್ನು ಸಮೀಪದ ಶಾಖೆಗಳಲ್ಲಿ ವಿಲೀನಗೊಳಿಸಲು ಕ್ರಮಕೈಗೊಳ್ಳುವುದು ಹಾಗೂ ನೂತನ ಶಾಖೆಗಳ ಆರಂಭ ತಾತ್ಕಲಿಕವಾಗಿ ಮಾಡದಿರುವುದು.
5. ಕಡಿಮೆ ವೆಚ್ಚದ ನಿಧಿಗಳ ಸಂಗ್ರಹಕ್ಕೆ ಹೆಚ್ಚು ಗಮನಹರಿಸುವುದು ಹಾಗೂ ಗುಣಮಟ್ಟದ ಸಾಲ ನೀಡಿಕೆಗೆ ಹೆಚ್ಚಿನ ಆದ್ಯತೆ ನೀಡುವುದು.
6. ಸಹಕಾರಿಯ ಸಾಮಾನ್ಯ ಸಭೆ, ಗ್ರಾಹಕರ ಸಭೆಗಳನ್ನು ಸರಳವಾಗಿ ನಡೆಸುವುದು.
7. ಆಡಳಿತಾತ್ಮಕ ವೆಚ್ಚಗಳನ್ನು ಕಡಿಮೆ ಮಾಡುವುದು ಹಾಗೂ ಮಾನವ ಸಂಪನ್ಮೂಲಗಳ ಸದ್ಬಳಕೆಯ ಯೋಜನೆ ರೂಪಿಸುವುದು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

## ಸ್ಪಷ್ಟೀಕರಣ ಸುತ್ತೋಲೆ

ಇವರಿಗೆ : ದಿನಾಂಕ: 21.04.2020

**ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು**
**ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು**

ಮಾನ್ಯರೇ,

**ವಿಷಯ : ಸೌಹಾರ್ದ ಸಹಕಾರಿಗಳು ತಮ್ಮ ಲಾಭದಲ್ಲಿ ಡಿವಿಡೆಂಡ್ ಹಂಚಿಕೆ ಮಾಡಲು ನಿರ್ಬಂಧವಿರದ ಕುರಿತು.**

**ಉಲ್ಲೇಖ : ಆರ್‌ಬಿಐ ಸುತ್ತೋಲೆ ಸಂಖ್ಯೆ: RBI/2019-20/218, DOR.BP.BC.No.64/21.02.067/2019-20, Dated : April 17, 2020.**

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, 17 ಏಪ್ರಿಲ್ 2020ರಂದು ಉಲ್ಲೇಖದಲ್ಲಿ ತಿಳಿಸಿದ ಸುತ್ತೋಲೆಯನ್ನು ಹೊರಡಿಸಿರುತ್ತದೆ. ಸದರಿ ಸುತ್ತೋಲೆಯಲ್ಲಿ, Covid 19 ನಿಂದ ಉಂಟಾದ ಅನಿಶ್ಚಿತತೆಯ ವಾತಾವರಣದಲ್ಲಿ ಆರ್ಥಿಕತೆಯನ್ನು ಬೆಂಬಲಿಸುವ ದೃಷ್ಠಿಯಿಂದ ಬ್ಯಾಂಕುಗಳು ಬಂಡವಾಳವನ್ನು ಸಂರಕ್ಷಿಸಿಟ್ಟುಕೊಳ್ಳಬೇಕಾದ ಅಗತ್ಯವಿರುವುದರಿಂದ, 31.03.2020ಕ್ಕೆ ಅಂತ್ಯವಾದ 2019–20ರ ಆರ್ಥಿಕ ವರ್ಷದ ಲಾಭದಲ್ಲಿ ಡಿವಿಡೆಂಡ್ ಹಂಚಿಕೆಯನ್ನು ಬ್ಯಾಂಕುಗಳು ಮಾಡಬಾರದೆಂದು ತಿಳಿಸಲಾಗಿದೆ. ಸೆಪ್ಟೆಂಬರ್ 30, 2020ಕ್ಕೆ ಅಂತ್ಯವಾಗುವ 2020–21ರ ಮೊದಲ ತ್ರೈಮಾಸಿಕದಲ್ಲಿನ ಬ್ಯಾಂಕುಗಳ ಆರ್ಥಿಕ ಫಲಿತಾಂಶಗಳ ಆಧಾರದ ಮೇಲೆ ಈ ನಿರ್ಭಂದವನ್ನು ಮರುಪರಿಶೀಲಿಸುವುದಾಗಿ ಆರ್‌ಬಿಐ ತಿಳಿಸಿದೆ. ಈ ವಿವರಣೆಯನ್ನೊಳಗೊಂಡ ಆರ್‌ಬಿಐನ ಸುತ್ತೋಲೆಯು ಎಲ್ಲ ವಾಣಿಜ್ಯ ಬ್ಯಾಂಕುಗಳು ಹಾಗೂ ಸಹಕಾರ ಬ್ಯಾಂಕುಗಳಿಗೆ ಮಾತ್ರ ಅನ್ವಯವಾಗುತ್ತವೆ.

ಆರ್‌ಬಿಐನ ಸುತ್ತೋಲೆಯು ಬ್ಯಾಂಕುಗಳಿಗೆ ಮಾತ್ರ ಅನ್ವಯವಾಗುತ್ತದೆ, ಇದು ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವುದಿಲ್ಲ. ಆದಕಾರಣ, 2019–20ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸೌಹಾರ್ದ ಸಹಕಾರಿಗಳು ಗಳಿಸಿದ ಲಾಭವನ್ನು, ಸೌಹಾರ್ದ ಸಹಕಾರಿ ಕಾಯ್ದೆ ಕಲಂ.10(2)(XXI)ರಲ್ಲಿ ತಿಳಿಸಿದಂತೆ ಅಗತ್ಯ ಲಾಭ ವಿಂಗಡಣೆಯನ್ನು ಮಾಡಿ ಸಾಮಾನ್ಯ ಸಭೆಯ ಅನುಮೋದನೆ ಪಡೆದ ನಂತರದಲ್ಲಿ, ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರಿಗೆ ಡಿವಿಡೆಂಡ್ ಹಂಚಿಕೆ ಮಾಡಬಹುದಾಗಿದೆ ಎಂದು ಈ ಮೂಲಕ ಸ್ಪಷ್ಟೀಕರಿಸಿದೆ.

ಆರ್‌ಬಿಐನ ಉಲ್ಲೇಖದ ಸುತ್ತೋಲೆಯು ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವುದೇ ಎನ್ನುವ ಕುರಿತು ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸುತ್ತಿರುವುದನ್ನು ಪರಿಗಣಿಸಿ, ಅಗತ್ಯ ಸ್ಪಷ್ಟೀಕರಣಕ್ಕಾಗಿ ಈ ಸುತ್ತೋಲೆಯನ್ನು ನೀಡಲಾಗಿದೆ.

**ವಂದನೆಗಳೊಂದಿಗೆ,**

(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕ**

**(ಕೊರೋನಾ ವೈರಸ್ ಹರಡದಂತೆ ಜಾಗೃತಿ ವಹಿಸೋಣ, ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಭಾಗವಹಿಸೋಣ)**

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಶಾಸನಬದ್ಧ ಸಹಕಾರಿ ಸಂಸ್ಥೆ**
**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**
**www.souharda.coop, Ph: 080–23378375–80, Email:souharda@souharda.coop**

ಇವರಿಗೆ : **ದಿನಾಂಕ :27.04.2020**

**ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ**
**ಮುಖ್ಯ ಕಾರ್ಯನಿರ್ವಾಹಕರುಗಳಿಗೆ**

ಮಾನ್ಯರೇ,

**ವಿಷಯ : ವರ್ಷಾಂತ್ಯದ ಆರ್ಥಿಕ/ಇತರೆ ಮಾಹಿತಿ ಕಳುಹಿಸುವ ಕುರಿತು.**

ಕೊರೋನಾ ವೈರಸ್ ಹರಡುವಿಕೆಯನ್ನು ಒಂದು ಆಕಸ್ಮಿಕ ಆಪತ್ತು ಎಂದು ಪರಿಗಣಿಸಿ ಸರ್ಕಾರದಿಂದ ಸಂಪೂರ್ಣ ಲಾಕ್‌ಡೌನ್ ಘೋಷಿಸಲಾಗಿದೆ. ಈ ಹಿನ್ನೆಲೆಯಲ್ಲಿ, ತಂತ್ರಜ್ಞಾನ ಆಧಾರಿತ ಸಂವಹನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಅಗತ್ಯವಿದೆ. ಸಂಯುಕ್ತ ಸಹಕಾರಿಯ ಅಗತ್ಯ ಕಾರ್ಯಚಟುವಟಿಕೆ ಹಾಗೂ ತರಬೇತಿಗಳು ಆನ್‌ಲೈನ್ ಮೂಲಕ ಜಾರಿಯಲ್ಲಿವೆ. ಪ್ರಸ್ತುತ, ವರ್ಷಾಂತ್ಯದ ಆರ್ಥಿಕ ಮಾಹಿತಿಗಳ ನಮೂನೆಗಳನ್ನು ಈ ಪತ್ರದ ಲಗತ್ತಿನೊಂದಿಗೆ ಕಳುಹಿಸಲಾಗುತ್ತಿದ್ದು ಭರ್ತಿ ಮಾಡಿ ಇ ಮೇಲ್ ಮೂಲಕ ಕಳುಹಿಸಲು ಕೋರಿದೆ.

1. **ಆರ್ಥಿಕ ಅಂಕಿ ಅಂಶಗಳನ್ನು ಕಳುಹಿಸುವುದು :** 31.03.2020ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷಾಂತ್ಯದ ತಮ್ಮ ಸಹಕಾರಿಯ ಅಂಕಿ ಅಂಶಗಳನ್ನು ಲಗತ್ತಿಸಿದ ನಮೂನೆಯ ಮಾದರಿಯಲ್ಲಿ ಮೇ 15ರೊಳಗಾಗಿ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ. ಈ ವಿವರಗಳನ್ನು ಕಳುಹಿಸಲು ಲೆಕ್ಕಪರಿಶೋಧನೆಗಾಗಿ ಕಾಯದೇ ಮೇ 15 ರೊಳಗಾಗಿಯೇ ಕಳುಹಿಸಲು ಸೂಚಿಸಲಾಗಿದೆ.
2. **ವಿವಿಧ ಮಾಹಿತಿಗಳನ್ನು ಸಲ್ಲಿಸುವುದು :** ತಮ್ಮ ಸಹಕಾರಿಯ ಸಾಮಾನ್ಯ ಮಾಹಿತಿಯನ್ನು, ಆಡಳಿತ ಮಂಡಲಿ ಸದಸ್ಯರ ವಿವರಗಳನ್ನು ಮತ್ತು ತಮ್ಮ ಸಹಕಾರಿಯ ಶಾಖೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸುತ್ತೋಲೆಯ ಜೊತೆ ಇರುವ ಮಾದರಿಯಲ್ಲಿ ಭರ್ತಿ ಮಾಡಿ ಕಳುಹಿಸಲು ಕೋರಿದೆ.
3. **ಸಾಮಾಜಿಕ ಕಾರ್ಯಚಟುವಟಿಕೆಗಳು :** ಸೌಹಾರ್ದ ಸಹಕಾರಿಗಳು ತಮ್ಮ ಹಣಕಾಸಿನ ವ್ಯವಹಾರಗಳ ನಡುವೆಯು ಮಾಡಿರಬಹುದಾದ – ರಕ್ತದಾನ ಶಿಬಿರ, ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆ, ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು, ನೆರೆ ಸಂತ್ರಸ್ಥರಿಗೆ ಪರಿಹಾರ, ಯೋಧರಿಗೆ ಸನ್ಮಾನಿಸುವುದು, ಸ್ವಂತ ಉದ್ಯೋಗಕ್ಕೆ ಪ್ರೋತ್ಸಾಹ, ಸ್ವಚ್ಛತಾ ಅಭಿಯಾನಗಳಂತಹ ಇನ್ನೂ ಅನೇಕ ಸಮಾಜಮುಖಿ ಕಾರ್ಯಗಳ ಕೇಂದ್ರೀಕೃತ ಮಾಹಿತಿಯನ್ನು ಹೊಂದಲು ಸಂಯುಕ್ತ ಸಹಕಾರಿಯು ಉದ್ದೇಶಿಸಿದ್ದು, ನಮೂನೆಯನ್ನು ತಮಗೆ ಕಳುಹಿಸಲಾಗುತ್ತಿದ್ದು ಭರ್ತಿ ಮಾಡಿ ಕಳುಹಿಸಲು ಕೋರಿದೆ. ಇದರೊಂದಿಗೆ, ತಮ್ಮ ಸಹಕಾರಿಗೆ ದೊರೆತಿರುವ ಪ್ರಶಸ್ತಿ/ಪುರಸ್ಕಾರಗಳು ಬಗ್ಗೆ ಕೂಡ ನೀಡಿರುವ ನಮೂನೆಯಲ್ಲಿ ಮಾಹಿತಿ ಕಳುಹಿಸಲು ಕೋರಿದೆ.

ಈ ಮೇಲ್ಕಂಡ ಮಾಹಿತಿಯನ್ನು ಈ ಪತ್ರದ ಲಗತ್ತಿನೊಂದಿಗೆ ಕಳುಹಿಸಿರುವ ಮಾದರಿಯಲ್ಲಿ ಭರ್ತಿ ಮಾಡಿ, ಸಂಯುಕ್ತ ಸಹಕಾರಿಯ yearendinfo@souharda.coop ಮೇಲ್ ಐಡಿಗೆ ಇ ಮೇಲ್ ಮೂಲಕ ಮೇ 15 ರೊಳಗಾಗಿ ಕಳುಹಿಸಲು ಕೋರಿದೆ.

**ವಂದನೆಗಳೊಂದಿಗೆ,**

(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕ**

**ವಿಶೇಷ ಗಮನಕ್ಕಾಗಿ :** ವರ್ಷಾಂತ್ಯದ ಆರ್ಥಿಕ ಮಾಹಿತಿ ಸುತ್ತೋಲೆ ಹಾಗೂ ನಮೂನೆಗಳ ಮುದ್ರಿತ ಪ್ರತಿಯನ್ನು ಸಂಯುಕ್ತ ಸಹಕಾರಿಯು ಈ ಬಾರಿ ಕಳುಹಿಸಿರುವುದಿಲ್ಲ, ಬದಲಾಗಿ ಇ ಮೇಲ್ ಹಾಗೂ ವಾಟ್ಸ್ ಅಪ್ ಮೂಲಕ ಕಳುಹಿಸಲಾಗಿದೆ, ಯಾವುದೇ ಸಹಕಾರಿಗೆ ಇವು ಲಭ್ಯವಾಗದಿದ್ದಲ್ಲಿ ತಮ್ಮ ವ್ಯಾಪ್ತಿಯ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರನ್ನು ಅಥವಾ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ. ಸಂಯುಕ್ತ ಸಹಕಾರಿ ವೆಬ್‌ಸೈಟ್ **www.souharda.coop** ನಲ್ಲಿ ಕೂಡ ಇವು ಲಭ್ಯವಿರುತ್ತವೆ.

ಸೌಹಾರ್ದ ಸಹಕಾರಿಗಳು ವರ್ಷಾಂತ್ಯದ ಆರ್ಥಿಕ ಮಾಹಿತಿ ಸುತ್ತೋಲೆ ಹಾಗೂ ನಮೂನೆಗಳನ್ನು ಭರ್ತಿ ಮಾಡಿ ಸಂಯುಕ್ತ ಸಹಕಾರಿಯ yearend-info@souharda.coop ಮೇಲ್ ಐಡಿಗೆ ಇ ಮೇಲ್ ಮೂಲಕ ಕಳುಹಿಸುವುದು. (**No Need send hard Copies**)

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಶಾಸನಬದ್ಧ ಸಹಕಾರಿ ಸಂಸ್ಥೆ**

**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

**www.souharda.coop, Ph: 080–23378375–80, Email:souharda@souharda.coop**

## ಮಾಹಿತಿ ಸುತ್ತೋಲೆ

ಇವರಿಗೆ : **ದಿನಾಂಕ: 02.05.2020**

**ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು**

**ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು**

**ಮಾನ್ಯರೇ,**

**ವಿಷಯ : ಆನ್‌ಲೈನ್ ಮೂಲಕ ಸಭೆ ಹಾಗೂ ತರಬೇತಿಗಳನ್ನು ನಡೆಸುವ ಕುರಿತು.**

ಕೊರೋನಾ ವೈರಸ್ ಹರಡುವಿಕೆ ಒಂದು ಆಕಸ್ಮಿಕ ಆಪತ್ತು ಎಂದು ಪರಿಗಣಿಸಿ ಸರ್ಕಾರದಿಂದ ಲಾಕ್‌ಡೌನ್ ಘೋಷಿಸಲಾಗಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಕನಿಷ್ಠ ಸಿಬ್ಬಂದಿ ಹಾಗೂ ಅಗತ್ಯ ಸುರಕ್ಷತಾ ಕ್ರಮಗಳೊಂದಿಗೆ ಬಹುತೇಕ ಸೌಹಾರ್ದ ಸಹಕಾರಿಗಳು ಸ್ಥಳೀಯ ಆಡಳಿತದ ಅನುಮತಿಗೊಳಪಟ್ಟು ಕಾರ್ಯನಿರ್ವಹಿಸುತ್ತಿವೆ. ಕೋರೋನಾ ವೈರಸ್ ಕಾರಣದಿಂದ ಘೋಷಿಸಿರುವ ಲಾಕ್‌ಡೌನ್ ಹಾಗೂ ಎಲ್ಲ ಪ್ರಯಾಣ, ಜಿಲ್ಲೆಯಿಂದ ಜಿಲ್ಲೆಗೆ ಓಡಾಟಗಳ ನಿರ್ಬಂಧ ಎಷ್ಟು ದಿನಗಳವರೆಗೆ ಮುಂದುವರೆಯುತ್ತದೆ ಎನ್ನುವ ಬಗ್ಗೆ ಅನಿಶ್ಚಿತತೆಯಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಮಾಹಿತಿಯನ್ನು ಸೌಹಾರ್ದ ಸಹಕಾರಿಗಳ ಗಮನಕ್ಕೆ ಈ ಮೂಲಕ ತರಲಾಗುತ್ತಿದೆ.

1. **ಆನ್‌ಲೈನ್ ತರಬೇತಿ :** ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗಾಗಿ ನಡೆಸಲಾಗುತ್ತಿದ್ದ ಆನ್‌ಲೈನ್ ಸಭೆ, ತರಬೇತಿಗಳನ್ನು ರಾಜ್ಯದ ಸೌಹಾರ್ದ ಸಹಕಾರಿಗಳಿಗೂ ವಿಸ್ತರಿಸಲು ಉದ್ದೇಶಿಸಿದೆ. ಈಗಾಗಲೇ ಕಲಬುರಗಿ, ಬಳ್ಳಾರಿ, ಬೆಳಗಾವಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳ ಆನ್‌ಲೈನ್ ಸಭೆಯನ್ನು ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಆನ್‌ಲೈನ್ ಸಭೆ ಹಾಗೂ ತರಬೇತಿಗಳನ್ನು ನಡೆಸಲು ಯೋಜನೆ ರೂಪಿಸಿದೆ. ಆದಕಾರಣ, ಸೌಹಾರ್ದ ಸಹಕಾರಿಗಳ ಆಸಕ್ತ ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ತಮ್ಮ ಹೆಸರು, ವಾಟ್ಸ್ ಅಪ್ ಮೊಬೈಲ್ ಸಂಖ್ಯೆ, ಸಹಕಾರಿಯ ಹೆಸರು, ತರಬೇತಿ ಅಪೇಕ್ಷಿಸುವ ವಿಷಯಗಳನ್ನು ತಮ್ಮ ಜಿಲ್ಲೆಯ ಸೌಹಾರ್ದ ಸಂಯೋಜಕರಿಗೆ ನೀಡುವ ಮೂಲಕ ಸಂಯುಕ್ತ ಸಹಕಾರಿಯ ಆನ್‌ಲೈನ್ ತರಬೇತಿ ಯೋಜನೆಗೆ ನೋಂದಾಯಿಸಿಕೊಳ್ಳಲು ಕೋರಿದೆ.

2. **ಆಡಳಿತ ಮಂಡಳಿ ಸಭೆ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ.30(1)ರಂತೆ ಸೌಹಾರ್ದ ಸಹಕಾರಿಗಳು ಕನಿಷ್ಠ ಪಕ್ಷ ಪ್ರತಿ ಎರಡು ತಿಂಗಳಲ್ಲಿ ಒಂದು ಆಡಳಿತ ಮಂಡಳಿ ಸಭೆ ನಡೆಸಬೇಕಿರುತ್ತದೆ. ಆದರೆ, ಲಾಕ್‌ಡೌನ್ ಕಾರಣದಿಂದ ಇದು ಸಾಧ್ಯವಾಗದ ಸಂದರ್ಭ ಉಂಟಾದಲ್ಲಿ, ಆನ್‌ಲೈನ್ ಅವಕಾಶದ ಮೂಲಕ ಅಂದರೆ, ಗೋ ಟೂ ಮೀಟಿಂಗ್, ಸಿಸ್ಕೋ ವೆಬ್‌ಎಕ್ಸ್, ಗೋ ಟೂ ವೆಬಿನಾರ್, ಬ್ಲ್ಯೂ ಜೀನ್ಸ್ ನಂತಹ ಸುರಕ್ಷಿತ ಆನ್‌ಲೈನ್ ಮೀಟಿಂಗ್ ಆಪ್ ಬಳಸಿ ತಮ್ಮ ಸಹಕಾರಿಯ ಆಡಳಿತ ಮಂಡಳಿ ಸಭೆಯನ್ನು ನಡೆಸಲು ಕ್ರಮವಿಡಬಹುದಾಗಿದೆ. ಇಂತಹ ಆಡಳಿತ ಮಂಡಳಿ ಸಭೆಯ ಪೂರ್ವದಲ್ಲಿ, ಸಭೆಯ ನೋಟೀಸನ್ನು ಸೌಹಾರ್ದ ಸಹಕಾರಿ ನಿಯಮ ಸಂಖ್ಯೆ:6ಇ(2)(ಎ)ರಂತೆ ಅಂಚೆ ಮತ್ತು ವಿದ್ಯುನ್ಮಾನ ಅಂಚೆ (ಇ ಮೇಲ್) ಮೂಲಕ ನಿಗದಿತ ಅವಧಿಯೊಳಗೆ ಆಡಳಿತ ಮಂಡಳಿ ಸದಸ್ಯರಿಗೆ ಕಳುಹಿಸುವುದು ಹಾಗೂ ಸಭೆ ಮುಗಿದ ನಂತರದಲ್ಲಿ, ಸಭೆಯ ನಡವಳಿಗಳನ್ನು ಆಡಳಿತ ಮಂಡಳಿ ಸದಸ್ಯರಿಗೆ ಕಳುಹಿಸಿ ಅನುಮೋದನೆ ಪಡೆಯುವುದು ಅಗತ್ಯವಾಗಿರುತ್ತದೆ. ಪ್ರಸ್ತುತ, ಲಾಕ್‌ಡೌನ್ ಕಾರಣದಿಂದ ಆಡಳಿತ ಮಂಡಳಿ ಸಭೆ ನಡೆಸಲು ಸಾಧ್ಯವಾಗದ ಅನಿವಾರ್ಯತೆಯಿದ್ದಲ್ಲಿ ಮಾತ್ರ ಸೌಹಾರ್ದ ಸಹಕಾರಿಗಳು ಆನ್‌ಲೈನ್ ಸಭೆಯ ಅವಕಾಶವನ್ನು ಬಳಸಬಹುದಾಗಿದೆ. ಹಾಗೂ ಮುಂದಿನ ದಿನಗಳಲ್ಲಿ, ಸಾಮಾನ್ಯ ಸಭೆಯ ಅನುಮೋದನೆ ಪಡೆದು ಉಪವಿಧಿ ತಿದ್ದುಪಡಿ ಮಾಡಿಕೊಳ್ಳುವ ಮೂಲಕ ಆನ್‌ಲೈನ್ ಅವಕಾಶಗಳಡಿಯಲ್ಲಿ ಆಡಳಿತ ಮಂಡಳಿ ಸಭೆ ನಡೆಸುವ ಪ್ರಾವಧಾನವನ್ನು ಹೊಂದಬಹುದಾಗಿದೆ.

ಈ ಮೇಲ್ಕಂಡ ಮಾಹಿತಿಯನ್ನು ಗಮನಿಸಿ ಅಗತ್ಯ ಕಾರ್ಯನಿರ್ವಹಣೆ ಮಾಡುವ ಮೂಲಕ ಹಾಗೂ ಸಂಯುಕ್ತ ಸಹಕಾರಿಯ ಆನ್‌ಲೈನ್ ತರಬೇತಿ ಯೋಜನೆಯ ಭಾಗವಾಗುವ ಮೂಲಕ ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಲು ಕೋರಿದೆ.

**ವಂದನೆಗಳೊಂದಿಗೆ,**

**(ಶರಣಗೌಡ ಜಿ. ಪಾಟೀಲ)**

**ವ್ಯವಸ್ಥಾಪಕ ನಿರ್ದೇಶಕ**

## ಸಹಕಾರ ಸಂಸ್ಥೆಗಳ ಪ್ರಸ್ತುತ ಆಡಳಿತ ಮಂಡಳಿಯಗಳ ಅಧಿಕಾರ ಮುಂದುವರಿಸುವ ಕುರಿತು ಸುತ್ತೋಲೆ

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ರಾಜ್ಯದಲ್ಲಿ ಕೊರೋನಾ ವೈರಸ್ ಹರಡುತ್ತಿರುವ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.

ಓದಲಾಗಿದೆ: ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಟಿಪ್ಪಣಿ ಸಂಖ್ಯೆ: ಸಸಂಶಾ(ಎಂ):16/2020, ದಿನಾಂಕ:19.03.2020.

****

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ನೋವೆಲ್ ಕೊರೋನಾ ವೈರಸ್ (ಕೋವಿಡ್-19)ಗೆ ಸಂಬಂಧಿಸಿದಂತೆ ಸಚಿವ ಸಂಪುಟವು ದಿನಾಂಕ:18.03.2020ರಂದು ತುರ್ತು ಸಭೆ ನಡೆಸಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದು, ಸಹಕಾರ ಇಲಾಖೆಗೆ ಸಂಬಂಧಿಸಿದಂತೆ "ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯಿತಿಗಳು ಮತ್ತು ಸಹಕಾರ ಸಂಘಗಳು/ಸಹಕಾರಿ ಬ್ಯಾಂಕುಗಳ ಚುನಾವಣೆಗಳನ್ನು ಮುಂದೂಡುವಂತೆ ಸಂಬಂಧಿದ ಚುನಾವಣಾ ಆಯೋಗಗಳನ್ನು ಕೋರುವುದು". ಈ ನಿರ್ಣಯಂತೆ ಅಗತ್ಯ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 32 ಸಿಎಲ್ಎಂ 2020, ಬೆಂಗಳೂರು, ದಿನಾಂಕ: 21.03.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳು/ಸಹಕಾರಿ ಬ್ಯಾಂಕುಗಳ ಚುನಾವಣೆಗಳನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ ಹಾಗೂ ಹಾಲಿ ಇರುವ ಆಡಳಿತ ಮಂಡಳಿಗಳು ಸಂಬಂಧಿಸಿದ ಸಹಕಾರ ಸಂಘಗಳು/ಸಹಕಾರಿ ಬ್ಯಾಂಕುಗಳಿಗೆ ಚುನಾವಣೆ ನಡೆದು ಹೊಸ ಆಡಳಿತ ಮಂಡಳಿಗಳು ಅಸ್ತಿತ್ವಕ್ಕೆ ಬಂದು ಅಧಿಕಾರ ಹಸ್ತಾಂತರಿಸುವವರೆಗೆ ಮುಂದುವರೆಯುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಎಂ. ಆಶಾ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

# ಲೆಕ್ಕ ಪರಿಶೋಧನೆ ಅವಧಿ ವಿಸ್ತರಣೆ ಹಾಗೂ ಕಲಂ 33 ರ ವಿಷಯಗಳ ಅವಧಿ ವಿಸ್ತರಣೆ ಕುರಿತು ರಾಜ್ಯ ಸರ್ಕಾರದ ಸುತ್ತೋಲೆ

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: COVID-19 ವೈರಾಣುದಿಂದ ದೇಶಾದ್ಯಂತ ಘೋಷಿಸಿದ ಸಂಪೂರ್ಣ ಲಾಕ್‌ಡೌನ್‌ನಿನ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 (ತಿದ್ದುಪಡಿ) ಅಧಿನಿಯಮ 2013 ರ ಕಲಂ 33 ರಲ್ಲಿ ಇರುವ ವಿವಿಧ ಉಪಕಲಂನ ಅವಧಿಯನ್ನು ವಿಸ್ತರಿಸುವ ಕುರಿತು.

ಓದಲಾಗಿದೆ: ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಪತ್ರ ಸಂಖ್ಯೆ: ಲೆಪಶಾ/ಇತರೆ/ಸಸಂಲೆಪನೆಅವಿ/02/2020–21, ದಿನಾಂಕ:08.04.2020.

****

**ಪ್ರಸ್ತಾವನೆ:**

ಮೇಲೆ ಓದಲಾದ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಪತ್ರದಲ್ಲಿ COVID 19 ವಿಷಾಣುದಿಂದ ಸಂಕಷ್ಟ ಉದ್ಭವಿಸಿದ್ದು, ಇದು ಒಂದು ಆಕಸ್ಮಿಕ ಆಪತ್ತುಎಂದು ಪರಿಗಣಿಸಿ ಸದರಿ ವಿಷಾಣುವಿನ ನಿರ್ಮೂಲನೆಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ದೇಶಾದ್ಯಂತ ಸಂಪೂರ್ಣ ಲಾಕ್‌ಡೌನ್ ಘೋಷಿಸಲಾಗಿದೆ. ಇದಕ್ಕೆ ಅನುಗುಣವಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 (ತಿದ್ದುಪಡಿ) ಅಧಿನಿಯಮ 2013 ರ ಕಲಂ 33ರಲ್ಲಿ ಇರುವ ವಿವಿಧ ಉಪ ಕಲಂನಲ್ಲಿ ನಿಗದಿಪಡಿಸಿದ ಅವಧಿಯನ್ನು ವಿಸ್ತರಿಸುವುದು ಸೂಕ್ತ ಎಂದು ತಿಳಿಸಿ, ಈ ಕೆಳಕಂಡಂತೆ ಅವಧಿ ವಿಸ್ತರಣೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1) ಕರ್ನಾಟಕ ಸೌಹಾರ್ದ ಸಹಕಾರಿತಿದ್ದುಪಡಿಕಾಯ್ದೆ 2013 ರ ಕಲಂ 33(7) ರನ್ವಯಆರ್ಥಿಕ ವರ್ಷ ಮುಗಿದ 30 ದಿನಗಳ ಒಳಗಾಗಿ ಆ ಆರ್ಥಿಕ ವರ್ಷದಆರ್ಥಿಕ ತ:ಖ್ತೆಗಳನ್ನು ಸಿದ್ಧಪಡಿಸಿ ಲೆಕ್ಕ ಪರಿಶೋಧನೆಗೆ ಹಾಜರಪಡಿಸುವುದುಕಡ್ಡಾಯವಾಗಿದ್ದು, ಸದರಿ 30 ದಿನಗಳ ಅವಧಿಯನ್ನು ಪ್ರಸಕ್ತ ಸಾಲಿಗೆ ಜೂನ್ 30 ರ ಒಳಗಾಗಿ ಸಲ್ಲಿಸಲು ಸಂಘಸಂಸ್ಥೆಗಳಿಗೆ ಅವಕಾಶ ನೀಡುವ ಬಗ್ಗೆ.
2) ಕರ್ನಾಟಕ ಸೌಹಾರ್ದ ಸಹಕಾರಿತಿದ್ದುಪಡಿಕಾಯ್ದೆ 2013 ರ ಕಲಂ 33(1) ರನ್ವಯ ಪ್ರತಿಯೊಂದು ಸಹಕಾರ ಸಂಘವು ತನ್ನ ಲೆಕ್ಕ ಪುಸ್ತಕಗಳ ಲೆಕ್ಕಪರಿಶೋಧನೆಯನ್ನು ಪ್ರತಿ ವರ್ಷ 1 ನೇ ಸೆಪ್ಟೆಂಬರ್‌ಒಳಗಾಗಿ ಕಡ್ಡಾಯವಾಗಿ ಮಾಡಿಸಕೊಳ್ಳಬೇಕಾಗಿದ್ದು, ಆದರೇ ಈ ಮೇಲಿನಂತೆ ಅವಧಿಯನ್ನು ಜೂನ್ 30 ರವರೆಗೆ ವಿಸ್ತರಿಸಬಹುದಾಗಿದ್ದರಿಂದ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವ ಅವಧಿಯು ಸಹ ಸೆಪ್ಟೆಂಬರ್1 ರಿಂದ ನವೆಂಬರ್ 1 ರವರೆಗೆ ವಿಸ್ತರಿಸುವ ಬಗ್ಗೆ.
3) ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಕಾಯ್ದೆ 2013 ರ ಕಲಂ 33(8) ರನ್ವಯ ಲೆಕ್ಕ ಪರಿಶೋಧಕರು ಸಂಘಕ್ಕೆ, ಸಹಕಾರ ಸಂಘಗಳ ನಿಬಂಧಕರಿಗೆ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಹಾಗೂ ಆರ್ಥಿಕ ಸಹಾಯ ಒಗಗಿಸುವ ಸಂಸ್ಥೆಗಳಿಗೆ ಲೆಕ್ಕ ಪರಿಶೋಧನಾ ವರದಿಯನ್ನು 1ನೇ ಸೆಪ್ಟೆಂಬರ್ ಒಳಗಾಗಿ ಸಲ್ಲಿಸಬೇಕಾಗಿದ್ದು, ಸದರಿ ಅವಧಿಯು ಸಹ 1 ನೇ ನವೆಂಬರ್ ವರೆಗೆ ವಿಸ್ತರಿಸುವ ಬಗ್ಗೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದ ಕಲಂ 70ರಂತೆ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉಂಟಾದರೆ ಸರ್ಕಾರವು ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಲು ಅಗತ್ಯವೆಂದು ಅಥವಾ ಯುಕ್ತವೆಂದು ಕಂಡುಬರುವ ಉಪಬಂಧಗಳನ್ನು ಮಾಡಬಹುದು. ತೊಂದರೆಗಳನ್ನು ನಿವಾರಿಸುವ ಅಧಿಕಾರವು ರಾಜ್ಯ ಸರ್ಕಾರಕ್ಕೆ ಇರುವುದರಿಂದ ಮೇಲೆ ವಿವರಿಸಿರುವ ಕಾರಣಗಳಿಂದಾಗಿ ಪ್ರಸಕ್ತ ವರ್ಷದಲ್ಲಿ ಆರ್ಥಿಕ ತ:ಖ್ತೆಗಳನ್ನು ಸಿದ್ಧಪಡಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವ ಅವಧಿ, ಲೆಕ್ಕಪರಿಶೋಧನೆಯನ್ನು ಮಾಡಿಸಿಕೊಳ್ಳಬೇಕಾದ ಅವಧಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸುವ ದಿನಾಂಕಗಳನ್ನು ವಿಸ್ತರಿಸುವ ಕುರಿತು ಹಾಗೂ ಅದಕ್ಕನುಗುಣವಾಗಿ ವಾರ್ಷಿಕ ಮಹಾಸಭೆ ಜರುಗಿಸುವ ದಿನಾಂಕಗಳನ್ನು ವಿಸ್ತರಿಸಲು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 34 ಸಿಎಲ್‌ಎಂ 2020, ಬೆಂಗಳೂರು, ದಿನಾಂಕ: 17.04.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 (ತಿದ್ದುಪಡಿ) ಅಧಿನಿಯಮ 2013 ರ ಕಲಂ 33ರಲ್ಲಿ ಇರುವ ವಿವಿಧ ಉಪ ಕಲಂನಲ್ಲಿ ನಿಗದಿಪಡಿಸಿದ ಅವಧಿಯನ್ನು ವಿಸ್ತರಿಸುವುದು ಸೂಕ್ತ ಎಂದು ತಿಳಿಸಿ, ಈ ಕೆಳಕಂಡಂತೆ ವಿಸ್ತರಿಸಿ ಆದೇಶಿಸಿದೆ.

1) ಕರ್ನಾಟಕ ಸೌಹಾರ್ದ ಸಹಕಾರಿತಿದ್ದುಪಡಿಕಾಯ್ದೆ 2013 ರ ಕಲಂ 33(7) ರನ್ವಯಆರ್ಥಿಕ ವರ್ಷ ಮುಗಿದ 30 ದಿನಗಳ ಒಳಗಾಗಿ ಆ ಆರ್ಥಿಕ ವರ್ಷದ ಆರ್ಥಿಕ ತ:ಖ್ತೆಗಳನ್ನು ಸಿದ್ಧಪಡಿಸಿ ಲೆಕ್ಕ ಪರಿಶೋಧನೆಗೆ ಹಾಜರಪಡಿಸುವುದು ಕಡ್ಡಾಯವಾಗಿದ್ದು, ಸದರಿ 30 ದಿನಗಳ ಅವಧಿಯನ್ನು ಪ್ರಸಕ್ತ ಸಾಲಿಗೆ ಜೂನ್ 30 ರ ಒಳಗಾಗಿ ಸಲ್ಲಿಸಲು ಸಂಘ ಸಂಸ್ಥೆಗಳಿಗೆ ಅವಕಾಶ ನೀಡಲಾಗಿದೆ.

2) ಕರ್ನಾಟಕ ಸೌಹಾರ್ದ ಸಹಕಾರಿತಿದ್ದುಪಡಿಕಾಯ್ದೆ 2013 ರ ಕಲಂ 33(1) ರನ್ವಯ ಪ್ರತಿಯೊಂದು ಸಹಕಾರ ಸಂಘವು ತನ್ನ ಲೆಕ್ಕ ಪುಸ್ತಕಗಳ ಲೆಕ್ಕಪರಿಶೋಧನೆಯನ್ನು ಪ್ರತಿ ವರ್ಷ 1 ನೇ ಸೆಪ್ಟೆಂಬರ್‌ಒಳಗಾಗಿ ಕಡ್ಡಾಯವಾಗಿ ಮಾಡಿಸಕೊಳ್ಳಬೇಕಾಗಿದ್ದು, ಆದರೇ ಈ ಮೇಲಿನಂತೆ ಅವಧಿಯನ್ನು ಜೂನ್ 30 ರವರೆಗೆ ವಿಸ್ತರಿಸಬಹುದಾಗಿದ್ದರಿಂದ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವ ಅವಧಿಯು ಸಹ ಸೆಪ್ಟೆಂಬರ್1 ರಿಂದ ನವೆಂಬರ್ 1 ರವರೆಗೆ ವಿಸ್ತರಿಸಲಾಗಿದೆ.

3) ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಕಾಯ್ದೆ 2013 ರ ಕಲಂ 33(8) ರನ್ವಯ ಲೆಕ್ಕ ಪರಿಶೋಧಕರು ಸಂಘಕ್ಕೆ, ಸಹಕಾರ ಸಂಘಗಳ ನಿಬಂಧಕರಿಗೆ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಹಾಗೂ ಆರ್ಥಿಕ ಸಹಾಯ ಒಗಗಿಸುವ ಸಂಸ್ಥೆಗಳಿಗೆ ಲೆಕ್ಕ ಪರಿಶೋಧನಾ ವರದಿಯನ್ನು 1ನೇ ಸೆಪ್ಟೆಂಬರ್ ಒಳಗಾಗಿ ಸಲ್ಲಿಸಬೇಕಾಗಿದ್ದು, ಸದರಿ ಅವಧಿಯು ಸಹ 1 ನೇ ನವೆಂಬರ್ ವರೆಗೆ ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಎಂ. ಆಶಾ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಇವರಿಗೆ :

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 25 ಪ್ರತಿಗಳನ್ನು ಒದಗಿಸಲು ಕೋರಿದೆ.

ಪ್ರತಿಗಳು :

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.
3. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಬಸವನಗುಡಿ, ಬೆಂಗಳೂರು.
4. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# ಕೋರೊನಾ ವೈರಸ್ (ಕೋವಿಡ್-19) ಲಾಕ್‌ಡೌನ್ ಸಮಯದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯ ಚಟುವಟಿಕೆಗಳು

## ಬಡವರು, ಕೂಲಿ ಕಾರ್ಮಿಕರಿಗೆ ನೆರವಾದ ಹೆಚ್. ವಿ. ರಾಜೀವ್ ಸ್ನೇಹ ಬಳಗ



**ಮೈಸೂರು :** ಲಾಕ್‌ಡೌನ್‌ನಿಂದಾಗಿ ಹಸಿವಿನಿಂದ ಬಳಲುತ್ತಿರುವ ಜೀವಗಳಿಗೆ ಹೆಚ್. ವಿ. ರಾಜೀವ್ ಸ್ನೇಹ ಬಳಗ ಊಟ ನೀಡುವ ಮೂಲಕ ಮಾನವೀಯ ಮೌಲ್ಯವನ್ನು ಎತ್ತಿ ಹಿಡಿಯುತ್ತಿದೆ. ವಿಶ್ವವನ್ನೇ ತಲ್ಲಣಗೊಳಿಸಿರುವ ಕರೊನಾದಿಂದ ಬಡವರು, ನಿರ್ಗತಕರು, ಕೂಲಿ ಕಾರ್ಮಿಕರು ದಿನದ ಒಪ್ಪತ್ತಿನ ಊಟಕ್ಕೂ ಪರಿತಪಿಸುತ್ತಿದ್ದರು. ಹಲವಾರು ವರ್ಷಗಳಿಂದ ಜನಸೇವೆಯೇ ಜನಾರ್ಧನನ ಸೇವೆ, ಸಮಾಜ ಸೇವೆ ದೇವರ ಪೂಜೆಗಿಂತ ಶ್ರೇಷ್ಠ ಎಂಬ ಧ್ಯೇಯದೊಂದಿಗೆ ಸಮಾಜ ಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಈ ಬಳಗದ ಸದಸ್ಯರು ಹಸಿವಿನ ಸಂಕಷ್ಟದಲ್ಲಿರುವ ನಿರ್ಗತಕರಿಗೆ, ಅಮಾಯಕರಿಗೆ ಹಾಗೂ ಮುಗ್ಧ ಜೀವಗಳಿಗೆ ಪ್ರತಿ ದಿನ ಊಟ ನೀಡುವುದರೊಂದಿಗೆ ತಮ್ಮ ಸಾಮಾಜಿಕ ಕಳಕಳಿಯನ್ನು ಇಮ್ಮಡಿಗೊಳಿಸಿದ್ದಾರೆ. ಕರೋನಾ ಕಪ್ಪು ನೆರಳು ರಾಜ್ಯಕ್ಕೆ ಕಾಲಿಡುತ್ತಿದ್ದಂತೆ ರಾಜ್ಯ ತಕ್ಷಣ ಲಾಕ್‌ಡೌನ್ ಆಗಿದ್ದರಿಂದ ಕೂಲಿ, ಇತರ ಕಾರ್ಯ ನಿಮಿತ್ತ ಬೇರೆ ಊರುಗಳಿಂದ ಬಂದಿದ್ದ ಬಹುತೇಕ ಜನರು ಅಲ್ಲಲ್ಲಿ ಸ್ಥಗಿತಗೊಳ್ಳಬೇಕಾಯಿತು. ಈ ಹಿನ್ನಲೆಯಲ್ಲಿ ಸಂಕಷ್ಟಕ್ಕೆ ಎದುರಿಸುತ್ತಿರುವವರಿಗೆ ಸಹಾಯ ಮಾಡುವಂತೆ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ನೀಡಿದ ಕರೆಗೆ ಪ್ರೇರಣೆಗೊಂಡ ಸಮಾಜ ಸೇವಕ. ಜಿಜೆಪಿ ಮುಖಂಡ ಹಾಗೂ ಸಂಯುಕ್ತ ಸಹಕಾರಿ ಮಾಜಿ ಅಧ್ಯಕ್ಷರಾದ ಹಾಗೂ ನಿರ್ದೇಶಕರಾದ ಹೆಚ್. ವಿ. ರಾಜೀವ್ ಪ್ರತಿದಿನ ಒಂದು ಸಾವಿರ ಮಂದಿಗೆ ಎರಡು ಹೊತ್ತು ಊಟ ನೀಡುವ ಯೋಜನೆ ರೂಪಿಸಿ ಮಾ.25 ರಂದು ಆಹಾರ ಸರಬರಾಜು ಮಾಡುವ ಕಾರ್ಯಕ್ಕೆ ಚಾಲನೆ ನೀಡಿದರು. ಬಳಿಕ ಸ್ನೇಹಿತರು, ಹಿತೈಷಿಗಳು ಹಾಗೂ ಅಭಿಮಾನಿಗಳು ನೀಡಿದ ಸಹಕಾರದೊಂದಿಗೆ ಪ್ರತಿದಿನ ಮೂರು ಸಾವಿರ ಜನರಿಗೆ ಊಟ ಸಿದ್ದಪಡಿಸಿ ಮಹಾನಗರ ಪಾಲಿಕೆ, ಆರ್‌ಎಸ್‌ಎಸ್. ಜಿಜೆಪಿ ಬಳಗ ಹಾಗೂ ಕೆಲ ಸಂಘ ಸಂಸ್ಥೆಗಳ ಮೂಲಕ ಮೈಸೂರಿನ 18 ಸ್ವಾಂತ್ವನ ಕೇಂದ್ರಗಳಿಗೆ ಪ್ರತಿದಿನ ವಿತರಿಸಲಾಗುತ್ತಿದೆ. ಆ ಆಹಾರ ವಿತರಣೆ ಕಾರ್ಯ ಮೇ 3 ರವರೆಗೂ ಮುಂದುವರೆಸಲಾಗಿದೆ.

### ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಿಂದ ಮೆಚ್ಚುಗೆ


ಹೆಚ್. ವಿ ರಾಜೀವ್ ನೇತೃತ್ವದಲ್ಲಿ ಸಿದ್ಧವಾಗುತ್ತಿರುವ ಗುಣಮಟ್ಟದ ಆಹಾರ, ನೀಡುತ್ತಿರುವ ಪ್ರಮಾಣ ಅಡುಗೆ ತಯಾರಿಕೆಯಲ್ಲಿ ತೆಗೆದುಕೊಂಡಿರುವ ಮುನ್ನೆಚ್ಚರಿಕೆ ಕ್ರಮ ಸೇರಿದಂತೆ ಇವರ ಸೇವೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಜಿಲ್ಲಾಡಳಿತ ಹಾಗೂ ಕೋವಿಡ್–19 ವಿಶೇಷ ಅಧಿಕಾರಿ ಹರ್ಷಗುಪ್ತಾ ಸೇರಿದಂತೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ

### ಧನಕರುಗಳಿಗೆ ಮೇವು ವಿತರಣೆ ಹಾಗೂ ಪರೀಕ್ಷೆಗೆ ತರಬೇತಿ

ಸ್ವಚ್ಚ ಮೈಸೂರು, ಮೈಸೂರಿನಲ್ಲಿ ಲಕ್ಷ ವೃಕ್ಷ ಅಭಿಯಾನ, ಅತಿವೃಷ್ಠಿ ಅನಾವೃಷ್ಠಿ ಸಂಕಷ್ಟಕ್ಕೀಡಾಗಿದ್ದ ಕುಟುಂಟಗಳಿಗೆ ಆರ್ಥಿಕ ಆಹಾರ ಪದಾರ್ಥಗಳ ನೆರವಿನ ಜತೆಗೆ ಧನಕರುಗಳಿಗೆ ಮೇವು ನೀಡಿದ್ದರು. ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ, ಪೌರ ಕಾರ್ಮಿಕರಿಗೆ ಸನ್ಮಾನ, ಸಹಕಾರ ಕ್ಷೇತ್ರದಲ್ಲಿ ಅರ್ಹರಿಗೆ ಸಹಾಯ ಮಾಡುತ್ತ ಪ್ರಶಂಸೆಗೆ ಪಾತ್ರವಾಗಿದ್ದ ಈ ಬಳಗ ಕರೋನಾದಿಂದ ಹಸಿವಿನ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ಅನ್ನ ನೀಡುವ ಮೂಲಕ ತನ್ನ ಘನತೆ ಗೌರವವನ್ನು ಹೆಚ್ಚಿಸಿಕೊಂಡಿದ್ದಾರೆ.



**ಚಿತ್ರದುರ್ಗ:** ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಸಹಕಾರಿ ವತಿಯಿಂದ ಸಹಕಾರಿಯ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಆರ್ ಲಕ್ಷ್ಮೀಕಾಂತ ರೆಡ್ಡಿ ಕೋವಿಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ. 1 ಲಕ್ಷ ಗಳನ್ನು ಸಂಯುಕ್ತ ಸಹಕಾರಿಗೆ ನೀಡಿದರು.



**ಬೋರಗಾಂವ:** ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರ ನಿ., ಬೋರಗಾಂವ ಸಹಕಾರಿಯ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ರಾವಸಾಹೇಬ್ ಪಾಟೀಲ ಕೋವಿಡ್–19 ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ. 1 ಲಕ್ಷ ಗಳನ್ನು ಸಂಯುಕ್ತ ಸಹಕಾರಿಗೆ ನೀಡಿದರು.



**ಉಡುಪಿ:** ಸ್ವರ್ಣ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ. ಹಾಗೂ ಫಾಟ್ಗೆ ಕರ್ಕೇರ ಪವರ್ ಇಂಡಸ್ಟ್ರೀಸ್ ವತಿಯಿಂದ ಸಹಕಾರಿಯ 4 ಶಾಖೆಗಳ ಸಿಬ್ಬಂದಿಗಳು, ನಿತ್ಯನಿಧಿ ಸಂಗ್ರಾಹಕರು, ಚಿನ್ನಾಭರಣ ಮೌಲ್ಯಮಾಪಕರು ಹಾಗೂ ಸ್ವಚ್ಛತೆಯ ಕೆಲಸವನ್ನು ನಿರ್ವಹಿಸುತ್ತಿದ್ದ ನೌಕರರಿಗೆ ಕೊರೋನ ವೈರಸ್ (ಕೋವಿಡ್-19) ಹಿನ್ನಲೆಯಲ್ಲಿ ದಿನನಿತ್ಯದ ಆಹಾರ ಸಾಮಗ್ರಿಗಳನ್ನು ವಿತರಿಸಲಾಯಿತು. ಹೆಜಮಾಡಿ ಮತ್ತು ಪಡುಬಿದ್ರಿ ಭಾಗದ ಬಡ ಕುಟುಂಬಗಳನ್ನು ಗುರುತಿಸಿ ಮಾತ್ರವಲ್ಲ ಪಡುಬಿದ್ರಿಯ ಒಂದು ದ್ವೀಪಕ್ಕೆ ತೆರಳಿ ಅಲ್ಲಿಯೂ ಕೂಡ ದಿನನಿತ್ಯದ ಆಹಾರ ಸಾಮಗ್ರಿಗಳನ್ನು ವಿತರಿಸಲಾಯಿತು. ಅಲ್ಲದೆ ವಿಶ್ವಾದ್ಯಂತ ಹಬ್ಬಿರುವ ವೈರಾಣು ಕೋವಿಡ್ 19 ವಿರುದ್ಧ ಹಗಲಿರುಳು ಶ್ರಮಿಸುತ್ತಿರುವ ಈ ಭಾಗದ ಆಶಾ ಕಾರ್ಯಕರ್ತೆಯರ ಸೇವೆಯನ್ನು ಗುರುತಿಸಿ ಆಶಾ ಕಾರ್ಯಕರ್ತೆಯರಿಗೂ ಆಹಾರದ ಕಿಟ್‌ನ್ನು ನೀಡಿ ಗೌರವಿಸಲಾಯಿತು.



**ದೇವದುರ್ಗ:** ಯಕ್ಷ ಪತ್ತಿನ ಸೌಹಾರ್ದ ಸಹಕಾರಿ ನಿ ದೇವದುರ್ಗ ಸದರಿ ಸಹಕಾರಿಯಿಂದ ಕೋವೀಡ್-19 ಲಾಕ್‌ಡೌನ್ ನಿಂದ ಬಡ ರೋಗಿಗಳಿಗೆ ಊಟ, ನೀರು ಮತ್ತು ಹಣ್ಣುಗಳನ್ನು ವಿತರಣೆ ಮಾಡಲಾಯಿತು.



**ರಾಯಚೂರು:** ನಾಗಲಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಲೋನ್ ಪಡೆದಿರುವ ಆರ್ಥಿಕ ದುರ್ಬಲತೆ ಇರುವ ಸದಸ್ಯರನ್ನು ಗುರುತಿಸಿ 400 ಆಹಾರ ಪಡಿತರ ಕಿಟ್‌ಗಳನ್ನು ವಿತರಿಸಲಾಯಿತು.



**ಮೈಸೂರು:** ಶ್ರೀ ಗುರುಮಲ್ಲೇಶ್ವರ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತ ನಂಜನಗೂಡು ವತಿಯಿಂದ ಮಾಸ್ಕ್‌ಗಳನ್ನು ತಯಾರಿಸಿ ಶಾಸಕರು ಮತ್ತು ತಹಸಿಲ್ದಾರ್ ರವರಿಗೆ ಹಸ್ತಾಂತರಿಸಲಾಯಿತು.


VEERARUDRA V U S S
NI SASALATTI
* DUPLICATE RECEIPT *
AGENT NO. : 000001
RECEIPT DATE : 15/04/20 10:18
RECEIPT NO. : 29314
ACCOUNT NO. : 1540
ACCOUNT NAME : [redacted]
PRV. BAL : ₹ 10500
DEP. AMT : ₹ 100
CUR. BAL : ₹ 10600
ACC. OPN DT : 02/12/19
FIGHT AGAINST
CORONA VIRUS
STAY HOME STAY SAFE

**ಸಸಾಲಟ್ಟಿ :** ಶ್ರೀ ವೀರರುದ್ರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಸಸಾಲಟ್ಟಿ ಸದರಿ ಸಹಕಾರಿಯಲ್ಲಿ ಪಿಗ್ಮಿ ಏಜೆಂಟರರಿಂದ ಕೋರೋಣ ವೈರಸ್ ಬಗ್ಗೆ ಪಿಗ್ಮಿ ಗ್ರಾಹಕರಿಗೆ ಪಿಗ್ಮಿ ರಸೀದಿ ಮೂಲಕ ಜಾಗೃತಿ ಮೂಡಿಸಲಾಯಿತು.



**ದಾವಣಗೆರೆ :** ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಇದರ ವತಿಯಿಂದ ಸಹಕಾರಿಯ ಕಚೇರಿ ಆವರಣದಲ್ಲಿ, ಸಹಕಾರಿಯ 50 ಬಡ ಸದಸ್ಯರಿಗೆ ಆಹಾರದ ಕಿಟ್ ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಉಡುಪಿ:** ಶ್ರೀ ಸಂಕಮ್ಮತಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಬಾರ್ಕೂರು ವತಿಯಿಂದ ಕೋವಿಡ್–19 ಲಾಕ್‌ಡೌನ್ ಸಂದರ್ಭದಲ್ಲಿ ಪೋಲೀಸರು, ವೈದ್ಯರು, ಶುಶ್ರೂಷಕಿಯರು, ವೈದ್ಯಕೀಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಕೊರೊನ ವೈರಸ್ ಹರಡದಂತೆ ಯಶಸ್ವಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿರುವುದನ್ನು ಗಮನಿಸಿ ಸಹಕಾರಿಯ ಮಹಾಪೋಷಕ ಶ್ರೀ ವಿಠ್ಠಲ ಎಸ್ ಹೆಗ್ಡೆ ಯವರ ಮಾರ್ಗದರ್ಶನದಂತೆ ಸಹಕಾರಿಯ ಅಧ್ಯಕ್ಷ ಶ್ರೀ ಸುಧಾಕರ ಶೆಟ್ಟಿ ಮೈರ್ಮಾಡಿ (ಉಡುಪಿ ಜಿಲ್ಲಾ ಪಂಚಾಯತ್ ಸದಸ್ಯ) ನೈತಿಕ ಬೆಂಬಲ ಸೂಚಿಸಿ ಬ್ರಹ್ಮಾವರ ಆರಕ್ಷಕ ಠಾಣೆ, ಬ್ರಹ್ಮಾವರ ತಹಶೀಲ್ದಾರ್ ಕಚೇರಿ, ಬ್ರಹ್ಮಾವರ ಸಮುದಾಯ ಆರೋಗ್ಯ ಕೇಂದ್ರ, ಬಾರ್ಕೂರು, ಯಡ್ತಾಡಿ, ಮಂದಾರ್ತಿ, ಕೊಕ್ಕರ್ಣೆ, ಕರ್ಜೆ, ಪೇತ್ರಿ, ಕುಕ್ಕೆ ಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಡಳಿತ ಮಂಡಳಿಯ ನಿರ್ಣಯದಂತೆ ಮಾಸ್ಕ್, ಸೋಪ್ ಸ್ಯಾನಿಟೈಸರನ್ನು ವಿತರಿಸಿದರು.



**ದಾದಬಾನಹಟ್ಟಿ:** ಶ್ರೀ ಸದ್ಗುರು ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ದಾದಬಾನಹಟ್ಟಿ ವತಿಯಿಂದ ಕೊರೊನಾ ವೈರಸ್ ದಿಂದ ಲಾಕ್ ಡೌನ್ ಆಗಿರುವುದರಿಂದ ಸುಮಾರು ನೂರು ಜನ ನಿರಾಶ್ರಿತ ಮತ್ತು ಕೂಲಿ ಕಾರ್ಮಿಕ–ರಿಗೆ ಆಹಾರ ಪದಾರ್ಥಗಳ ಕಿಟ್ ಗಳನ್ನು ವಿತರಣೆ ಮಾಡಿರುತ್ತಾರೆ.



**ಬೆಳಗಾವಿ:** ಮಹಾವೀರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಗೋಕಾಕ, ಬೆಳಗಾವಿ ವತಿಯಿಂದ ಆಹಾರ ಪದಾರ್ಥಗಳ ಪೊಟ್ಟಣವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಓಂಕಾರಮಲ ಬ.ರಾಠೋಡ, ಸಹಕಾರಿಯ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೊಪ್ಪಳ:** ಶಾಂಭವಿ ಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಕಾತರಕಿ ರಸ್ತೆ, ತೇರಾಪಂಥಿ ಭವನ ಹತ್ತಿರ ಕೊಪ್ಪಳ. ನಗರದಲ್ಲಿ ಕೊರೊನಾ ಭೀತಿಯ ಹಿನ್ನೆಲೆಯಲ್ಲಿ ಜನರಿಗೆ ಜಾಗೃತಿ ಮೂಡಿಸುವುದರ ಜೊತೆಗೆ ಪೋಲಿಸ್ ಅಧಿಕಾರಿಗಳಿಗೆ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಮತ್ತು ನಿರ್ಗತಿಕರಿಗೆ. ಮಾನಸಿಕ ಅಸ್ವಸ್ಥರಿಗೆ ಹಾಗೂ ಜಿಲ್ಲಾ ಆಸ್ಪತ್ರೆಯ ಹೊರ ರೋಗಿಗಳಿಗೆ ದಿನಾಂಕ 26–03–2020 ರಿಂದ ಸತತವಾಗಿ ಊಟದ ವ್ಯವಸ್ಥೆಯನ್ನು ಮಾಡಲಾಯಿತು.



**ಮಡಿಕೇರಿ:** ಕೊಡಗು ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಮಡಿಕೇರಿ ಸದರಿ ಸಹಕಾರಿ ವತಿಯಿಂದ ಕೋವಿಡ್–19 ಕೊರೋನಾ ವೈರಸ್ ಲಾಕ್‌ಡೌನ್ ಸಮಯದಲ್ಲಿ ಸಮಾಜ ಸೇವೆ ಸಲ್ಲಿಸಿರುವ ಸಾಮಾಜಿಕ ಕಾರ್ಯಕರ್ತರಿಗೆ ಮಧ್ಯಾಹ್ನ ಊಟದ ವ್ಯವಸ್ಥೆಯನ್ನು ಮಾಡಲಾಯಿತು.



**ಮೂಡುಬಿದಿರೆ:** ಮೂಡುಬಿದಿರೆ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ವಿದ್ಯಾರಮೇಶ ಭಟ್ ರವರು ಮೂಡುಬಿದಿರೆಯಲ್ಲಿನ ಸಮಾಜ ಮಂದಿರದಲ್ಲಿ ನೆಲೆಸಿದ ಹೊರರಾಜ್ಯದ ವಲಸೆ ಕಾರ್ಮಿಕರಿಗೆ ಊಟದ ವ್ಯವಸ್ಥೆಯನ್ನು ಮಾಡಿದರು.



**ಬೆಳಗಾವಿ:** ಶ್ರೀ ದುರದುಂಡೇಶ್ವರ ಅರ್ಬನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ನಿಡಸೋಶಿ, ಹುಕ್ಕೇರಿ ಸಹಕಾರಿ ವತಿಯಿಂದ ಸಂಕೇಶ್ವರ ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೋಲಿಸ್ ಸಿಬ್ಬಂದಿಗಳಿಗೆ ಆಹಾರವನ್ನು ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ನಿಡಸೋಸಿ ಸಿದ್ಧಸಂಸ್ಥಾನ ಮಠದ ಜಗದ್ಗುರು ಪಂಚಮ ಶ್ರೀ ಶಿವಲಿಂಗೇಶ್ವರ ಸ್ವಾಮೀಜಿಗಳು ಸಹಕಾರಿಯ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



**ಉಡುಪಿ :** ಭಾರತ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಉಡುಪಿ ಸದರಿ ಸಹಕಾರಿ ವತಿಯಿಂದ ಕೊವಿಡ್–19 ಕೊರೊನಾ ವೈರಸ್ ಲಾಕ್‌ಡೌನ್ ಸಮಯದಲ್ಲಿ ಮೂಳೂರಿನ ಪರಿಸರದ ತೀರಾ ಬಡ ಕುಟುಂಬದ ಕಾರ್ಮಿಕರಿಗೆ ಆಹಾರ ಸಾಮಾಗ್ರಿಗಳನ್ನು ಸುಮಾರು 25 ಮಂದಿಗೆ ವಿತರಿಸಲಾಯಿತು.



**ದಕ್ಷಿಣ ಕನ್ನಡ:** ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಮೂಡುಬಿದಿರೆ ಸದರಿ ಸಹಕಾರಿ ವತಿಯಿಂದ ಕೋವೀಡ್–19 ಶಾಸಕರ ಪರಿಹಾರ ನಿಧಿಗೆ ಧನಸಹಾಯ ಮಾಡಲಾಯಿತು.



**ಮಂಗಳೂರು:** ಸೌಂದರ್ಯ ಓಂ ಸಾಯಿ ಸೌಹಾರ್ದ ಸಹಕಾರಿ ನಿ., ಸದರಿ ಸಹಕಾರಿ ವತಿಯಿಂದ ಕೊವೀಡ್–19 ಕೊರೊನಾ ವೈರಸ್ ಲಾಕ್‌ಡೌನ್ ಸಮಯದಲ್ಲಿ ಸಾರ್ವಜನಿಕ ಶ್ರೀ ಶಾರದ ಮಹೋತ್ಸವ ಸಮಿತಿ ಕೊಲ್ಯ, ಸೋಮೇಶ್ವರ ಹಾಗೂ ನಮ್ಮೂರಿನ ದಾನಿಗಳ ಸಹಾಯದಿಂದ ಪರಿಸರದ ಸುಮಾರು 250 ಬಡ ಕುಟುಂಬಗಳಿಗೆ ದೈನಂದಿನ ಖರ್ಚಿಗೆ ಅಗತ್ಯವಿರುವ ಅಕ್ಕಿ ಹಾಗೂ ಆಹಾರ ಸಾಮಾಗ್ರಿಗಳನ್ನು ವಿತರಿಸಲಾಯಿತು.



**ಕೊಪ್ಪಳ :** ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಕೊಪ್ಪಳ. ಸದರಿ ಸಹಕಾರಿ ವತಿಯಿಂದ ಕರೋನ ವೈರಸ್ ದೇಶಾದ್ಯಂತ ಹರಡದಂತೆ ತಡೆಯಲು ಹಾಗೂ ಸರ್ಕಾರದ ಆದೇಶದಂತೆ ಹಗಲಿರುಳು ಕಾರ್ಯನಿರ್ವಹಿಸುತ್ತಿರುವ ಪೋಲೀಸ್ ಪೇದೆಗಳಿಗೆ, ಪೌರಕಾರ್ಮಿಕರಿಗೆ, ಬಡ ಜನರಿಗೆ ಲಘು ಉಪಹಾರ ಹಾಗೂ ನೀರಿನ ವ್ಯವಸ್ಥೆಯನ್ನು ಮಾಡಲಾಯಿತು.



**ಹೊಸಪೇಟೆ :** ಆರ್.ಡಿ. ಸೋನಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ಹೊಸಪೇಟೆ ಸಹಕಾರಿಯಿಂದ ವಿಶ್ವ ಸಮಸ್ತ ಮಾನವ ಕುಲಕ್ಕೆ ಕರೋನಾ ವೈರಸ್ ಆತಂಕ ಮೂಡಿಸಿದ್ದು ಈ ಸಂದರ್ಭದಲ್ಲಿ ಸಾಮಾಜಿಕ ಕಳಕಳಿಯಿಂದ ಡಾಕ್ಟರ್‌ಗಳಿಗೆ, ಪ್ಯಾರಾಮೆಡಿಕಲ್ ಕಂಡಕ್ಟರ್‌ಗಳಿಗೆ, ಡ್ರೈವರ್‌ಗಳಿಗೆ, ದಿನವಹಿ ತರಕಾರಿಯ ವೆಂಡರ್‌ಗಳಿಗೆ, ಮಾಸ್ಕ ವಿತರಣೆ ಮಾಡಲಾಯಿತು

ಹಂಪಿ ಕ್ಷೇತ್ರದಲ್ಲಿ ಪ್ರವಾಸಿಗರ ನಿರ್ಬಂಧವಿರುವ ಕಾರಣ ವಾನರಗಳಿಗೆ ಪ್ರತಿನಿತ್ಯ ಬಾಳೆಹಣ್ಣು, ಕಡ್ಲಿ, ಹುರಿಕಡಲೆಯನ್ನು ನೀಡಲಾಯಿತು.. ಶ್ವಾನಗಳಿಗೆ (ನಾಯಿಗಳಿಗೆ) ಪ್ರತಿನಿತ್ಯ ಅನ್ನ, ಹಾಲು ವಿತರಿಸಲಾಗುತ್ತಿದೆ. ಹಾಗೂ ಆಕಳುಗಳಿಗೆ ಪ್ರತಿನಿತ್ಯ ತರಕಾರಿಯನ್ನು ವಿತರಿಸಲಾಗುತ್ತಿದೆ. ಅರಣ್ಯದಲ್ಲಿ ವಾಸಿಸುತ್ತಿರುವ ಗಿರಿಜನರಿಗೆ ಉಚಿತವಾಗಿ ಆಹಾರಧಾನ್ಯಗಳ ವಿತರಣೆಯನ್ನು ಮಾಡಲಾಗಿದೆ ಇದನ್ನು ಲಾಕ್‌ಡೌನ್ ಮುಗಿಯುವವರೆಗೂ ವಿತರಿಸಲಾಗುವುದು.



**ಉಡುಪಿ :** ಪರಿವರ್ತನಾ ಫೌಂಡೇಷನ್ ಮಣಿಪಾಲ ವತಿಯಿಂದ ಪ್ರತಿ ದಿನ ಸುಮಾರು 1000ಕ್ಕೂ ಬಡ ಕಾರ್ಮಿಕರಿಗೆ ಮಧ್ಯಾಹ್ನದ ಭೋಜನವನ್ನು ವಿತರಿಸಲಾಗುತ್ತಿದ್ದು, ಈ ಮಹತ್ವದ ಕಾರ್ಯದಲ್ಲಿ ಒಂದು ದಿನದ ಭೋಜನದ ವ್ಯವಸ್ಥೆಗೆ ಅಗ್ರಜ ಸೌಹಾರ್ದ ಸಹಕಾರಿ ನಿಯಮಿತ, ಉಡುಪಿ ಸಹ ಕೈ ಜೋಡಿಸಿದ್ದು ಇದಕ್ಕೆ ಬೇಕಾದ ಸುಮಾರು ರೂ. 10,000 ದಿನಸಿ ಸಾಮಗ್ರಿಗಳನ್ನು ಪೂರೈಸಿದ್ದು ಇದಕ್ಕಾಗಿ ಪರಿವರ್ತನಾ ಫೌಂಡೇಷನ್ ಸಂಸ್ಥಾಪಕರಾದ ಶ್ರೀ ಮೋಹನ್ ಭಟ್ ತುಂಬು ಹೃದಯದ ಕೃತಜ್ಞತೆಯನ್ನು ಸಲ್ಲಿಸಿರುತ್ತಾರೆ.



**ಹಾವೇರಿ:** ಶ್ರೀ ಪುಟ್ಟರಾಜ ಗವಾಯಿ–ಸಚೇತನ ವಿವಿದ್ದೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಬಂಕಾಪೂರನಿಂದ ದಿನಾಂಕ 07.04.2020 ರಂದು ನಮ್ಮ ಸಹಕಾರಿ ವತಿಯಿಂದ ಕೋವಿಡ್–19 ಕೋರೊನಾ ವೈರಸ್ ಹರಡದಂತೆ ಲಾಕಡೌನನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸಲು ಸರಕಾರದ ಆದೇಶದನ್ವಯ ಕಾರ್ಯನಿರ್ವಸಲು ನಿರತರಾದಂತಹ ಪೋಲೀಸ ಇಲಾಖೆ, ಪೌರಕಾರ್ಮಿಕರು, ಆರೋಗ್ಯ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತೆಯರು, ವಿದ್ಯುಶ್ಚಕ್ತಿಯ (ಕೆಇಬಿ) ಮಂಡಳಿಗೆ, ನಿರಾಶ್ರಿತರಿಗೆ ಒಂದು ದಿನದ ಮದ್ಯಾಹ್ನ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು.



**ಕೊಪ್ಪಳ :** ಋಷಿ ಪತ್ತಿನ ಸೌಹಾರ್ದ ಸಹಕಾರಿ ನಿ; ಗಂಗಾವತಿ ಸಹಕಾರಿ ವತಿಯಿಂದ ಕೊರೋನಾ ಮಹಾಮಾರಿಯಿಂದ ತತ್ತರಿಸುವ ಸಂದರ್ಭದಲ್ಲಿ ಮಾನ್ಯ ಶ್ರೀ ಚಂದ್ರಶೇಖರ್ ಡಿ.ವೈ.ಎಸ್.ಪಿ, ಗಂಗಾವತಿ ರವರ ಮಾರ್ಗದರ್ಶನದಲ್ಲಿ ಮತ್ತು ಸಹಕಾರಿ ಧುರೀಣರು, ಸಮಾಜದ ಮುಖಂಡರು ಹಾಗೂ ಮಾಜಿ ಸಂಸದರಾದ ಮಾನ್ಯ ಶ್ರೀ ಶಿವರಾಮಗೌಡ್ರು ರವರ ಸಮ್ಮುಖದಲ್ಲಿ ಗಂಗಾವತಿ ನಗರದ ರಾಮಲಿಂಗೇಶ್ವರ ಬಡಾವಣೆಯ ವಿರುಪಾಪೂರ ತಾಂಡಾದಲ್ಲಿ ನಿರ್ಗತಿಕರಿಗೆ ದಿನನಿತ್ಯದ ಅಗತ್ಯ ವಸ್ತುಗಳನ್ನು ನೀಡಿ ಸೇವೆಯನ್ನು ಸಲ್ಲಿಸಲಾಯಿತು.



**ಮಂಗಳೂರು :** ಶ್ರೀಶಾ ಸೌಹಾರ್ದ ಸಹಕಾರಿ, ದಾಸಸಾಹತ್ಯ ಸೇವಾ ಪ್ರತಿಷ್ಠಾನ ಹಾಗೂ ಸದ್ಭಾವನಾ ಮಹಿಳಾ ಬಳಗ, ಮಂಗಳೂರು ವತಿಯಿಂದ ಕೊವೀಡ್–19 ಕೊರೊನಾ ವೈರಸ್ ಲಾಕ್‌ಡೌನ್ ಸಮಯದಲ್ಲಿ ಬಿಜೈ ನ್ಯೂ ರೋಡ್ ನಲ್ಲಿರುವ ಬಡವರಿಗೆ, ಕೂಲಿ ಕಾರ್ಮಿಕರಿಗೆ 14 ಕಿಟ್‌ಗಳನ್ನು ನೀಡಲಾಯಿತು. ಶ್ರೀಮತಿ. ಕಾತ್ಯಾಯಿನಿರವರು ನಮ್ಮೊಂದಿಗಿದ್ದು ಸಹಕರಿಸಿದರು. ಸೋಮೇಶ್ವರ ಉಚ್ಚಿಲದಲ್ಲಿ ಉತ್ತರ ಪ್ರದೇಶ ಮೂಲದ 28 ಕಾರ್ಮಿಕರಿಗೆ 50 ಕೆಜಿ ಗೋದಿಹಿಟ್ಟು, 50 ಕೆಜಿ ಅಕ್ಕಿ ಮತ್ತು 5 ಕೆಜಿ ಬೆಲ್ಲ ನೀಡಲಾಯಿತು.

ದೇರಳಕಟ್ಟೆ ಸನಿಹದಲ್ಲಿರುವ, ವಯಸ್ಸಾದ 30 ಮಹಿಳೆಯರೇ ಇರುವ ಸೇವಾಶ್ರಮ [ನಿರ್ಗತಿಕ ಅನಾಥಾಶ್ರಮ] ಕ್ಕೆ 15 ದಿನಗಳಿಗಾಗುವಷ್ಟು ಸುಮಾರು 10,000 ರೂ ಮೌಲ್ಯದ ನಿತ್ಯೋಪಯೋಗಿ ವಸ್ತುಗಳನ್ನು ನೀಡಲಾಗಿದೆ. ಆಶ್ರಮದ ನಿರ್ವಾಹಕರಾದ ಶ್ರೀಮತಿ ಗೀತಾ ಶೆಟ್ಟಿ ಮತ್ತು ಶ್ರೀ ಜಿ.ಆರ್.ಶೆಟ್ಟಿ ಉಪಸ್ಥಿತರಿದ್ದರು.



**ತೇರದಾಳ:** ಶ್ರೀ ಅಲ್ಲಮಪ್ರಭು ಕಿರಾಣಿ ವ್ಯಾಪಾರ ಸಂಘ ಮತ್ತು ದಿ ತೇರದಾಳ ವರ್ತಕರ ಸೌಹಾರ್ದ ಕ್ರೆಡಿಟ್ ಕೋ ಆಪ್ ಲಿ. ತೇರದಾಳ ಇವರ ಸಂಯುಕ್ತ ಆಶ್ರಯದಲ್ಲಿ 'ದ್ಮಾ ಗ್ಯಾಸ್ ಗೋಡಾವನ್ ಹತ್ತಿರದ ಅಲೆಮಾರಿ ಜನಾಂಗದವರಿಗೆ ಹಾಗೂ ಬಡವರಿಗಾಗಿ ಆಹಾರ ಸಾಮಗ್ರಿಗಳ ಕಿಟ್ ವಿತರಿಸಲಾಯಿತು.

**ಉಡುಪಿ:** ಅಡ್ವೆ ವಿವಿದೋದ್ದೇಶ ಸೌಹಾರ್ದ ಸಹಕಾರಿಯು ಕೊರೊನಾ ಲಾಕ್‌ಡೌನ್ ನಿಂದಾಗಿ ಸಂಕಷ್ಟದಲ್ಲಿರುವ ಬಡಕುಟುಂಬಗಳಿಗೆ 30,000/– ರೂಪಾಯಿಗಳ 50 ಕಿಟ್‌ಗಳನ್ನು ಸಹಕಾರಿಯ ಅಧ್ಯಕ್ಷರು ಮತ್ತು ನಿರ್ದೇಶಕರುಗಳು ಫಲಿಮಾರು ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ನೀಡಿದರು.



**ಚಾಮರಾಜನಗರ:** ದಿನಾಂಕ 20.04.2020 ರಂದು ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ವತಿಯಿಂದ ಸುಮಾರು ಒಂದು ಲಕ್ಷದ ಮೊತ್ತದ ಆಹಾರ ಪದಾರ್ಥಗಳ ಕಿಟ್‌ಗಳನ್ನು ವಿತರಣೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಅಭಿಲಾಷ ಹಾಗೂ ಇತರರು ಉಪಸ್ಥಿತರಿದ್ದರು.



**ಚಾಮರಾಜನಗರ:** ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಚಾಮರಾಜನಗರ ಇದರ ವತಿಯಿಂದ ನಗರದ ವಿವಿಧ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೋಲಿಸ್ ಸಿಬ್ಬಂದಿಗಳಿಗೆ ಆಹಾರದ ಪೊಟ್ಟಣ ಮತ್ತು ಮಿನರಲ್ ವಾಟರ್ ನೀಡಿಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ. ಜಯಸಿಂಹ, ಆಡಳಿತ ಮಂಡಳಿ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



**ಬೆಳಗಾವಿ:** ಶ್ರೀ ಶಿವಜ್ಞಾನ ಸಂಪನ್ನ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ. ಹುಕ್ಕೇರಿ ಇದರ ವತಿಯಿಂದ ಕೋರೋನಾ ವೈರಸ್‌ದಿಂದ ಲಾಕ್‌ಡೌನ್‌ದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹುಕ್ಕೇರಿ ನಗರದ ಪೋಲಿಸ್ ಸಿಬ್ಬಂದಿಗೆ ಸಹಕಾರಿ ವತಿಯಿಂದ ಭೋಜನ ವ್ಯವಸ್ಥೆ ಮಾಡಲಾಯಿತು.



**ಹೂವಿನಹಡಗಲಿ:** ಗಿರಿಮಲ್ಲಿಗೆ ಸೌಹಾರ್ದ ಸಹಕಾರ ನಿಯಮಿತ ಮತ್ತು ನವ್ಯ ಟ್ರಸ್ಟ್ ವತಿಯಿಂದ ತಾತ್ಕಾಲಿಕ ನಿರಾಶ್ರಿತ ಪರಿಹಾರ ಕೇಂದ್ರದಲ್ಲಿನ ನಿರಾಶ್ರಿತರಿಗೆ ಅಗತ್ಯ ಸೋಪು, ಕೊಬ್ಬರಿ ಎಣ್ಣೆಯನ್ನು ವಿತರಣೆ ಮಾಡಲಾಯಿತು. ಸದರಿ ಕಾರ್ಯಕ್ರಮಕ್ಕೆ ಜಿಲ್ಲಾ ಆಡಳಿತ ಬಳ್ಳಾರಿ ಮತ್ತು ತಾಲ್ಲೂಕು ಆಡಳಿತ ಹೂವಿನಹಡಗಲಿಯವರಿಂದ ಧನ್ಯವಾದ ಸಲ್ಲಿಸಿದರು.



**ಬೆಳಗಾವಿ:** ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಬೆಳಗಾವಿ ವತಿಯಿಂದ 500 ರೇಷನ್ (ಆಹಾರ ಪದಾರ್ಥಗಳ) ಕಿಟ್‌ಗಳನ್ನು ಮತ್ತು 3000/– ಮಾಸ್ಕ್‌ಗಳನ್ನು ವಿತರಿಸಲಾಯಿತು.



**ಬೆಳಗಾವಿ:** ಶ್ರೀ ಸಿದ್ಧಾರೂಢ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಲಗೋಡ, ಬೆಳಗಾವಿ ವತಿಯಿಂದ ಮಾಸ್ಕಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿಯವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಸಂಕೇಶ್ವರ:** ಶ್ರೀ ಮಲ್ಲಿಕಾರ್ಜುನ ಅರ್ಬನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಸಂಕೇಶ್ವರ ಇದರ ವತಿಯಿಂದ ಸಂಕೇಶ್ವರ ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೋಲಿಸ್ ಸಿಬ್ಬಂದಿಗಳಿಗೆ ಉಪಹಾರವನ್ನು ನೀಡಿ ಗೌರವಿಸಲಾಯಿತು.



**ಬಳ್ಳಾರಿ:** ಗೌಳಿಗರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಸದರಿ ಸಹಕಾರಿ ವತಿಯಿಂದ ವಿಶ್ವವನ್ನೇ ಕಾಡುತ್ತಿರುವ ಕರೋನಾ (ಕೋವಿಡ್–19) ಮಹಾಮಾರಿಯ ಹಿನ್ನೆಲೆಯಲ್ಲಿ ಹಾಗೂ ಕರ್ನಾಟಕ ಸೇರಿದಂತೆ ಇಡೀ ಭಾರತ ಲಾಕ್‌ಡೌನ್ ಮಾಡಿರುವ ಕಾರಣ ಜನ ಸಾಮಾನ್ಯರಿಗೆ ಸೇರಿದಂತೆ ಎಲ್ಲಾ ಬಡವರಿಗೆ ಆರ್ಥಿಕವಾಗಿ ಕಷ್ಟದ ದಿನಗಳ ಇರುವುದರಿಂದ ಕೃಷಿ ಸಂಬಂಧಿತ ಎಲ್ಲಾ ಚಟುವಟಿಕೆಗಳು ನಿಂತುಹೋಗಿರುತ್ತದೆ. ಹಾಗೆ ಹೈನುಗಾರಿಕೆಗೆ ತೊಂದರೆಯಾಗುವ ಎಲ್ಲ ಲಕ್ಷಣಗಳು ಕಾಣುತ್ತಿದ್ದು, ಈ ಕಷ್ಟದ ಪರಿಸ್ಥಿತಿಯಲ್ಲಿ ಸಹಕಾರಿಯ ಆಡಳಿತ ಮಂಡಳಿಯು ಹೊಸಪೇಟೆ ತಾಲ್ಲೂಕಿನಲ್ಲಿ ಹೈನುಗಾರಿಕೆಯಿಂದ ಜೀವನ ನಡೆಸುತ್ತಿರುವ ಕಡುಬಡವ ಕುಟುಂಬಗಳಿಗೆ ಆಸರೆ ಆಗುವ ತೀರ್ಮಾನ ತೆಗೆದುಕೊಂಡು ದನಕರುಗಳಿಗೆ ಉಚಿತ ಮೇವಿನ ವ್ಯವಸ್ಥೆ ಮಾಡಲು ತೀರ್ಮಾನ ಮಾಡಲಾಯಿತ್ತು. ಅದರಂತೆ ಸಹಕಾರಿಯೂ ನಗರದ 20 ಕುಟುಂಬಗಳು ಸಾಕಿದ 321 ದನಗಳಿಗೆ ಅಂದಾಜು ರೂ.50,000/– ಮೌಲ್ಯದ 01 ತಿಂಗಳಿಗೆ ಅಗುವಷ್ಟ ಮೇವುವನ್ನು ಉಚಿತವಾಗಿ ಹಂಚಿಕೆ ಮಾಡಲಾಯಿತು.

# ಬೆಲ್ಲದ ಬಾಗೇವಾಡಿ ಅರ್ಬನ ಸೌಹಾರ್ದ ಸಹಕಾರಿ ಬ್ಯಾಂಕ : ರೂ. 160.86 ಲಕ್ಷ ಲಾಭ

**ಬೆಲ್ಲದ ಬಾಗೇವಾಡಿ :** ಗ್ರಾಮೀಣ ಪ್ರದೇಶದಲ್ಲಿ ಅಗ್ರಮಾನ್ಯ ಬ್ಯಾಂಕೆಂದು ಹೆಸರು ಪಡೆದಿರುವ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕು ಪ್ರಸಕ್ತ ದಿನಾಂಕ: 31.03.2020 ಕ್ಕೆ ಮುಕ್ತಾಯಗೊಂಡ 2019–20 ನೇ ಸಾಲಿನಲ್ಲಿ ರೂ.319.86 ಲಕ್ಷ ಲಾಭ ಗಳಿಸಿರುತ್ತದೆ. ಅದರಲ್ಲಿ ಶಾಸನಬದ್ದ ಪ್ರಾವಧಾನಗಳನ್ನು ವರ್ಗಾವಣೆ ಮಾಡಿದ ನಂತರ ರೂ.160.86 ಲಕ್ಷ ನಿವ್ವಳ ಲಾಭ ಗಳಿಸಿದೆ.

ಬ್ಯಾಂಕು ಗ್ರಾಮೀಣ ಜನತೆಯ ಅದರಲ್ಲೂ ರೈತ ಬಾಂಧವರ ಆರ್ಥಿಕ ಸ್ಥಿತಿ ಉತ್ತಮಗೊಳಿಸುವ ದೃಢಸಂಕಲ್ಪದೊಂದಿಗೆ ಸೇವೆ ಸಲ್ಲಿಸುತ್ತಾ ಅಭಿವೃದ್ಧಿ ಹೊಂದುತ್ತಿದೆ. ಬ್ಯಾಂಕು 29 ಕೋಟಿ 96 ಲಕ್ಷ ಸ್ವಂತ ಬಂಡವಾಳ ಸಹಿತ. ರೂ.316 ಕೋಟಿ 32 ಲಕ್ಷ ದುಡಿಯುವ ಬಂಡವಾಳ ಹೊಂದಿದೆ. ರೂ.281 ಕೋಟಿ 32 ಲಕ್ಷ ಠೇವು ಸಂಗ್ರಹಿಸಲಾಗಿದ್ದು. ರೂ. 145 ಕೋಟಿ 76 ಲಕ್ಷ ಸಾಲ ವಿತರಿಸಲಾಗಿದೆ. ಸಾಲ ವಸೂಲಾತಿಯಲ್ಲಿ 100ಕ್ಕೆ ಪ್ರತಿ ಶತ 98.90% ರಷ್ಟು ಸಾಲ ವಸೂಲಾತಿ ಮಾಡಿದೆ. ಬೆಲ್ಲದ–ಬಾಗೇವಾಡಿಯಲ್ಲಿ ಆಡಳಿತ ಕಚೇರಿ ಹೊಂದಿದ್ದು, ಬೆಲ್ಲದ ಬಾಗೇವಾಡಿ(ಮುಖ್ಯ ಶಾಖೆ), ಕಬ್ಬೂರ, ಧುಪಧಾಳ, ಸಂಕೇಶ್ವರ. ಕೊಣ್ಣೂರ, ಶಿಂಧಿಕುರಬೇಟ, ಕಲ್ಲೋಳಿ, ಯಮಕನಮರಡಿ, ಸುಲ್ತಾನಪೂರ, ಹುಕ್ಕೇರಿ, ಕಣಗಲಾ, ಸದಾಶಿವನಗರ ಬೆಳಗಾವಿ, ಶಿವಬಸವನಗರ ಬೆಳಗಾವಿ, ಶಿರಗುಪ್ಪಿ, ಐನಾಪೂರ, ಹಾರೂಗೇರಿ ಹೀಗೆ 16 ಶಾಖೆಗಳೊಂದಿಗೆ ಬ್ಯಾಂಕು ಸಂಪೂರ್ಣ ಬೆಳಗಾವಿ ಜಿಲ್ಲೆಯ ಕಾರ್ಯವ್ಯಾಪ್ತಿಯನ್ನು ಹೊಂದಿ ಎಲ್ಲ ಶಾಖೆಗಳು ಸಂಪೂರ್ಣವಾಗಿ ಗಣಕೀಕೃತಗೊಂಡು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಸೇಫ್ ಲಾಕರ್, ಇ–ಸ್ಟಾಂಪಿಂಗ್, ನೆಫ್ಟ್/ ಆರ್.ಟಿ.ಜಿ.ಎಸ್, ಎ.ಟಿ.ಎಮ್, ಸೇವೆಗಳೊಂದಿಗೆ ಗ್ರಾಹಕರಿಗೆ ತ್ವರಿತಗತಿಯಲ್ಲಿ ಸೇವೆ ಸಲ್ಲಿಸುತ್ತಿದೆ.

ಬ್ಯಾಂಕಿನ ಪ್ರಗತಿಗೆ ನಮ್ಮ ಬ್ಯಾಂಕಿನ ಸದಸ್ಯರೂ ಹಾಗೂ ಮಾಜಿ ಸಚಿವರು ಹಾಗೂ ಹುಕ್ಕೇರಿ ಶಾಸಕರಾದ ಮಾನ್ಯ ಶ್ರೀ ಉಮೇಶ ಕತ್ತಿ ಮತ್ತು ಬ್ಯಾಂಕಿನ ಸದಸ್ಯರೂ ಹಾಗೂ ಮಾಜಿ ಸಂಸದರು ಹಾಗೂ ಬಿ.ಡಿ.ಸಿ.ಸಿ ಬ್ಯಾಂಕ ಬೆಳಗಾವಿಯ ಅಧ್ಯಕ್ಷರಾದ ಮಾನ್ಯ ಶ್ರೀ ರಮೇಶ ಕತ್ತಿ ಇವರ ಮಾರ್ಗದರ್ಶನ, ನಿರ್ದೇಶಕ ಮಂಡಳಿಯ ನಿಸ್ವಾರ್ಥ ಸೇವೆ, ಸದಸ್ಯರ, ಗ್ರಾಹಕರ ಅಭಿಮಾನ ಮತ್ತು ಸಿಬ್ಬಂದಿ ವರ್ಗದವರ ಸೇವಾ ಮನೋಬಾವವೇ ಕಾರಣವೆಂದು ಹಾಗೂ ಬ್ಯಾಂಕಿನ ಪ್ರಗತಿಗಾಗಿ ಸಹಕರಿಸಿದ ಎಲ್ಲ ಸದಸ್ಯರಿಗೂ, ಠೇವುದಾರರಿಗೂ ಹಾಗೂ ಹಿತಚಿಂತಕರಿಗೂ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುನೀಲ ಶ್ರೀ. ಬೆಲ್ಲದ ಇವರು ಕೃತಜ್ಞತೆಯನ್ನು ಸಲ್ಲಿಸಿದರು.



**ಶಿವಮೊಗ್ಗ:** ವರ್ತಕರ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ವತಿಯಿಂದ ಕರೋನಾ ರೋಗಕ್ಕೆ ಇಡೀ ವಿಶ್ವ ತೊಂದರೆಗೆ ಸಿಲಿಕಿದೆ. ಎಲ್ಲಾ ಕಡೆ ಬಡವರು ಹಸಿವು ಸಂಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ನಾವೆಲ್ಲರೂ ಮಾನವೀಯತೆ ಮೆರೆಯಬೇಕಿದೆ ಈ ಅಭಿಯಾನಕ್ಕೆ ಸಹಕಾರಿ ವತಿಯಿಂದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ 25,000/– ರೂ ನೀಡಲಾಯಿತು.



**ಚಾಮರಾಜನಗರ:** ಮಹದೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಲಗೂರು ವತಿಯಿಂದ ದಿನಾಂಕ 29.04.2020 ರಂದು ಹಲಗೂರು ಗ್ರಾಮದ ಆರಕ್ಷಕ ಠಾಣೆಯ ಆರಕ್ಷಕರು, ಉಪ ಆರಕ್ಷಕರು ಮತ್ತು ಅವರ ಸಿಬ್ಬಂದಿ ವರ್ಗದವರು ಕೊರೋನಾ ಬಗ್ಗೆ ಕಾಳಜಿ ವಹಿಸಿ ಕರ್ತವ್ಯ ನಿರ್ವಹಿಸುತ್ತಿರುವುದ–ರಿಂದ ಗೌರವಾರ್ಥವಾಗಿ ಸನ್ಮಾನ ಮಾಡಿ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಯಿತು.

## ಸುಕೋ ಬ್ಯಾಂಕಿನ ಸಿಬ್ಬಂದಿಗಳಿಗೆ ಆನ್‌ಲೈನ್‌ನಲ್ಲಿ ತರಬೇತಿ ಕಾರ್ಯಕ್ರಮ



**ಬಳ್ಳಾರಿ:** ಸದಾ ಕ್ರಿಯಾಶೀಲ ಮತ್ತು ವಿಶೇಷ ಪ್ರಯೋಗಗಳಿಂದ ಸಹಕಾರಿ ಕ್ಷೇತ್ರದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಳ್ಳುತ್ತಿರುವ ಸುಕೋ ಬ್ಯಾಂಕ್, ಲಾಕ್‌ಡೌನ್ ಸಮಯದಲ್ಲಿ ತನ್ನ ಸಿಬ್ಬಂದಿಗಳಿಗೆ ಆನ್‌ಲೈನ್ ಮೂಲಕ ತರಬೇತಿ ನೀಡಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವ್ಯಾಪಕ ಪ್ರಶಂಸೆಗೆ ಒಳಗಾಗಿದೆ. ಸುಕೋ ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು, ಮಾತನಾಡಿ, ಶಾಲಾ – ಕಾಲೇಜುಗಳಲ್ಲಿ ಆನ್‌ಲೈನ್ ತರಗತಿಗಳು, ಆನ್‌ಲೈನ್ ವೈದ್ಯಕೀಯ ಕನ್ಸಲ್ಟೆಂನ್ಸಿಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಸಹಕಾರಿ ಕ್ಷೇತ್ರದಲ್ಲೂ ಆನ್‌ಲೈನ್ ತರಬೇತಿ ಪ್ರಯೋಗ ಯಶಸ್ವಿಯಾಗಿ ನಡೆದಿದೆ ಎಂದು ತಿಳಿಸಿದ್ದಾರೆ.

ರಾಜ್ಯದ 11 ಜಿಲ್ಲೆಗಳಲ್ಲಿ ಇರುವ 28 ಶಾಖೆಗಳಲ್ಲಿ 7ಕ್ಕೂ ಹೆಚ್ಚಿನ ಸಿಬ್ಬಂದಿಗಳಿಗೆ ಆನ್‌ಲೈನ್ ತರಬೇತಿ ನೀಡಿ, ವೃತ್ತಿ ನೈಪುಣ್ಯ, ಗ್ರಾಹಕಸ್ನೇಹಿ ಕೌಶಲ್ಯಗಳು, ಬ್ಯಾಂಕಿಂಗ್ ಕ್ಷೇತ್ರದ ಕಾನೂನು, ನೀತಿ–ನಿಯಮಗಳು, ಸಾಲ ವಿತರಣೆ, ದಾಖಲೆಗಳ ಪರಿಶೀಲನೆ, ಹಣ ಪಾವತಿಯಲ್ಲಿ ಆಧುನಿಕ ತಂತ್ರಜ್ಞಾನದ ಸಮರ್ಪಕ ಬಳಕೆ ಸೇರಿ ವಿವಿಧ ವಿಷಯಗಳ ಬಗ್ಗೆ ಬ್ಯಾಂಕಿಂಗ್ ತಜ್ಞರು ತರಬೇತಿ ನೀಡಿದರು.

ತರಬೇತಿದಾರರಾದ ನಂದೀಶ್ ಹಿರೇಮಠ್ ಅವರು, 'ಅವಶ್ಯಕತೆಯು ಆವಿಷ್ಕಾರದ ತಾಯಿಯಾದರೆ, ಯಾವುದೇ ಪ್ರತಿಕೂಲತೆಯು ಹೊಸ ಕಲ್ಪನೆಯ ತಂದೆ' ಎನ್ನುವಂತೆ, ಕೋವಿಡ್–19ರ ಪ್ರತಿಕೂಲ ಸನ್ನಿವೇಶದಲ್ಲೂ ಸಿಬ್ಬಂದಿಗಳು ಕ್ರಿಯಾಶೀಲರಾಗಿ ವೃತ್ತಿ ನೈಪುಣ್ಯತೆ ಮತ್ತು ಕೌಶಲ್ಯ ಹೆಚ್ಚಿಸಿಕೊಳ್ಳಲಿಕ್ಕೆ ಸುಕೋ ಬ್ಯಾಂಕ್ ಆನ್‌ಲೈನ್ ತರಬೇತಿ ಅವಕಾಶ ಕಲ್ಪಿಸಿರುವುದು ಶ್ಲಾಘನೀಯ ಎಂದರು. ತರಬೇತಿಯು ಏಪ್ರಿಲ್ 11 ರಿಂದ ಪ್ರಾರಂಭವಾಗಿದ್ದು, ಏಪ್ರಿಲ್ 14ರ ಸಂಜೆ ಸಮಾರೋಪ ಗೊಂಡಿರುತ್ತದೆ. ಸುಕೋ ಬ್ಯಾಂಕ್‌ನ ನಿರ್ದೇಶಕರು, ಕಾರ್ಯನಿವಾರ್ಹಕರು ಹಾಗೂ ಮತ್ತೊಂದು ಸಹಕಾರಿ ಬ್ಯಾಂಕ್‌ನ ಸಿಬ್ಬಂದಿ ಈ ತರಬೇತಿಯಲ್ಲಿ ಪಾಲ್ಗೊಂಡಿರುವುದು ವಿಶೇಷ.

## "ಬಸವೇಶ್ವರ ಜಯಂತಿ" ಆಚರಣೆ



**ಚಾಮರಾಜನಗರ:** ಶ್ರೀ ಸಿದ್ದಮಲೇಶ್ವರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಸಹಕಾರಿ ವತಿಯಿಂದ "ಬಸವ ಜಯಂತಿ" ಕಾರ್ಯಕ್ರಮವು ಸರಳವಾಗಿ ಕಚೇರಿಯ ಆವರಣದಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಹಕಾರಿಯ ಗೌರವ ಅಧ್ಯಕ್ಷರಾದ ಶ್ರೀ ಚನ್ನಬಸವ ಸ್ವಾಮೀಜಿಗಳು ನೆರವೇರಿಸಿದರು.



**ಮಂಡ್ಯ:** ಜಗಜ್ಯೋತಿ ಶ್ರೀ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಕಛೇರಿಯಲ್ಲಿ "ಬಸವೇಶ್ವರ ಜಯಂತಿ" ಅಂಗವಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಪೂಜೆ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜ್ ರವರು ಹಾಗೂ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಮಂಡ್ಯ:** ಕ್ರಾಂತಿಯೋಗಿ ಶ್ರೀ ಬಸವೇಶ್ವರ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಕಛೇರಿಯಲ್ಲಿ "ಬಸವೇಶ್ವರ ಜಯಂತಿ" ಅಂಗವಾಗಿ ಪೂಜೆ ಕಾರ್ಯಕ್ರಮ ನಡೆಸಿ ಸುತ್ತಮುತ್ತಲಿನ ನಿರ್ಗತಿಕರಿಗೆ ಪ್ರಸಾದ ವಿತರಿಸಿದರು.



**ಚಾಮರಾಜನಗರ :** ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿ ನಿ., ಸಹಕಾರಿ ವತಿಯಿಂದ ಕಛೇರಿಯಲ್ಲಿ "ಬಸವ ಜಯಂತಿ" ಕಾರ್ಯಕ್ರಮ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀಮತಿ ರೇಣುಕಾ ರವರು ಮತ್ತು ಸಹಕಾರಿಯ ನಿರ್ದೇಶಕರು ಉಪಸ್ಥಿತರಿದ್ದರು.

# 31 ಮಾರ್ಚ್ 2020 ವರ್ಷಾಂತ್ಯಕ್ಕೆ ವಿವಿಧ ಸೌಹಾರ್ದ ಸಹಕಾರಿಗಳು / ಸೌಹಾರ್ದ ಬ್ಯಾಂಕುಗಳ ಹಣಕಾಸಿನ ಪ್ರಗತಿ ವಿವರ

## ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ., ಚೆಳ್ಳಕೆರೆ

| ಆರ್ಥಿಕ ಅಂಶಗಳು | 31.03.2020ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಶೇರು ಬಂಡವಾಳ | 1.54 |
| ಒಟ್ಟು ನಿಧಿಗಳು | 12.09 |
| ಒಟ್ಟು ಠೇವಣಿ | 27.14 |
| ಸಾಲ ಮತ್ತು ಮುಂಗಡಗಳು | 25.60 |
| ಒಟ್ಟು ನಿವ್ವಳ ಲಾಭ | 5.24 |
| ನೆಟ್ ನಿವ್ವಳ ಲಾಭ | 2.36 |
| ಲಾಭದ ಅನುಪಾತ | 46% |
| ದುಡಿಯುವ ಬಂಡವಾಳ | 40.79 |
| ಒಟ್ಟು ವಹಿವಾಟು | 94.70 |
| ಇಪಿಎಸ್ ಪರ್ ರೂ.100/- | 152.98 |
| ಶೇರಿನ ಮುಖ ಬೆಲೆ | 1012.33 |
| ಹೂಡಿಕೆ | 14.94 |

## ಆಯ್ಕೆ



**ದಾವಣಗೆರೆ:** ದಿನಾಂಕ 18.04.2020 ರಂದು ಕರಾವಳಿ ಸೌಹಾರ್ದ ಸಹಕಾರಿಯ ಕಚೇರಿ ಸಭಾಂಗಣದಲ್ಲಿ ನಡೆದ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ದ ಆಡಳಿತ ಮಂಡಳಿ ಸಭೆಯಲ್ಲಿ ಇತ್ತೀಚೆಗೆ ನಡೆದ ದಾವಣಗೆರೆ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಸ್ವಾಮಿ ವಿವೇಕಾನಂದ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ಒಕ್ಕೂಟದ ನಿರ್ದೇಶಕರು ಆಗಿರುವ ಶ್ರೀ ಎಸ್. ಟಿ. ವೀರೇಶ್ ರವರನ್ನು ಒಕ್ಕೂಟದ ಪರವಾಗಿ ಸನ್ಮಾನಿಸಲಾಯಿತು.

## ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ

| ಆರ್ಥಿಕ ಅಂಶಗಳು | 31.03.2020ಕ್ಕೆ ಇದ್ದಂತೆ |
|---|---|
| ಸದಸ್ಯರು | 905 |
| ಶೇರು ಬಂಡವಾಳ | 93,64,700.00 |
| ಒಟ್ಟು ನಿಧಿಗಳು | 23,01,125.29 |
| ಒಟ್ಟು ಠೇವಣಿ | 1,95,57,864.31 |
| ಸಾಲಗಳು | 2,76,39,806.00 |
| ಬ್ಯಾಂಕಿನಲ್ಲಿ ಠೇವಣಿಗಳು | 31,45,548.00 |
| ದುಡಿಯುವ ಬಂಡವಾಳ | 2,89,22,564.31 |
| ನಿವ್ವಳ ಲಾಭ | 20,51,126.24 |
| ವಾರ್ಷಿಕ ವಹಿವಾಟು | 11,73,33,807.06 |

## ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ, ಬೆಳಗಾವಿ

| ಆರ್ಥಿಕ ಅಂಶಗಳು | 31.03.2020ಕ್ಕೆ ಇದ್ದಂತೆ |
|---|---|
| ಸದಸ್ಯರ ಸಂಖ್ಯೆ | 9,663 |
| ವಸೂಲಾದ ಶೇರು ಬಂಡವಾಳ | 70,10,100 |
| ಕಾಯ್ದಿಟ್ಟ ನಿಧಿ & ಇತರ ನಿಧಿಗಳು | 10,74,00,099 |
| ಠೇವಣಿಗಳು | 144,16,82,695 |
| ಗುಂತಾವಣೆಗಳು | 56,77,15,556 |
| ಸಾಲಗಳು | 98,00,01,951 |
| ದುಡಿಯುವ ಬಂಡವಾಳ | 155,60,92,894 |
| ಒಟ್ಟು ವಹಿವಾಟು | 839,11,63,976 |
| ನಿವ್ವಳ ಲಾಭ | 2,78,07,432 |
| ಲಾಭಾಂಶ ನೀಡಿದ್ದು | 25 %. |
| ಶಾಖೆಗಳು | 1+7=8 |
| ಸಾಲ ವಸೂಲಾತಿ | 98% |

# ಕೋರೊನಾ ವೈರಸ್ (ಕೋವೀಡ್-19) ವಿರುದ್ಧ ಹೋರಾಡಲು ರಾಜ್ಯದ ಸೌಹಾರ್ದ ಸಹಕಾರಿಗಳ ವತಿಯಿಂದ ಪ್ರಧಾನ ಮಂತ್ರಿ ಹಾಗೂ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ನೀಡಿರುವ ಧೇಣಿಗೆ




**ಬೆಂಗಳೂರು :** ಕೊವಿಡ–19 ಕರೋನಾ ಪಿಡಿತರ ಸಹಾಯಕ್ಕಾಗಿ ರಾಜ್ಯದ ಅತ್ಯುತ್ತಮ ಸಹಕಾರಿ ಪ್ರಶಸ್ತಿ ಪಡೆದಿರುವ ಸೇಫ್ ಸ್ಟಾರ್ ಸಮೂಹ ಸಂಸ್ಥೆಯ ವತಿಯಿಂದ ಪ್ರಧಾನಮಂತ್ರಿಯವರ ಪರಿಹಾರ ನಿಧಿಗೆ 1.5ಲಕ್ಷ ಹಾಗೂ ಮುಖ್ಯಮಂತ್ರಿ ಪರಿಹಾರ ನಿಧಿಗೆ 1ಲಕ್ಷ ರೂಪಾಯಿಗಳ ಚೆಕನ್ನು ಸೇಫ್ ಸ್ಟಾರ್ ಸಮೂಹ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜಿ.ಜಿ. ಶಂಕರರವರು ಕುಮಟಾ–ಹೊನ್ನಾವರ ಕ್ಷೇತ್ರದ ಶಾಸಕರಾದ ಶ್ರೀ ದಿನಕರ ಶೆಟ್ಟಿಯವರಿಗೆ ಹಸ್ತಾಂತರಿಸಿದರು.




**ಮೂಡುಬಿದಿರೆ:** ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ (ನಿ) ಮೂಡುಬಿದಿರೆ ಇದರ ವತಿಯಿಂದ ಮುಲ್ಕಿ ಮೂಡುಬಿದಿರೆ ಶಾಸಕರಿಂದ ನಿರ್ವಹಿಸಲ್ಪಟ್ಟ ಕೊರೊನಾ ರಿಲೀಫ್ ಫಂಡ್ ಗೆ ರೂ. 25000/– ಸಹಾಯ ಧನವನ್ನು ಶಾಸಕರಾದ ಶ್ರೀ ಉಮಾನಾಥ ಕೋಟ್ಯಾನ್ ರವರಿಗೆ ಸಂಘದ ಅಧ್ಯಕ್ಷರಾದ ಶ್ರೀ ರಂಜಿತ್ ಪೂಜಾರಿ ಚೆಕ್‌ನ್ನು ಹಸ್ತಾಂತರಿಸಿದರು. ನಿರ್ದೇಶಕರಾದ ಶ್ರೀ ಗೋಪಾಲ್ ಶೆಟ್ಟಿಗಾರರು ಉಪಸ್ಥಿತರಿದ್ದರು.



**ಕೊಪ್ಪಳ:** ಶ್ರೀ ಬಸವೇಶ್ವರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿಯಮಿತ ಕೊಪ್ಪಳ ವತಿಯಿಂದ ಕೋವಿಡ್–19 ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ. 1,11,111/– ದೇಣಿಗೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರೇಶ ಎನ್ ಹತ್ತಿ ಉಪಾಧ್ಯಕ್ಷರಾದ ಶ್ರೀ ಅನಿಲಕುಮಾರ ವಿ ನಾಲ್ವಾಡ ರವರು ಹಾಗೂ ಆಡಳಿತ ಮಂಡಲಿ ನಿರ್ದೇಶಕರು ಸೇರಿ ಜಿಲ್ಲಾಧಿಕಾರಿಗಳಾದ ಶ್ರೀ ಪಿ ಸುನೀಲ ಕುಮಾರ ರವರಿಗೆ ಸಲ್ಲಿಸಿದರು.

**ಚಿತ್ರದುರ್ಗ :** ವಾಸವಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಚಳ್ಳಕೆರೆ ಸದರಿ ಸಹಕಾರಿ ವತಿಯಿಂದ ಕೋವೀಡ್–19 ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರ ಉಪಸ್ಥಿತಿಯಲ್ಲಿ ರೂ 1,00,116/– ಗಳನ್ನು ದೇಣಿಗೆಯಾಗಿ ಚಿತ್ರದುರ್ಗ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು ಹಾಗೂ ನಮ್ಮ ಮಾತೃ ಸಂಸ್ಥೆಯಾದ ಚಳ್ಳಕೆರೆ ಆರ್ಯ ವೈಶ್ಯ ಸಂಘವು ಪ್ರತಿ ದಿನವೂ ಆಹಾರ ತಂಪು ಪಾನೀಯಗಳು ಮತ್ತು ಹಣ್ಣುಗಳನ್ನು ಪೋಲಿಸ್ ಇಲಾಖೆಯ ಸಿಬ್ಬಂದಿ ವರ್ಗ ಮತ್ತು ಅವಶ್ಯಕತೆ ಇರುವ ವ್ಯಕ್ತಿಗಳಿಗೆ ನೀಡಲಾಯಿತು.

**ರಾಯಚೂರು:** ಶ್ರೀ ಆದಿತ್ಯ ನಾರಾಯಣ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿ ವತಿಯಿಂದ ಬಡಜನರಿಗೆ, ಕೂಲಿ ಕಾರ್ಮಿಕರಿಗೆ ಹಾಗೂ ನಿರಾಶಿತರಿಗೆ ಆಹಾರ ಸಾಮಾಗ್ರಿಗಳ ಕಿಟ್‌ನ್ನು ವಿತರಿಸಲಾಯಿತು.



**ಕುಂದಾಪುರ:** ಅಶಕ್ತರಿಗೆ ನೆರವಾಗುತ್ತಿರುವ ಗಂಗೊಳ್ಳಿಯ ಸೇವಾ ಸಂಕಲ್ಪ ತಂಡಕ್ಕೆ ಕುಂದಾಪುರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ 25 ಸಾವಿರ ರೂ. ಗಳನ್ನು ದೇಣಿಗೆಯಾಗಿ ನೀಡಲಾಯಿತು. ಸಹಕಾರಿ ಗುಜ್ಜಾಡಿ ಶಾಖೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಿವಾನಂದ ಪೂಜಾರಿ ಚೆಕ್ ಹಸ್ತಾಂತರಿಸಿದರು. .



**ಬೆಳಗಾವಿ:** ಅರಿಹಂತ ಅರ್ಬನ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ವತಿಯಿಂದ ಕೋವೀಡ್-19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ.. 1,00,000/-ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಮಣ್ಣಾ ನಾ ಗೋಟುರಿ ಹಾಗೂ ಉಪಾಧ್ಯಕ್ಷರಾದ ಶ್ರೀ ಭೂಪಾಲ ಪಾ ಚೌಗಲಾ ಇವರು ಶ್ರೀ ಅಶೋಕ ತೇಲಿ ಅಸಿಸ್ಟಂಟ ಕಮಿಷನರರು ಮತ್ತು ಶ್ರೀ ಅಶೋಕ ಗುರಾಣಿ ತಹಶೀಲ್ದಾರರು ಹುಕ್ಕೇರಿ ಇವರ ಮೂಲಕ ಚೆಕ್ಕನ್ನು ಸರ್ಕಾರಕ್ಕೆ ನೀಡಲಾಯಿತು.



**ರಾಯಚೂರು:** ಕೋವಿಡ್-19 ನಿಯಂತ್ರಣ ಸಲುವಾಗಿ ರಾಯಚೂರು ಸೌಹಾರ್ದ ಪತ್ತಿನ ಸಹಕಾರಿ ನಿ., ರಾಯಚೂರು ವತಿಯಿಂದ ರೂ.50,000/- ಚೆಕ್ಕನ್ನು ಶಾಸಕರಾದ ಶ್ರೀ ಡಾ. ಶಿವರಾಜ್ ಪಾಟೀಲ್ ರವರಿಗೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠ ಹಾಗೂ ನಿರ್ದೇಶಕರಾದ ಮಲ್ಲಿಕಾರ್ಜುನ ಸಿಂಗಡದಿನ್ನಿ ಉಪಸ್ಥಿತರಿದ್ದರು.



**ಮುಧೋಳ:** ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿ, ಮುಧೋಳ ಸಹಕಾರಿ ವತಿಯಿಂದ ಕೋವೀಡ್-19 ಪ್ರಧಾನ ಮಂತ್ರಿ ಪರಿಹಾರ ನಿಧಿಗೆ 5 ಲಕ್ಷ ದೇಣಿಗೆ ಹಾಗೂ ಕೋವೀಡ್-19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 5 ಲಕ್ಷ ದೇಣಿಗೆಯನ್ನು ನೀಡಲಾಯಿತು.



**ಕೊಪ್ಪಳ:** ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಗಿಣಿಗೇರಿ ಸದರಿ ಸಹಕಾರಿ ವತಿಯಿಂದ ಕರ್ನಾಟಕ ಸರಕಾರದ ಕೋವಿಡ್-19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ, ನಿರ್ದೇಶಕರುಗಳಾದ ಯಮನೂರಪ್ಪ ಗಂಟಿ, ಪುಟ್ಟಪ್ಪ ವಾರದ, ಡಾ॥ ಬಸವರಾಜ ಪಿ.ಎಮ್, ಹಾಗೂ ಕರಿಬಸವರಾಜ ಗದ್ದಿ ಇವರುಗಳು ಕೊಪ್ಪಳದ ಜಿಲ್ಲಾಧಿಕಾರಿಗಳಾದ ಸುನಿಲ್ ಕುಮಾರ ಇವರಿಗೆ ಧನ ಸಹಾಯದ ಚೆಕ್ ನೀಡಿದರು.



**ಚಾಮರಾಜನಗರ:** ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ವತಿಯಿಂದ 'ಕೋವಿಡ್–19' ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್ ಸುರೇಶ್ ಕುಮಾರ್ ರವರನ್ನು ಭೇಟಿ ಮಾಡಿ ರೂ. 1,00,001/–ಗಳ ಚೆಕ್‌ನ್ನು ದೇಣಿಗೆಯಾಗಿ ನೀಡಿದರು.



**ಮೂಲ್ಕಿ :** ಶ್ರೀ ಬಪ್ಪನಾಡು ಸೌಹಾರ್ದ ಸಹಕಾರಿ (ನಿ) ಬಪ್ಪನಾಡು, ಮೂಲ್ಕಿ ಇದರ ವತಿಯಿಂದ ಮೂಲ್ಕಿ – ಮೂಡಬಿದ್ರೆ ಶಾಸಕರ ಕೊರೊನ ರಿಲೀಫ್ ಫಂಡ್ ಗೆ ರೂ 25000/– ಸಹಾಯಧನವನ್ನು ಕ್ಷೇತ್ರದ ಶಾಸಕರಾದ ಶ್ರೀ ಉಮನಾಥ ಕೋಟ್ಯಾನ್ ಇವರಿಗೆ ಸಹಕಾರಿಯ ಅಧ್ಯಕ್ಷರಾದ ಸಂಪತ್ ಕಾರ್ನಾಡ್ ಇವರು ಚೆಕ್ಕನ್ನು ಹಸ್ತಾಂತರಿಸಿದರು.



**ಸಿಂಧನೂರು :** ಸಪ್ತಗಿರಿ ಪತ್ತಿನ ಸೌಹಾರ್ದ ಸಹಕಾರಿಯ ವತಿಯಿಂದ ಕರೊನಾ ವೈರಸನಿಂದ ಲಾಕ್‌ಡೌನ ಸಮಯದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಗೋಪಾಲಕೃಷ್ಣ ಇವರು ಬಡ ಕುಟುಂಬಗಳಿಗೆ ನಿತ್ಯ ಉಪಯೋಗದ ದಿನಸಿ ವಸ್ತುಗಳ ಕಿಟ್‌ಗಳನ್ನು ವಿತರಿಸಿದರು.



**ಮೈಸೂರು:** ಮೈಸೂರು ಜಿಲ್ಲಾ ಛಾಯಾಸ್ನೇಹ ಸೌಹಾರ್ದ ಸಹಕಾರಿ ನಿ., ಇದರ ವತಿಯಿಂದ ರೂ. 20.000/–ಗಳ ದೇಣಿಗೆ ಚೆಕ್‌ನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಜೇಂದ್ರ ಬಾಬು ನೀಡಿದರು. ಈ ಸಂದರ್ಭದಲ್ಲಿ ನಿರ್ದೇಶಕರಾದ ಶ್ರೀ ಶ್ರೀ ನಿಧಿ ಉಪಸ್ಥಿತರಿದ್ದರು.



**ಹಾವೇರಿ:** ಆದಿಶಕ್ತಿ ಸೌಹಾರ್ದ ಸಹಕಾರಿ ವತಿಯಿಂದ ಸಹಕಾರಿಯ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಾರುತಿ ಬಿ ಕಲಾಲ ಹಾಗೂ ಆಡಳಿತ ಮಂಡಳಿ ಯವರು ರೂ. 2,00,000 ಚೆಕ್‌ನ್ನು ಮಾನ್ಯ ಶಾಸಕರಾದ ಸನ್ಮಾನ್ಯ ಶ್ರೀ ಸಿ. ಎಂ. ಉದಾಸಿರವರು ಹಾಗೂ ತಹಶೀಲ್ದಾರ್ ಇವರುಗಳ ಮೂಲಕ ಕೋವಿಡ್–19 ಮುಖ್ಯಮಂತ್ರಿ ಪರಿಹಾರ ನಿಧಿಗೆ ದೇಣಿಗೆಯನ್ನು ನೀಡಲಾಯಿತು.



**ಕೊಪ್ಪಳ:** ಶ್ರೀ ಸೌಭಾಗ್ಯಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿ ವತಿಯಿಂದ ಕೋವೀಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ.51.000/– ದೇಣಿಗೆಯನ್ನು ನೀಡಲಾಯಿತು.



**ಕೊಪ್ಪಳ:** ಸ್ಪಂದನಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ವತಿಯಿಂದ ಕೋವಿಡ್–19 ಪರಿಹಾರ ನಿಧಿಗೆ ಸಂಬಂಧಿಸಿದಂತೆ ಗಂಗಾವತಿ ನಗರದ ಗೌರವಾನ್ವಿತ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿ ರವರ ಮುಖಾಂತರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 25,000/–ರೂ ಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ. ಬಿ. ಪತ್ತಾರ, ಮಾನ್ಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಸಹಕಾರಿಯ ಸಿಬ್ಬಂದಿಗಳು ಮತ್ತು ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

**ಬೆಲ್ಲದ ಬಾಗೇವಾಡಿ :** ಕೋವಿಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ ನಿ., ಬೆಲ್ಲದ ಬಾಗೇವಾಡಿ ವತಿಯಿಂದ ರೂ. 1,00,000/– ಗಳ ದೇಣಿಗೆಯ ಚೆಕ್ಕನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕುಶ ರಮೇಶ ಕತ್ತಿ ಮತ್ತು ಉಪಾಧ್ಯಕ್ಷರಾದ ಶ್ರೀ ರಮೇಶ ಬಂಡಪ್ಪಾ ಮುನ್ನೋಳಿ ಇವರು ಹುಕ್ಕೇರಿ ತಹಶೀಲ್ದಾರರಾದ ಶ್ರೀ ಅಶೋಕ ಈರಣ್ಣಾ ಗುರಾಣಿ ಇವರ ಮುಖಾಂತರ ಸಲ್ಲಿಸಿದರು. ಬ್ಯಾಂಕಿನ ನಿರ್ದೇಶಕ ಮಂಡಳಿ ಸದಸ್ಯರಾದ ಡಾ॥ ಮೋಹನ ಎಸ್. ಮುನ್ನೋಳಿ, ಮುರಗೇಶ ಬಿ. ಕತ್ತಿ, ಮಲ್ಲಿಕಾರ್ಜುನ ಎಸ್. ಬೆಲ್ಲದ, ಶಿವಗೌಡಾ ಎಸ್. ಪಾಟೀಲ, ಮಹಾವೀರ ಪಿ. ಖೆಮಲಾಪೂರೆ, ರಾಜಾರಾಮ ಟಿ. ಶಿರಾಳಕರ, ಸುರೇಶ ಬಿ. ಬೆಲ್ಲದ, ಸಿದ್ದಪ್ಪಾ ವಿ. ಹಾಗರಗಿ, ಕಿಶೋರ ಎಸ್. ಕತ್ತಿ, ಶಮಸುದ್ದಿನ್ ಡಿ. ಪಠಾಣ, ಮನೋಹರ ಎನ್. ಶ್ರೀಖಂಡೆ, ವಿನಾಯಕ ಎಸ್. ಬುರ್ಜಿ, ಲಕ್ಷ್ಮಣ ಎಸ್. ಕರಿಗಾರ, ಶ್ರೀಮತಿ ವಿಜಯಲಕ್ಷ್ಮೀ ಎಸ್. ಶೆಟ್ಟಿ, ಶ್ರೀಮತಿ ಸಂಜೀವಿನಿ ಎಸ್. ತೇರದಾಳ, ಕುಮಾರಿ ಆಫ್ರೀನ್ ಕೆ. ಅಮ್ಮಣಗಿ, ಆಡಳಿತ ಸಲಹೆಗಾರರಾದ ಶ್ರೀ ಮಕಬುಲ್ ಕೆ. ಅಮ್ಮಣಗಿ ಮತ್ತು ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುನೀಲ ಎಸ್. ಬೆಲ್ಲದ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೊಪ್ಪಳ :** ಶ್ರೀ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ; ಕೊಪ್ಪಳ ಮತ್ತು ಹೊಸಹಳ್ಳಿ ಗ್ರಾಮದವರ ವತಿಯಿಂದ ಕೊರೋನಾ ವೈರಸ್ (ಕೋವಿಡ್–19) ರಾಜ್ಯ, ದೇಶ, ಪ್ರಪಂಚದ ವ್ಯಾಪ್ತಿಯಲ್ಲಿ ಹರಡುವುದರಿಂದ ಅದನ್ನು ತಡೆಗಟ್ಟುವ ನಿಮಿತ್ತ ದೇಶದಲ್ಲಿ ಲಾಕ್‌ಡೌನ್ ಆಗಿರುವ ಹಿನ್ನೆಲೆಯಲ್ಲಿ ನಿರ್ಗತಿಕರಿಗೆ, ರಸ್ತೆ ಬದಿಯ ನಿರಾಶ್ರಿತರಿಗೆ ಮತ್ತು ಭಿಕ್ಷುಕರಿಗೆ ಶ್ರೀ ಸತೀಶ ಪಾಟೀಲ್ ನೇತೃತ್ವದಲ್ಲಿ ಆಹಾರ ಮತ್ತು ನೀರನ್ನು ನೀಡಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮುದ್ದಪ್ಪ, ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಅಮೃತ:** ದಿನಾಂಕ 27–04–2020 ಹಾಗೂ 30–04–2020 ರಂದು ಅಮೃತ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ. ಅಮೃತ ವತಿಯಿಂದ ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ ಅಮೃತ ಹಾಗೂ ಹುಂಚ ಗ್ರಾಮಪಂಚಾಯತಿ ವ್ಯಾಪ್ತಿಯ ಆರೋಗ್ಯ ಕೇಂದ್ರ ಸಿಬ್ಬಂದಿಗಳು, ಆಶಾಕಾರ್ಯಕರ್ತೆಯರು, ಅಂಗನವಾಡಿಯ ಸಿಬ್ಬಂದಿ ಹಾಗೂ ಅರಕ್ಷಕ ಸಿಬ್ಬಂದಿಗಳಿಗೆ ಒಟ್ಟು ಸುಮಾರು 81 ಜನರಿಗೆ ಬ್ಯಾಗ್ ಹಾಗೂ ಸ್ಯಾನಿಟೇಸರ್ ಕೀಟ ನೀಡಲಾಯಿತು. ಹಾಗೂ ದಿನಾಂಕ 20–04–2020ರಂದು ಪ್ರಧಾನಮಂತ್ರಿಗಳ ಪರಿಹಾರ ನೀದಿಗೆ ರೂ 5000/–ಗಳನ್ನು ದೇಣಿಗೆ ನೀಡಲಾಯಿತು.



**ಕೊಪ್ಪಳ :** ಕೋವಿಡ್–19 ಪರಿಹಾರ ನಿಧಿಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಶ್ರೀ ಜಗಜ್ಯೋತಿ ಅಣ್ಣ ಬಸವಣ್ಣ ಪತ್ತಿನ ಸೌಹಾರ್ದ ಸಹಕಾರಿ ನಿ; ಸಹಕಾರಿಯು ಗಂಗಾವತಿ ನಗರದ ಗೌರವಾನ್ವಿತ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿ ರವರ ಮುಖಾಂತರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 11,000/– ರೂ ದೇಣಿಗೆಯನ್ನು ನೀಡಲಾಯಿತು.



**ಕೊಪ್ಪಳ :** ಕೋವಿಡ್–19 ಪರಿಹಾರ ನಿಧಿಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಶ್ರೀ ಭುವನೇಶ್ವರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ; ಸಹಕಾರಿಯು ಗಂಗಾವತಿ ನಗರದ ಮಾನ್ಯ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿ ರವರ ಮುಖಾಂತರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 25,000/–ರೂ ಗಳನ್ನು ಮತ್ತು ಪ್ರಧಾನ ಮಂತ್ರಿ ಪರಿಹಾರ ನಿಧಿಗೆ 25,000/– ರೂ ಗಳ ದೇಣಿಗೆಯನ್ನು ನೀಡಲಾಯಿತು.



**ಶಿವಮೊಗ್ಗ:** ದಿನಾಂಕ 29–04–2020 ರಂದು ಶ್ರೀ ಮಾರಿಕಾಂಬ ಸೌಹಾರ್ದ ಸಹಕಾರಿ ವತಿಯಿಂದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಜ್ಞಾನೇಶ್ವರ್ ರವರು ಕೋವೀಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಅಪರ ಜಿಲ್ಲಾಧಿಕಾರಿಯವರಾದ ಶ್ರೀಮತಿ ಅನುರಾಧರವರ ಹಸ್ತೆ ಇವರಿಗೆ ಚೆಕ್ ನೀಡಿದರು.



**ಕೊಪ್ಪಳ :** ಕೋವಿಡ್–19 ಪರಿಹಾರ ನಿಧಿಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಶ್ರೀ ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿ ನಿ; ಸಹಕಾರಿಯು ಗಂಗಾವತಿ ನಗರದ ಮಾನ್ಯ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿ ರವರ ಮುಖಾಂತರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 50,000/–ರೂ ಗಳ ದೇಣಿಗೆಯನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಮತ್ತು ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ, ಒಕ್ಕೂಟದ ಮಾನ್ಯ ನಿರ್ದೇಶಕರು, ಸಹಕಾರಿಯ ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕಲ್ಯಾಣಬಸವ ರವರು ಉಪಸ್ಥಿತರಿದ್ದರು.



**ಕೊಪ್ಪಳ :** ಕೋವಿಡ್–19 ಪರಿಹಾರ ನಿಧಿಗೆ ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿ; ಕೊಪ್ಪಳ ಸಹಕಾರಿಯ ವತಿಯಿಂದ ಕೊಪ್ಪಳದ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಪಿ. ಸುನೀಲ್ ಕುಮಾರ ರವರ ಮುಖಾಂತರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 21,000/– ರೂ ಗಳ ದೇಣಿಗೆಯನ್ನು ನೀಡಲಾಯಿತು.

**ರಾಯಚೂರು:** ಅಶ್ವಿನಿ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು ವತಿಯಿಂದ ಸಂಯುಕ್ತ ಸಹಕಾರಿಯ ಕೊವೀಡ್–19 ಪರಿಹಾರ ನಿಧಿಗೆ ರೂ.5000/– ದೇಣಿಗೆ ನೀಡಿರುತ್ತದೆ.



**ಕೊಪ್ಪಳ :** ಕೋವಿಡ್–19 ಪರಿಹಾರ ನಿಧಿಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಪ್ರಗತಿ ಸಾಗರ ಸೌಹಾರ್ದ ಪತ್ತಿನ ಸಹಕಾರಿಯ ವತಿಯಿಂದ ಸೌಹಾರ್ದ ಸಹಕಾರಿ ನಿ; ಗಂಗಾವತಿ ನಗರದ ಮಾನ್ಯ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿ ರವರ ಮುಖಾಂತರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 21,000/– ರೂ ಗಳ ದೇಣಿಗೆಯನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್‌ರವರು, ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ರಾಜು ರವರು, ಮಾನ್ಯ ಉಪಾಧ್ಯಕ್ಷರು, ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು, ಸಿಬ್ಬಂದಿಗಳು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕುರುಗೋಡಪ್ಪ ಇವರು ಉಪಸ್ಥಿತರಿದ್ದರು.



**ಕೊಪ್ಪಳ:** ಕೋವಿಡ್–19 ಪರಿಹಾರ ನಿಧಿಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಶ್ರೀ ಗಂಗಾಧರೇಶ್ವರ ಸೌಹಾರ್ದ ಪತ್ತಿನ ಸಹಕಾರಿಯ ವತಿಯಿಂದ ಗಂಗಾವತಿ ನಗರದ ಮಾನ್ಯ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿ ರವರ ಮುಖಾಂತರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 25,000/– ರೂ ಗಳನ್ನು ಮತ್ತು ಪ್ರಧಾನ ಮಂತ್ರಿ ಪರಿಹಾರ ನಿಧಿಗೆ 25,000/– ರೂ ಗಳನ್ನು ದೇಣಿಗೆಯನ್ನು ನೀಡಲಾಯಿತು.



**ರಾಯಚೂರು :** ದಿನಾಂಕ 05.05.2020ರಂದು ಮಾನ್ವಿ ನಗರದ ಸೌಹಾರ್ದ ಸಹಕಾರಿಗಳು ಕೋವಿಡ್–19 ಮುಖ್ಯಮಂತ್ರಿಗಳ ಪರಿಹಾರ ನಿದಿಗೆ ರೂ. 120000/–ಗಳ ಚೆಕ್ ಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ ಇವರಿಗೆ ನೀಡಿದರು.



**ಕೊಪ್ಪಳ :** ಕನಕದಾಸ ಪತ್ತಿನ ಸೌಹಾರ್ದ ಸಹಕಾರ ನಿ; ಹನುಮಸಾಗರ ಈ ಸಹಕಾರಿಯ ವತಿಯಿಂದ ಕೋವಿಡ್–19 ಪರಿಹಾರ ನಿಧಿಗೆ ಸಂಬಂಧಿಸಿದಂತೆ ರಾಜ್ಯದ ಮುಖ್ಯಮಂತ್ರಿ ಪರಿಹಾರ ನಿಧಿಗೆ 25,000/– ರೂಗಳ ದೇಣಿಗೆಯನ್ನು ನೀಡಲಾಯಿತು. ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಸವರಾಜ ಅಕ್ಕಿರವರು ಮಾನ್ಯ ತಹಶೀಲ್ದಾರ ಸಿದ್ದೇಶ.ಎಮ್ ಹಾಗೂ ಮಾನ್ಯ ಪಿ.ಎಸ್.ಐ ಅಮರೀಶ್ ಹುಬ್ಬಳ್ಳಿ ರವರ ಮುಖಾಂತರ ಮುಖ್ಯಮಂತ್ರಿ ಪರಿಹಾರ ನಿಧಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು ಮತ್ತು ಸಿಬ್ಬಂದಿಗಳು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ದ್ಯಾಮಣ್ಣ ಹೆಚ್ ರವರು ಉಪಸ್ಥಿತರಿದ್ದರು.



**ಕೊಪ್ಪಳ:** ಕೋವಿಡ್–19 ಪರಿಹಾರ ನಿಧಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ವಿಶ್ವಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ವತಿಯಿಂದ ಗಂಗಾವತಿ ನಗರದ ಮಾನ್ಯ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿ ರವರ ಮುಖಾಂತರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 21,000/– ರೂ ಗಳನ್ನು ಮತ್ತು ಪ್ರಧಾನ ಮಂತ್ರಿ ಪರಿಹಾರ ನಿಧಿಗೆ 21,000/– ರೂ ಗಳನ್ನು ದೇಣಿಗೆಯನ್ನು ನೀಡಲಾಯಿತು.

# ಸೌಹಾರ್ದ ಸಹಕಾರಿಗಳು ಕೋವಿಡ್-19 ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ನೇರವಾಗಿ ಸಲ್ಲಿಸಿರುವ ಹಾಗೂ ಸಂಯುಕ್ತ ಸಹಕಾರಿ ಮೂಲಕ ಸಲ್ಲಿಸಿರುವ ವಿವರಗಳು.

- ರಾಜ್ಯದ ಸೌಹಾರ್ದ ಸಹಕಾರಿಗಳು ತಾವು ಕೋವಿಡ–19 ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ನೇರವಾಗಿ ಅಥವಾ ಸಂಯುಕ್ತ ಸಹಕಾರಿಗೆ ತಾವು ಕಳುಹಿಸಿದ ಸೌಹಾರ್ದ ಸಹಕಾರಿಗಳ ವಿವರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಈ ನಿಧಿಗೆ ತಾವು ಸಲ್ಲಿಸಿದ ವಿವರಗಳನ್ನು ಕಳುಹಿಸದಿರುವ ಸೌಹಾರ್ದ ಸಹಕಾರಿಗಳು ತಮ್ಮ ವಿವರಗಳನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿದಲ್ಲಿ ಮುಂದಿನ ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
- ಇನ್ನೂ ತಮ್ಮ ವಂತಿಗೆಯನ್ನು ಕಳುಹಿಸದಿರುವ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ತಮ್ಮ ವಂತಿಗೆಯನ್ನು ಕಳುಹಿಸಿದಲ್ಲಿ ಎಲ್ಲ ಮೊತ್ತವನ್ನು ಕ್ರೋಢೀಕರಿಸಿ ಮಾನ್ಯ ಸಹಕಾರ ಮಂತ್ರಿಗಳ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಿಸಲಾಗುವುದು.

| ಕ್ರ. ಸಂ | ಸದಸ್ಯತ್ವ ಸಂಖ್ಯೆ | ಸೌಹಾರ್ದ ಸಹಕಾರಿಗಳ ಹೆಸರು | ಜಿಲ್ಲೆ | ಮೊತ್ತ | ಪರಿಹಾರ ನಿಧಿ |
|---|---|---|---|---|---|
| | | ಬೆಂಗಳೂರು ಪ್ರಾಂತ | | | |
| 1 | BGU-061 | ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಲಿ. | ಬೆಂಗಳೂರು | 10,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 2 | CTG-030 | ವಾಸವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಚಳ್ಳಕೆರೆ | ಚಿತ್ರದುರ್ಗ | 1,00,116.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 3 | KLR-009 | ಶ್ರೀ ಸಾಯಿ ಸೌಹಾರ್ದ ಕ್ರಡಿಟ್ ಕೋ ಆಪರೇಟೀವ್ ಲಿ. | ಕೋಲಾರ | 10,000.00 | ಸಂಯುಕ್ತ ಸಹಕಾರಿ |
| 4 | SMG-001 | ಕೃಷಿಕ್ ಸೌಹಾರ್ದ ಸಹಕಾರಿ ನಿ., ಸಾಗರ | ಶಿವಮೊಗ್ಗ | 5,000.00 | ಸಂಯುಕ್ತ ಸಹಕಾರಿ |
| 5 | SMG-002 | ಸಾರಸ್ವತ ಸೌಹಾರ್ದ ಪತ್ತಿನ ಸಹಕಾರಿ ನಿ., | ಶಿವಮೊಗ್ಗ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 6 | SMG-006 | ಮಯೂರ ಸೌಹಾರ್ದ ಸಹಕಾರಿ ನಿ., ಸಾಗರ | ಶಿವಮೊಗ್ಗ | 10,000.00 | ಸಂಯುಕ್ತ ಸಹಕಾರಿ |
| 7 | SMG-009 | ಸಮೃದ್ಧ ಸೌಹಾರ್ದ ಸಹಕಾರಿ ನಿ. | ಶಿವಮೊಗ್ಗ | 10,000.00 | ಡಿಸಿ ಕಛೇರಿ |
| 8 | SMG-012 | ಅಂಭ್ರಿಣಿ ಸೌಹಾರ್ದ ಸಹಕಾರಿ ನಿ., ಸಾಗರ | ಶಿವಮೊಗ್ಗ | 10,000.00 | ಸಂಯುಕ್ತ ಸಹಕಾರಿ |
| 9 | SMG-015 | ಶ್ರೀ ರಾಮಾನುಜ ಸೌಹಾರ್ದ ಸಹಕಾರಿ ನಿ. | ಶಿವಮೊಗ್ಗ | 10,000.00 | ಡಿಸಿ ಕಛೇರಿ |
| 10 | SMG-020 | ಶಾರದಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ. | ಶಿವಮೊಗ್ಗ | 5,000.00 | ಸಂಯುಕ್ತ ಸಹಕಾರಿ |
| 11 | SMG-023 | ಜೀವನ್ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., | ಶಿವಮೊಗ್ಗ | 5,000.00 | ಸಂಯುಕ್ತ ಸಹಕಾರಿ |
| 12 | SMG-024 | ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿ ನಿ., ಹೊಸನಗರ | ಶಿವಮೊಗ್ಗ | 10,000.00 | ಡಿಸಿಸಿ ಬ್ಯಾಂಕ್ |
| 13 | SMG-027 | ಕೊಡಚಾದ್ರಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಶಿವಮೊಗ್ಗ | 10,000.00 | – |
| 14 | SMG-028 | ಅಮೃತ ಸೌಹಾರ್ದ ಸಹಕಾರಿ ನಿ., ಗರತಿಕೆರೆ | ಶಿವಮೊಗ್ಗ | 5,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |

| | | | | | |
|---|---|---|---|---|---|
| 15 | SMG-034 | ಅಂಕಿತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಾಗರ | ಶಿವಮೊಗ್ಗ | 5,000.00 | ಸಂಯುಕ್ತ ಸಹಕಾರಿ |
| 16 | SMG-039 | ಮಲೆನಾಡು ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಣಂದೂರು | ಶಿವಮೊಗ್ಗ | 10,000.00 | ಸಂಯುಕ್ತ ಸಹಕಾರಿ |
| 17 | SMG-061 | ಭದ್ರ ವೀರಶೈವ ಸೌಹಾರ್ದ ಸಹಕಾರಿ ನಿ., ಭದ್ರಾವತಿ | ಶಿವಮೊಗ್ಗ | 5,000.00 | ಸಂಯುಕ್ತ ಸಹಕಾರಿ |
| 18 | SMG-069 | ಅಕ್ಷಯ ವಿವಿದೋದ್ದೇಶ ಸೌಹಾರ್ದ ಸಹಕಾರಿನಿ., | ಶಿವಮೊಗ್ಗ | 10,000.00 | ಸಂಯುಕ್ತ ಸಹಕಾರಿ |
| 19 | SMG-070 | ಸುಮೇಧ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹೊಸನಗರ | ಶಿವಮೊಗ್ಗ | 5,000.00 | ಸಂಯುಕ್ತ ಸಹಕಾರಿ |
| 20 | SMG-078 | ಸ್ತ್ರೀಬಂಧು ಸೌಹಾರ್ದ ಸಹಕಾರಿ ನಿ. | ಶಿವಮೊಗ್ಗ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 21 | SMG-079 | ಸುಜನ ಸೌಹಾರ್ದ ಮಲ್ಟಿಪರ್ಪೋಸ್ ಕೋ ಆಪರೇಟೀವ್ ಲಿ. | ಶಿವಮೊಗ್ಗ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 22 | SMG-080 | ಕೊಡಚಾದ್ರಿ ಮಹಿಳಾ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ | ಶಿವಮೊಗ್ಗ | 10,000.00 | ಡಿಸಿಸಿ ಬ್ಯಾಂಕ್ |
| 23 | SMG-088 | ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸೌಹಾರ್ದ ಸಹಕಾರಿ ನಿ., ಸಾಗರ | ಶಿವಮೊಗ್ಗ | 5,000.00 | ಎಂಎಲ್ಎ |
| 24 | SMG-098 | ಪ್ರಾಥಮಿಕ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ | ಶಿವಮೊಗ್ಗ | 25,000.00 | ಡಿಸಿಸಿ ಬ್ಯಾಂಕ್ |
| 25 | SMG-120 | ತುಳುನಾಡು ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ | ಶಿವಮೊಗ್ಗ | 15,000.00 | ಡಿಸಿಸಿ ಬ್ಯಾಂಕ್ |
| 26 | SMG-124 | ಸಮ್ಮಿಲನ ಕೃಷಿ ಸಂಸ್ಕರಣ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ | ಶಿವಮೊಗ್ಗ | 5,000.00 | ಸಂಯುಕ್ತ ಸಹಕಾರಿ |
| 27 | SMG-127 | ವರ್ತಕರ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ | ಶಿವಮೊಗ್ಗ | 25,000.00 | ತಹಶಿಲ್ದಾರ |
| 28 | SMG-132 | ಶ್ರೀ ಭದ್ರಕಾಳಿ ಸೌಹಾರ್ದ ಸಹಕಾರಿ ನಿ., ಸಾಗರ | ಶಿವಮೊಗ್ಗ | 5,000.00 | ಡಿಸಿಸಿ ಬ್ಯಾಂಕ್ |
| ಮೈಸೂರು ಪ್ರಾಂತ | | | | | |
| 29 | HSN-011 | ಶ್ರೀ ವಾಸವಿ ವಿವಿದೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಚನ್ನರಾಯಪಟ್ಟಣ | ಹಾಸನ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 30 | HSN-020 | ಶ್ರೀ ಚೌಡೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹಿರಿಸಾವೆ | ಹಾಸನ | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 31 | CMN-010 | ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ. | ಚಾಮರಾಜನಗರ | 1,00,001.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 32 | MNG-0056 | ಶ್ರೀ ಪಂಚಶಕ್ತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡಬಿದಿರೆ | ಮಂಗಳೂರು | 25,000.00 | ಶಾಸಕರ ಪರಿಹಾರ ನಿಧಿ |
| 33 | MNG-0029 | ವಂದೇಮಾತರಂ ಸೌಹಾರ್ದ ಸಹಕಾರಿ ನಿ., ಮೂಡಬಿದಿರೆ | ಮಂಗಳೂರು | 20,000.00 | ಶಾಸಕರ ಪರಿಹಾರ ನಿಧಿ |
| | | | | 5,000.00 | ಅಗತ್ಯ ಸಾಮಗ್ರಿಗಳಿಗಾಗಿ |
| 34 | MNG-0036 | ನಾಗರಿಕ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಗುರುವಾಯನಕೆರೆ | ಮಂಗಳೂರು | 2,000.00 | ಮುಖ್ಯಮಂತ್ರಿ ಪರಿಹಾರ ನಿಧಿ |

| | | | | | |
|---|---|---|---|---|---|
| 35 | UDP-002 | ಭಾರತ್ ಪತ್ತಿನ ಸೌಹಾರ್ದ ಸಹಕಾರಿ ನಿ., | ಉಡುಪಿ | 15,000.00 | ಅಗತ್ಯ ಸಾಮಗ್ರಿಗಳಿಗಾಗಿ |
| 36 | UDP-034 | ಸ್ವರ್ಣ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ. | ಉಡುಪಿ | 20,000.00 | ಅಗತ್ಯ ಸಾಮಗ್ರಿಗಳಿಗಾಗಿ |
| 37 | UDP-052 | ಅಗ್ರಜ ಸೌಹಾರ್ದ ಸಹಕಾರಿ ನಿ. | ಉಡುಪಿ | 10,000.00 | ಅಗತ್ಯ ಸಾಮಗ್ರಿಗಳಿಗಾಗಿ |
| 38 | UDP-069 | ಅಡ್ವೆ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಉಡುಪಿ | 30,000.00 | ಅಗತ್ಯ ಸಾಮಗ್ರಿಗಳಿಗಾಗಿ |
| 39 | CKM-001 | ಗಾಯತ್ರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ | ಚಿಕ್ಕಮಗಳೂರು | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 40 | CKM-003 | ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಲಿ. ಕೊಪ್ಪ | ಚಿಕ್ಕಮಗಳೂರು | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 5,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| ಬೆಳಗಾವಿ ಪ್ರಾಂತ | | | | | |
| 41 | BGM-004 | ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೋರಗಾಂವ | ಬೆಳಗಾವಿ | 1,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 42 | BGM-418 | ಶ್ರೀ ಮಹಾತ್ಮಾ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಿಪ್ಪಾಣಿ | ಬೆಳಗಾವಿ | 1,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 43 | BGM-127 | ನೇಮಿನಾಥ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಗೋಕಾಕ | ಬೆಳಗಾವಿ | 1,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 1,00,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 44 | BGM-0112 | ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಹುಲ್ಲೋಳಿ | ಬೆಳಗಾವಿ | 1,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 45 | BJP-182 | ಹರಿಪ್ರಿಯಾ ಸೌಹಾರ್ದ ಸಹಕಾರಿ ನಿ., ತಾಳಿಕೋಟೆ | ವಿಜಯಪುರ | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 46 | BJP-200 | ಸಾವರಕರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೊಳಸಂಗಿ | ವಿಜಯಪುರ | 11,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 47 | BGK-038 | ವಿಜಯ ಸೌಹಾರ್ದ ಪತ್ತಿನ ಸಹಕಾರಿ ನಿ., ಮುಧೋಳ | ಬಾಗಲಕೋಟೆ | 5,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 5,00,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 48 | BGK-039 | ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಾಗಲಕೋಟೆ | 3,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 49 | BGK-024 | ಶ್ರೀ ಸಿದ್ದೇಶ್ವರ ಸೌಹಾರ್ದ ಸಹಕಾರಿ ನಿ., ಬೀಳಗಿ | ಬಾಗಲಕೋಟೆ | 1,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 50 | BGK-042 | ಶ್ರೀ ಮಾತಾ ಪತ್ತಿನ ಸೌಹಾರ್ದ ಸಹಕಾರಿ ನಿ., ಹುನಗುಂದ | ಬಾಗಲಕೋಟೆ | 30,000.00 | ಮುಖ್ಯಮಂತ್ರಿ ಪರಿಹಾರ ನಿಧಿ |

| | | | | | |
|---|---|---|---|---|---|
| 51 | BGK-088 | ಶ್ರೀ ಋಷಿ ಸಂಸ್ಕೃತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಬಾಗಲಕೋಟೆ | 10,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 52 | HVR-003 | ಆದಿಶಕ್ತಿ ಸೌಹಾರ್ದ ಸಹಕಾರಿ ನಿ., | ಹಾವೇರಿ | 2,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 53 | HVR-004 | ಹಿರೆಕೆರೂರು ತಾಲ್ಲೂಕಾ ವಿದ್ಯಾವರ್ಧಕ ಸೌಹಾರ್ದ ಸಹಕಾರಿ ನಿ.. | ಹಾವೇರಿ | 2,00,000.00 | ತಹಶಿಲ್ದಾರ |
| 54 | HVR-020 | ಚಿಕ್ಕೆರೂರ ಪತ್ತಿನ ಸೌಹಾರ್ದ ಸಹಕಾರಿ ನಿ., ಹಿರೆಕೆರೂರು | ಹಾವೇರಿ | 10,000.00 | ಸಂಯುಕ್ತ ಸಹಕಾರಿ |
| 55 | HVR-0119 | ಶ್ರೀ ಶ್ರೀ ಗಾಯತ್ರಿ ಸೌಹಾರ್ದ ಸಹಕಾರಿ ನಿ., | ಹಾವೇರಿ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 56 | DWD-002 | ಶ್ರೀ ವಿಜಯಲಕ್ಷ್ಮಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಧಾರವಾಡ | 1,15,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 57 | DWD-35 | ಶ್ರೀ ಹೇಮಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ | ಧಾರವಾಡ | 10,000.00 | ಸಂಯುಕ್ತ ಸಹಕಾರಿ |
| 58 | DWD-56 | ಸಿದ್ದಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಳ್ನಾವರ | ಧಾರವಾಡ | 38,800.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| ಕಲಬುರಗಿ ಪ್ರಾಂತ | | | | | |
| 59 | BDR-001 | ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ. | ಬೀದರ್ | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 60 | BDR-010 | ಚಿಟಗುಪ್ಪ ಪತ್ತಿನ ಸೌಹಾರ್ದ ಸಹಕಾರಿ ನಿ. | ಬೀದರ್ | 2,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 61 | BDR-014 | ಪಂಡೀತ್ ದೀನದಯಾಳ ಉಪಾಧ್ಯಾಯ ಸೌಹಾರ್ದ ಸಹಕಾರಿ ನಿ. | ಬೀದರ್ | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 62 | BDR-021 | ಶ್ರೀನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿ. | ಬೀದರ್ | 2,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 63 | BDR-050 | ಸ್ನೇಹ ಪತ್ತಿನ ಸೌಹಾರ್ದ ಸಹಕಾರಿ ನಿ. | ಬೀದರ್ | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 64 | BDR-108 | ಭಾರತ ಪತ್ತಿನ ಸೌಹಾರ್ದ ಸಹಕಾರಿ ನಿ. | ಬೀದರ್ | 3,001.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 65 | BDR-137 | ಲೋಕಮುದ್ರಾ ಪತ್ತಿನ ಸೌಹಾರ್ದ ಸಹಕಾರಿ ನಿ. | ಬೀದರ್ | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 66 | BEL-003 | ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ. | ಬಳ್ಳಾರಿ | 1,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 67 | BEL-175 | ಎಮ್ಮಿಗನೂರು ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 68 | RCR-0010 | ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 7,07,900.00 | ಅಗತ್ಯ ಸಾಮಗ್ರಿಗಳಿಗಾಗಿ |
| 69 | RCR-0005 | ಸ್ನೇಹಸಾಗರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 50,000.00 | ತಹಶಿಲ್ದಾರ |
| 70 | RCR-0008 | ಶ್ರೀ ಮಹಾಲಕ್ಷ್ಮಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 50,000.00 | ತಹಶಿಲ್ದಾರ |

| | | | | | |
|---|---|---|---|---|---|
| 71 | RCR-0154 | ಬಾಗಲವಾಡ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲವಾಡ | ರಾಯಚೂರು | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 72 | KPL-0004 | ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., | ಕೊಪ್ಪಳ | 50,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 50,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 73 | KPL -0005 | ಶ್ರೀ ಗಂಗಾಧರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., | ಕೊಪ್ಪಳ | 25,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 25,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 74 | KPL-0007 | ಶ್ರೀ ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 25,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 25,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 75 | KPL-0023 | ಶ್ರೀ ಭುವನೇಶ್ವರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 25,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 25,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 76 | KPL-0026 | ಶ್ರೀ ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ನಿ. | ಕೊಪ್ಪಳ | 15,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 10,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 77 | KPL-0027 | ಶ್ರೀ ನೀಲಕಂಠೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., | ಕೊಪ್ಪಳ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 15,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 78 | KPL-0036 | ಸ್ಪಂದನ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 15,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 79 | KPL-0043 | ಗಂಗೋತ್ರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ. ಗಂಗಾವತಿ. | ಕೊಪ್ಪಳ | 11,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 80 | KPL-0044 | ಶ್ರೀ ಬಸವೇಶ್ವರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 1,11,111.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 81 | KPL-0051 | ವಾಸವಿ ವಿವಿದೋದ್ಧೇಶಗಳ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 11,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 11,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |

| | | | | | |
|---|---|---|---|---|---|
| 82 | KPL-0073 | ವಿಶ್ವಾಸ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 21,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 21,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| 83 | KPL-091 | ಸೌಭಾಗ್ಯಲಕ್ಷ್ಮಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 51,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 84 | KPL-0112 | ಶ್ರೀ ಕಾಮಾಕ್ಷಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 11,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 85 | KPL-0155 | ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಿ | ಕೊಪ್ಪಳ | 21,111.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 86 | KPL-0158 | ಶ್ರೀ ವಿಜಿಯಾ ಪತ್ತಿನ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 11,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 87 | KPL-0185 | ಜಗಜ್ಯೋತಿ ಅಣ್ಣ ಬಸವಣ್ಣ ಪತ್ತಿನ ಸೌಹಾರ್ದ ಸಹಕಾರಿ ನಿ., | ಕೊಪ್ಪಳ | 11,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 88 | KSSFCL | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಸಿಬ್ಬಂದಿಗಳಿಂದ | ಬೆಂಗಳೂರು | 86,818.00 | ಸಂಯುಕ್ತ ಸಹಕಾರಿ |
| | | | | 57,99,858.00 | |



**ಕೊಪ್ಪಳ:** ದಿನಾಂಕ 26.04.2020 ರಂದು ಕೊಪ್ಪಳ ಜಿಲ್ಲೆಯ ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ; ಗಿಣಿಗೇರಿ ಸಹಕಾರಿಯಲ್ಲಿ ಸಕಲ ಜೀವರಾಶಿಗಳ ಲೇಸನೆ ಬಯಸಿದ ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಜಯಂತಿಯನ್ನು ಆಚರಿಸಲಾಯಿತು.



**ಬೆಂಗಳೂರು:** ದಿನಾಂಕ 01-05-2020 ಮಹಾಲಕ್ಷ್ಮೀ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ಮಂಜುನಾಥ ನಗರ ಬೆಂಗಳೂರು ಸಹಕಾರಿ ವತಿಯಿಂದ ಬಡಜನರಿಗೆ ಹಾಗೂ ಆಶಾ ಕಾರ್ಯಕರ್ತರಿಗೆ ದಿನ ನಿತ್ಯದ ಅಗತ್ಯ ವಸ್ತುಗಳನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಹಾಗೂ ನಗರ ಸಭೆ ಸದಸ್ಯರಾದ ಶ್ರೀ ಜಿ. ಕೃಷ್ಣಪ್ಪ ಸಹಕಾರಿಯ ಅಧ್ಯಕ್ಷರು ದಿನ ನಿತ್ಯದ ಅಗತ್ಯ ದಿನಸಿ ಪದಾರ್ಥಗಳನ್ನು ವಿತರಣೆ ಮಾಡಲಾಯಿತು.



**ಮಂಗಳೂರು:** ಕೊರೊನಾ ಲಾಕ್‌ಡೌನ್‌ನಿಂದ ಸಮಸ್ಯೆಗೊಳಗಾದ ನಂದಿಗುಡೆ ಪರಿಸರದ ಸುಮಾರು 50 ಕುಟುಂಬಕ್ಕೆ ಮಂಗಳೂರು ಸೌಹಾರ್ದ ಸಹಕಾರಿ ನಿ., ಮಂಗಳೂರು, ಶಾಂತಿನಗರ ಸೇವಾ ಸಮಿತಿ ಹಾಗೂ ಮಂಗಳೂರು ಸ್ಟೋರ್ಸ್ ವತಿಯಿಂದ ಅಕ್ಕಿ ಹಾಗೂ ದಿನಸಿ ಸಾಮಾಗ್ರಿಗಳನ್ನು ವಿತರಿಸಲಾಯಿತು.

# ಸಹಕಾರ ಸಂಸ್ಥೆಗಳ ಯಶಸ್ಸಿನ ಮೂಲ ತತ್ವಗಳು

– ಶ್ರೀ ಎಂ.ಎಸ್.ಸುಂದರ ರಾಜ್, ಅಧ್ಯಕ್ಷರು, ಕಲಾವಿದರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ

ಇಂದು ನಮ್ಮ ಸೌಹಾರ್ದ ಸಹಕಾರಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿತ್ತಿದ್ದು, ಸದಸ್ಯರ ಸಂಖ್ಯೆಯೂ ಸಹ ಏರುಗತಿಯಲ್ಲಿದೆ. ಗ್ರಾಮಾಂತರ ಪ್ರದೇಶಗಳಲ್ಲಿಯೂ ನಮ್ಮ ಸಹಕಾರಿಗಳು ಹೆಚ್ಚು ಸದ್ದು ಮಾಡುತ್ತಿವೆ. ಸಣ್ಣ ಮಟ್ಟ ಸಹಕಾರಿಗಳಲ್ಲಿಯೂ ಚುನಾವಣೆ ನಡೆಯುತ್ತಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದೆ. ಸೌಹಾರ್ದ ಸಹಕಾರಿಯ ಅಧ್ಯಕ್ಷತೆಯೆಂದರೆ ಸಮಾಜದಲ್ಲಿ ಗೌರವ ಸ್ಥಾನ. ಸಹಸ್ರಾರು ಮಂದಿಗೆ ನೌಕರಿ ನೀಡಿದ ಹೆಮ್ಮೆ ಸಹಕಾರಿ ಸಂಘಗಳಿಗಿದೆ. ಇದೆಲ್ಲಾ ಒಪ್ಪತಕ್ಕದ್ದೇ ಆದರೆ, ಸಹಕಾರಿಗಳ ಸಂಖ್ಯಾಬಲ ಜಾಸ್ತಿಯಾದರೆ ಸಾಕೆ? ಗುಣಾತ್ಮಕವಾಗಿರಬೇಕಲ್ಲವೆ? ಇದನ್ನು ನಾವೆಲ್ಲ ಇಂದು ಯೋಚಿಸಬೇಕಾಗಿದೆ. ಸಹಕಾರ ಸಂಘಗಳು ನಿಜಕ್ಕೂ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸುತ್ತಿದೆಯೇ? ಸದಸ್ಯರ ಪಾಲುಗೊಳ್ಳುವಿಕೆ ಸಮರ್ಥವಾಗಿದೆಯೆ ಎಂಬುದನ್ನು ಸ್ವಲ್ಪ ಆಲೋಚಿಸಿದರೆ, ನಿರಾಶಾಭಾವ ಮೂಡುತ್ತದೆ.

ಆಂಗ್ಲ ಭಾಷೆಯಲ್ಲಿ ಒಂದು ಉಕ್ತಿ ಇದೆ. "Successful cooperative enterprises transform a community by establishing economic democracy" ಅಂದರೆ, 'ಯಶಸ್ವಿ ಸಹಕಾರಿ ಸಂಸ್ಥೆಗಳು ಆರ್ಥಿಕ ಪ್ರಜಾಪ್ರಭುತ್ವದ ಮೂಲಕ ಸಮುದಾಯವನ್ನು ಮಾರ್ಪಾಡು ಮಾಡುತ್ತವೆ" ಎಂದು. ಇದನ್ನು ನಮ್ಮ ಸಹಕಾರಿಗಳು ಮಾಡುತ್ತಿವೆಯೆ? ಉಳ್ಳವರಿಂದ ಡಿಪಾಜಿಟ್ ಪಡೆದು, ಇಲ್ಲದವರಿಗೆ ಸಾಲ ನೀಡುವುದೇ ನಮ್ಮ ಪರಮ ಧರ್ಮ ಎಂದು ತಿಳಿದಿರುವ ಬಹುತೇಕರು ಕೊನೆಗೊಂದು ದಿನ ಕೊಟ್ಟ ಸಾಲ ವಾಪಸ್ಸು ಬರದೆ, ಠೇವಣಿ ಇಟ್ಟವರಿಗೆ ಹಣ ಸಂದಾಯಮಾಡಲಾಗದೆ ಎಂತಹ ಪರಿಸ್ಥಿತಿಯನ್ನು ಎದುರಿಸುತ್ತಾರೆಂದರೆ, ಅದನ್ನು ಕಲ್ಪಿಸಲೂ ಸಾಧ್ಯವಿಲ್ಲ. ಸಹಕಾರಿಯ ಸದಸ್ಯರಿಗಾದರೂ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೆಯೆ? ಎಂದು ಅವಲೋಕಿಸಿದರೆ ಬಹುತೇಕ ಸದಸ್ಯರು ಸುಸ್ತಿದಾರರು. ಕೆಲವರ ವಿಳಾಸ ಬದಲಾವಣೆ, ಮೊಬೈಲು ಸ್ವಿಚ್ ಆಫ್. ಹಾಗೂ ಹೀಗೂ ಅವರನ್ನು ಪತ್ತೆ ಮಾಡಿ ಮನೆಗೆ ಹೋದರೆ, ಅವರು ನೀಡುವ ನೂರೆಂಟು ತಾಪತ್ರಯಗಳನ್ನು ಕೇಳಿದರೆ, ತಲೆ ಕೆಟ್ಟು ಹೋಗುತ್ತದೆ. ಇನ್ನು ಕೆಲವು ಸಹಕಾರಿಗಳಲ್ಲಿ ನಿರ್ದೇಶಕರುಗಳು ಹೊಣೆ ಕೇವಲ ಆಡಳಿತ ಮಂಡಳಿ ಸಭೆಗಳಿಗೆ ಹಾಜರಾದರೆ ಸಾಕೆ? ಎನ್ನುವ ಪ್ರಶ್ನೆಯೂ ಮೂಡುತ್ತದೆ. ಇಂತಹ ಹತ್ತು ಹಲವಾರು ಸಮಸ್ಯೆಗಳು ನಮ್ಮ ಸಹಕಾರಿಗಳನ್ನು ಕಾಡುತ್ತಿವೆ. ಅವುಗಳಿಗೆ ಸೂಕ್ತ ಪರಿಹಾರ ಒದಗಿಸದೇ ಇದ್ದರೆ, ಸಹಕಾರ ಸಂಸ್ಥೆಗಳ ಭವಿಷ್ಯ ಕರಾಳವಾಗಲಿದೆ.




ಮೊದಲು ನಮ್ಮ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ಆಲೋಚಿಸೋಣ.

- ನಮ್ಮ ಸೌಹಾರ್ದ ಸಹಕಾರ ಸಂಸ್ಥೆಗಳು ಎಷ್ಟೇ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರಲಿ, ಅವುಗಳಿಗೆ ಸರ್ಕಾರ ಯಾವ ರೀತಿಯ ನೆರವನ್ನೂ ನೀಡದೇ ಇರುವುದು. ಸಹಕಾರಿಗಳ ಆತ್ಮವಿಶ್ವಾಸ ತುಂಬುವ ಯಾವ ಕಾರ್ಯಗಳನ್ನಾಗಲೀ, ಆರ್ಥಿಕ ನೆರವನ್ನಾಗಲೀ ಸರ್ಕಾರ ನೀಡುತ್ತಿಲ್ಲ. ಬದಲಾಗಿ ಮೂಲ ಸ್ವರೂಪದಲ್ಲಿ ನೀಡಿರುವ ಕೆಲ ಸ್ವಾತಂತ್ರ್ಯಗಳನ್ನು ಹರಣ ಮಾಡುವ ಕಾಯ್ದೆಗಳನ್ನು ತರುತ್ತಿದೆ.
- ಕಾರಣಾಂತರಗಳಿಂದ ಮುಚ್ಚಿದ ಮತ್ತು ಹಾಗೂ ಹೀಗೂ ಕಾರ್ಯ ನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳಲ್ಲಿ ಕೆಲವು ಭ್ರಷ್ಟ ಅಧಿಕಾರಿಗಳು ಅವುಗಳ ಅಸ್ಥಿತ್ವಕ್ಕೆ ಕೊಳ್ಳಿ ನೀಡುವ ಕಾರ್ಯ ಮಾಡುವವುದು ಕಂಡು ಬಂದಿದೆ.
- ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರಾದವರಿಗೆ ಸೂಕ್ತ ತರಬೇತಿಯಾಗಲೀ, ತಿಳುವಳಿಕೆಯಾಗಲೀ ಇಲ್ಲ. ತಾವು ಸದಸ್ಯರಾಗಿರುವುದೇ ಸಾಲ ಪಡೆಯಲಿಕ್ಕೆ ಎಂದು ಭಾವಿಸಿ, ಅದನ್ನು ಮರುಪಾವ್ತಿಸುವ ವಿಷಯದಲ್ಲಿ ಹಿಂದುಳಿದಿರುವುದು.
- ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ತಮಗೆ ಸೂಕ್ತ ವೇತನ ನೀಡುತ್ತಿಲ್ಲ, ಹಾಗಾಗಿ ಹಣಕ್ಕೆ ತಕ್ಕ ಕೆಲಸ ಮಾಡುವ ಧೋರಣೆಯನ್ನು ಅನುಸರಿಸುತ್ತಿರುವುದು.
- ಒಂದು ಸೌಹಾರ್ದ ಸಹಕಾರಿಗೂ, ಇನ್ನೊಂದು ಸೌಹಾರ್ದ ಸಹಕಾರಿಗೂ ಯಾವುದೇ ಸಂಬಂಧ ಇಲ್ಲದಿರುವಂತೆ ಕಾರ್ಯ ನಿರ್ವಹಿಸುತ್ತಿರುವುದು. ಇದರಿಂದ ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಸಹಕಾರಿಗಳ ಸದಸ್ಯರಾಗಿ ಸಾಲ

ಪಡೆದು ವಂಚಿಸುತ್ತಿರುವುದು ಸಹ ಸಹಕಾರಿಗಳ ಅಭ್ಯುದಯಕ್ಕೆ ತೊಡಕಾಗಿದೆ.

- ನಮ್ಮೆಲ್ಲ ಸಹಕಾರಿಗಳ ಸೂತ್ರ ಹಿಡಿದಿರುವ ಸಂಯುಕ್ತ ಸಹಕಾರಿಯು ಆರ್ಥಿಕವಾಗಿ ಸೊರಗಿರುವ ಸಹಕಾರಿಗಳ ಸಮಸ್ಯೆಗಳನ್ನು ವಿಶ್ಲೇಷಿಸುವ ಗೋಜಿಗೇ ಹೋಗುವುದಿಲ್ಲ ಮತ್ತು ಆರ್ಥಿಕ ಸಂಕಟಕ್ಕೆ ಯಾವ ನೆರವನ್ನೂ ನೀಡುತ್ತಿಲ್ಲ.
- ಇತ್ತೀಚೆಗೆ ಕರೊನಾ ರೋಗದಿಂದ ನಮ್ಮ ಸಹಕಾರಿಗಳೂ ರೋಗಪೀಡಿತವಾಗಿದ್ದು, ಯಾರೊಬ್ಬರೂ ಸಾಲ ಮರುಪಾವ್ತಿಯ ಬಗ್ಗೆ ಗಮನ ಹರಿಸುತ್ತಿಲ್ಲ. ಸಹಕಾರಿಗಳು ಬಾಗಿಲು ಮುಚ್ಚಿಯವಹಾರ ನಡೆಸಿದರೆ, ಯಾರು ತಾನೇ ಬಂದಾರು?

ಇವೆಲ್ಲ ಸಮಸ್ಯೆಗಳನ್ನು ಅವಲೋಕಿಸಿದರೆ, ನಮ್ಮ ಸಹಕಾರಿಗಳ ಮುಂದಿನ ಭವಿಷ್ಯದ ಬಗ್ಗೆ ನಿಜಕ್ಕೂ ಭಯವಾಗುತ್ತದೆ. ಸ್ವಲ್ಪ ಹಳೆಯ ಮತ್ತು ವಿಸ್ತಾರಗೊಂಡ ಸಹಕಾರಿಗಳಿಗೆ ಸಮಸ್ಯೆಗಳ ಪರಿಣಾಮ ಕಡಿಮೆ ಇರಬಹುದಾದರೂ ತೊಂದರೆ ತಪ್ಪಿದ್ದಲ್ಲ. ಕೇವಲ ಠೇವಣಿ ಆಧಾರಿತ ಸಹಕಾರ ಸಂಸ್ಥೆಗಳನ್ನು ನಡೆಸುತ್ತೇವೆಂದು ಅಂದುಕೊಂಡರೆ, ಖಂಡಿತಾ ಅದು ಭ್ರಮೆ. ಅದಕ್ಕಾಗಿ ಪ್ರತಿಯೊಂದು ಸಹಕಾರಿಗಳೂ ಸಹ ಪರ್ಯಾಯ ಆದಾಯದ ಮೂಲಗಳನ್ನು ಹುಡುಕಿಕೊಳ್ಳಬೇಕು. ಅನಾವಶ್ಯಕ ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಸಾಲ ವಸೂಲಾತಿಗೆ ಎಲ್ಲ ನಿರ್ದೇಶಕರೂ ಸಹ ಇದು ತಮ್ಮದೇ ಕೆಲಸವೆಂದು ಭಾವಿಸಿ, ಸಹಕರಿಸಬೇಕು. ಕೆಲವು ಸಹಕಾರಿಗಳು ಸಾಲ ವಸೂಲಾತಿಗೆ ಬಂದ ನಿರ್ದೇಶಕರುಗಳಿಗೆ ಭತ್ಯೆ ನೀಡುವ ಪದ್ಧತಿಯನ್ನು ಅನುಸರಿಸುತ್ತಿವೆ. ಇದು ಸಹಕಾರಿಗಳ ಮೇಲೆ ದುಷ್ಪರಿಣಾಮ ಬೀರುವ ಸಂಭವವಿರುತ್ತದೆ. ಆದರೆ ಸಾಲ ವಸೂಲಾತಿಗೆ ತಗಲುವ ವೆಚ್ಚವನ್ನು ಸಾಲಗಾರನ ಖಾತೆಗೆ ವರ್ಗಾಯಿಸಿ, ಬಳಸಬಹುದು. ಅನಾವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕಬೇಕು.

**ಯಶಸ್ವಿ ಸಹಕಾರ ಸಂಸ್ಥೆಗಳಿಗೆ ಮಾರ್ಗದರ್ಶಿ ಸೂತ್ರಗಳು :**

1. ಸಮುದಾಯದ ಅವಶ್ಯಕತೆಗಳನ್ನು ಸದಸ್ಯರ ಮೂಲಕ ಪೂರೈಸಬೇಕು. ಸಹಕಾರಿಯು ಕೈಗೊಳ್ಳುವ ಯಾವುದೇ ಒಳ್ಳೆಯ ಕ್ರಮಗಳು ಅವಶ್ಯಕತೆಗೆ ತಕ್ಕಂತೆ ಇದ್ದರೆ ಮಾತ್ರ ಯಶಸ್ವಿಯಾಗುತ್ತದೆ ಎಂಬುದನ್ನು ಮನಗಾಬೇಕು.
2. ಪ್ರತಿಯೊಂದು ಸಹಕಾರಿ ಸಂಸ್ಥೆಗಳಲ್ಲಿಯೂ ಕೆಲವರಾದರೂ ಬದ್ಧತೆಯಿರುವ ವ್ಯಕ್ತಿಗಳಿರುತ್ತರೆ. ಅವರ ನೆರವನ್ನು, ಸಲಹೆಯನ್ನು ಪಡೆಯಿರಿ. ಅಂತಹವರು ನಿಜವಾಗಿಯೂ ಸಹಕಾರಿಯ ಆಸ್ತಿಯಂತಿರುತ್ತಾರೆ. ಅಂತಹವರನ್ನು ಗುರುತಿಸುವ ಶಕ್ತಿ ಮಾತ್ರ ಇರಬೇಕು.
3. ಸಹಕಾರಿ ತತ್ವಗಳ ಬಗ್ಗೆ ಅರಿವಿರಲಿ. ಅವುಗಳ ಮೌಲ್ಯದ ಬಗ್ಗೆ ಗೌರವವಿರಲಿ. ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಸಹಕಾರಿಯ ಕಾರ್ಯ ತಮ್ಮದೇ ಕಾರ್ಯ ಎಂಬ ಅರಿವು ಹೊಂದಿರುವುದು, ಪ್ರಾಮಾಣಿಕತೆ ಮೆರೆಯುವುದು ಅವಶ್ಯಕ.
4. ಕಾರ್ಯಸಾಧ್ಯತೆಯ ಬಗ್ಗೆ ಎಚ್ಚರಿಕೆಯ ಅವಲೋಕನವಿರಬೇಕು. ಯವುದೇ ಒಂದು ಯೋಜನೆಯನ್ನು ಜಾರಿಗೆ ತರುವುದಕ್ಕಿಂತ ಮುನ್ನ ಸಾಧ್ಯಾಸಾಧ್ಯತೆಗಳ 'ಮೌಲ್ಯ ಮಾಪನ ಮಾಡಿದಾಗ ಮಾತ್ರ ಅದು ಯಶಸ್ವಿಯಾಗಲು ಸಾಧ್ಯ.
5. ಒಮ್ಮತದಿಂದ ನೀತಿ-ನಿರೂಪಣೆ ಅತ್ಯವಶ್ಯಕ. ಇದರಿಂದ ಎಲ್ಲ ಆಡಳಿತ ಮಂಡಳಿಯವರೂ ಸಹ ಕ್ರಿಯಾಶೀಲವಾಗಿ ಪಾಲ್ಗೊಳ್ಳಲು ಸಾಧ್ಯವಾಗುವುದಲ್ಲದೆ, ಸಹಕಾರಿಯು ಲಾಭ ಗಳಿಸುವದರತ್ತ ಸಾಗುತ್ತದೆ.
6. ಎಲ್ಲ ಸದಸ್ಯರು ಸಕ್ರಿಯವಾಗಿ ಪಾಲ್ಗೊಳ್ಳಲು ಕಾರ್ಯಕ್ರಮಗಳನ್ನು ರೂಪಿಸಬೇಕು. ಸದಸ್ಯರಿಗೆ ತಮ್ಮ ಜವಾಬ್ದಾರಿಯನ್ನು ಮನಮುಟ್ಟುವಂತೆ ಅರಿವನ್ನುಂಟು ಮಾಡುವುದು ಅತಿ ಅವಶ್ಯಕ. ಸದಸ್ಯರಿಗೆ ಆಗಾಗ್ಗೆ ಸಹಕಾರಿ ನೀತಿಯ ಬಗ್ಗೆ ತಿಳುವಳಿಕೆ ನೀಡಲು ಯೋಗ್ಯ ಮಾರ್ಗದರ್ಶನ ಮಾಡಬೇಕು. ಅದಕ್ಕಾಗಿ ಕೆಲ ವಿಶೇಷ ಸಂದರ್ಭಗಳಲ್ಲಿ ಅಂದರೆ, ಸಹಕಾರಿ ಸಪ್ತಾಹ, ಸ್ಥಾಪನಾ ದಿನವನ್ನು ಆಚರಿಸಿ ಎಲ್ಲ ಸದಸ್ಯರನ್ನೂ ಆಹ್ವಾನಿಸುವುದೊಳಿತು.

ಇವೆಲ್ಲವುಗಳಿಗಿಂತ ಜವಾಬ್ದಾರಿ ಅರಿತವರು ಸಹಕಾರಿ ಸಂಘಗಳ ಸದಸ್ಯರಾಗಬೇಕು ಮತ್ತು ಆಡಳಿತ ಮಂಡಳಿಗೆ ಆರಿಸಿ ಬರಬೇಕು. ಸರ್ಕಾರ ನ್ಯಾಯ ಬೆಲೆ ಅಂಗಡಿಗಳನ್ನು ನಡೆಸಲು ಸೌಹಾರ್ದ ಸಹಕಾರಿಗಳಿಗೆ ಅವಕಾಶ ಕಲ್ಪಿಸಿ ಕೊಡಬೇಕು. ಸಂಯುಕ್ತ ಸೌಹಾರ್ದ ಸಹಕಾರಿಯು ಎಲ್ಲ ಸೌಹಾರ್ದ ಸಹಕಾರಿ ಸಂಸ್ಥೆಗಳ ಮೇಲೆ ಹದ್ದಿನ ಕಣ್ಣು ಇಟ್ಟಿರಬೇಕು. ಆರ್ಥಿಕವಾಗಿ ದುರ್ಬಲವಾದ ಸಹಕಾರಿಗಳಿಗೆ ಸುಲಭ ಸಾಲ ನೀಡುವ ಪದ್ಧತಿಯನ್ನು ಜಾರಿಗೆ ತರಬೇಕು. ಒಂದು ಸೌಹಾರ್ದ ಸಹಕಾರಿಯ ಹಣವನ್ನು ಸಹೋದರ ಸಹಕಾರಿಗಳಲ್ಲಿ ಠೇವಣಿ ನೀಡುವ ಪದ್ಧತಿಯನ್ನು ಸಹ ಜಾರಿಗೆ ತರಬೇಕು. ಇದರಿಂದ ಸಹಕಾರಿಗಳು ಸಬಲವಾಗಲು ಸಾಧ್ಯವಾಗುತ್ತದೆ. ಸಹಕಾರಿ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ವರ್ಷಕ್ಕೆ ಎರಡು ಬಾರಿಯಾದರೂ ತರಬೇತಿ ನೀಡುವ ಕಾರ್ಯಕ್ರಮವನ್ನು ಜಾರಿಗೆ ತರಬೇಕು. ಸರ್ಕಾರ ಸಹ ಸೌಹಾರ್ದ ಸಹಕಾರಿಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ನೀಡುವ ಪದ್ಧತಿ ಜಾರಿಗೆ ತರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಆಡಳಿತ ಮಂಡಳಿಯ ಸದಸ್ಯರಲ್ಲಿ ಸಾಮರಸ್ಯ, ಒಟ್ಟಾಗಿ ಕೆಲಸ ಮಾಡುವ ಮನಸ್ಸು ಇರಬೇಕು. ಸದಸ್ಯರು ತಾವು ಪಡೆದ ಸಲವನ್ನು ಕಾಲಕ್ಕೆ ಸರಿಯಾಗಿ ಪಾವ್ತಿಸುವಂತೆ ನೊಡಿಕೊಳ್ಳಬೇಕು.

# ಕೊರೋನ ವೈರಸ್ : ಮುಂದೇನು?

–ಸಿ ಎ॥ ಬಿ.ವಿ.ರವೀಂದ್ರನಾಥ್, ಸಾಗರ

ಕೊರೋನ ಎಂಬುದು ಪ್ರಚಲಿತ ವಿದ್ಯಮಾನಗಳಲ್ಲಿ ಅತಿ ಗಂಭೀರ ಪರಿಣಾಮವನ್ನುಂಟುಮಾಡಿರುವ ಪ್ರಾಕೃತಿಕ ವಿಪ್ಲವ. ಇಡೀ ಪ್ರಪಂಚವನ್ನೇ ಇನ್ನಿಲ್ಲದಂತೆ ಬಾಧಿಸಿದ ಸಂಗತಿ. ಇದು ಏನು, ಎತ್ತ, ಕಾರಣ ಏನು ಎಂಬುದು ಈಗ ನಮಗೆ ಅಪ್ರಸ್ತುತ. ಆದರೆ ಸಹಕಾರೀ ಕ್ಷೇತ್ರದ ಮೇಲೆ ಆಗುವ ಇದರ ಪರಿಣಾಮ ನಿಜಕ್ಕೂ ನಮ್ಮೆಲ್ಲರನ್ನೂ ಚಿಂತೆಗೀಡುಮಾಡುತ್ತದೆ.

ಸಹಕಾರಿ ಕ್ಷೇತ್ರ ಇತ್ತೀಚಿನ ದಿನಗಳಲ್ಲಿ ಅನೇಕ ಬಾಹ್ಯ ಮತ್ತು ಆಂತರಿಕ ಅಪಾಯಗಳನ್ನು ಎದುರಿಸುತ್ತಾ ಒಂದು ರೀತಿಯಲ್ಲಿ ಅಸ್ತಿತ್ವದ ಪರ್ವಕಾಲದಲ್ಲಿದೆ. ಒಂದು ಕಾಲದಲ್ಲಿ ಏಕಸ್ವಾಮ್ಯತೆಯಾಗಿ ಉಳಿದಿದ್ದ ಸಹಕಾರೀ ಕ್ಷೇತ್ರದ ಉದ್ದಿಮೆಗಳು ಈಗ ಬ್ಯಾಂಕುಗಳು, ಕಂಪೆನಿಗಳು, ದೊಡ್ಡ ಕೈಗಾರಿಕೆಗಳು, ಸೇವಾದಾತರು, ಸ್ವಸಹಾಯ ಗುಂಪುಗಳು, ಮೈಕ್ರೋ ಫೈನಾನ್ಸ್‌ಗಳು, ಇತ್ಯಾದಿಗಳಿಂದಾಗಿ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಹೆಣಗಾಡ ಬೇಕಾದ ಪರಿಸ್ಥಿತಿ ಬಂದಿದೆ. ದಿನೇ ದಿನೇ ಬದಲಾಗುವ ಕಾನೂನುಗಳು, ತೆರಿಗೆ ಕಾಯ್ದೆಗಳು, ವ್ಯಾವಹಾರಿಕ ಮಿತಿಗಳು, ಸಹಕಾರೀ ಕ್ಷೇತ್ರದ ಅಸ್ತಿತ್ವವನ್ನು ಅಲುಗಾಡಿಸುತ್ತಿದ್ದರೆ ಜಾಗತಿಕ ವಹಿವಾಟಿನ ರೀತಿನೀತಿ, ಇಂಟರ್ನೆಟ್, ಮಾಹಿತಿ ತಂತ್ರಜ್ಞಾನ, ಡಿಜಿಟಲೀಕರಣಗಳ ಪ್ರಭಾವ, ಖಾಸಗಿ ಬಂಡವಾಳಶಾಹಿಗಳ ವ್ಯವಹಾರಗಳ ರೀತಿ, ಇವುಗಳು ಸಹಕಾರಿ ಕ್ಷೇತ್ರವನ್ನು ಅವ್ಯಾಹತವಾಗಿ ನರಳಿಸುತ್ತಿದೆ. ಇವುಗಳ ಜೊತೆ ಜೊತೆಯಲ್ಲೇ ಇದೀಗ ಕೊರೋನ ಪ್ರಭಾವದಿಂದಾಗಿ ಅನೇಕ ಸಹಕಾರಿಗಳ ಮನದಲ್ಲಿ ಭವಿಷ್ಯದ ಬಗ್ಗೆ ಆತಂಕದ ಕಾರ್ಮೋಡ ಹೆಪ್ಪುಗಟ್ಟಿಸುತ್ತಿದೆ.

ಭಾರತ ಈಗ ಕೊರೋನದ ಮೂರನೇ ಹಂತದಲ್ಲಿದೆ. ತಜ್ಞರ ಪ್ರಕಾರ ಇನ್ನೂ ಒಂದು ತಿಂಗಳು ಅಥವಾ ಇನ್ನೂ ಹೆಚ್ಚು ದಿನಗಳ ಕಾಲ ಇದು ಇರುತ್ತದೆ. ನಂತರದಲ್ಲಿ ಒಂದೆರಡು ತಿಂಗಳುಗಳು ವ್ಯವಹಾರಗಳನ್ನು ಪೂರ್ವಸ್ಥಿತಿಗೆ ತರಲು ಬೇಕಾಗಬಹುದು. ಅಂದರೆ ಈ ವರ್ಷ ಸರಿ ಸುಮಾರು ಆಗಸ್ಟ್ ಯಾ ಸೆಪ್ಟೆಂಬರ್ ತಿಂಗಳಿನಿಂದ ವ್ಯವಹಾರವನ್ನು ನಾವು ಪೂರ್ಣಪ್ರಮಾಣದಲ್ಲಿ ಶುರುಮಾಡಬಹುದು ಎಂಬುದು ಈಗಿನ ಒಂದು ಅಂದಾಜು.

2019–20ರ ಆರ್ಥಿಕ ವರ್ಷದ ಕೊನೆಯ ತಿಂಗಳಿನ ಕೊನೆಯ ದಿನಗಳಲ್ಲಿ ಈ ಕೊರೋನ ವಕ್ಕರಿಸಿದ್ದರಿಂದ ಹೆಚ್ಚಿನ ಸಹಕಾರಿಗಳ 2019–20ರ ಆರ್ಥಿಕ ವರ್ಷದ ಆರ್ಥಿಕ ಫಲಿತಾಂಶ ಗಂಭೀರವಾಗಿ ವ್ಯತ್ಯಾಸವಾಗಲಾರದು. ಹೆಚ್ಚಿನ ಸಹಕಾರಿಗಳು ತಮ್ಮ ಫಲಿತಾಂಶವನ್ನು ಹಿಂದಿನ ವರ್ಷಕ್ಕಿಂತ ಉತ್ತಮಪಡಿಸಿಕೊಳ್ಳಲು ಆಗದಿದ್ದರೂ ಸಮಸ್ಥಿತಿ ಕಾಯ್ದುಕೊಳ್ಳಲು ಸಫಲರಾಗಿದ್ದಾರೆ.

ಆದರೆ ಹೆಚ್ಚಿನ ಸಹಕಾರಿಗಳು 2020–21ರ ಆರ್ಥಿಕ ವಹಿವಾಟು ಹಿನ್ನೆಡೆಯಾಗುತ್ತದೆ ಎಂದು ಈಗಲೇ ಆತಂಕಕ್ಕೆ ಒಳಗಾಗಿದ್ದಾರೆ. ಯೋಚಿಸಬೇಕಾದ್ದೆ ಆದರೂ ಚಿಂತಿಸಬೇಕಾಗಿಲ್ಲ ಎಂದು ನನ್ನ ಅನಿಸಿಕೆ. ನಿಜ, ಈ ಕೊರೋನ ವೈರಾಣು ಇನ್ನಿಲ್ಲದ ಸಂಕಷ್ಟದ ಸರಮಾಲೆಯನ್ನೇ ತಂದೊಡ್ಡುವುದೇನೋ ಎಂದೆಲ್ಲಾ ಅನ್ನಿಸುತ್ತದೆ. ಕೆಲವರಂತೂ ಈಗಲೇ ನಮ್ಮ ಸಹಕಾರಿಯನ್ನು ಮುನ್ನಡೆಸುವುದು ಹೇಗೆ ಎಂಬ ಆತಂಕದಿಂದ ಸಮಾಪನೆಯ ಮಾತುಗಳನ್ನಾಡಲು ಶುರು ಮಾಡಿದ್ದಾರೆ. ನಮಗೆ ಗೊತ್ತಿದೆ ಸಂಕಷ್ಟದ ಸಮಯದಲ್ಲಿ ಎಣ್ಣೆ ಚೆಲ್ಲಿಕೊಂಡವನೂ ಅಳುತ್ತಾನೆ, ತೆಂಗಿನಕಾಯಿ ಚೆಲ್ಲಿಕೊಂಡವನೂ ಅಳುತ್ತಾನೆ. ನಾವು ಎಣ್ಣೆ ಚೆಲ್ಲಿಕೊಂಡವರೋ ತೆಂಗಿನಕಾಯಿ ಚೆಲ್ಲಿಕೊಂಡವರೋ ವಿಮರ್ಶಿಸಿಕೊಳ್ಳೋಣ. ಸಹಕಾರಿ ಕ್ಷೇತ್ರವನ್ನು ಸಮಗ್ರ ದೇಶದ ಆರ್ಥಿಕ ಸ್ಥಿತಿಯ ಹಿನ್ನೆಲೆಯಲ್ಲಿ ನೋಡಿದರೆ ಈ ರೀತಿಯ ಆತಂಕಗಳಿಗೆ ಕಾರಣವಿರಲಾರದು ಎನಿಸುತ್ತದೆ. ಆದರೆ ಒಂದು ಮಾತ್ರ ನಿಜ, ನಮ್ಮ ಸಂಸ್ಥೆಯ, ವ್ಯವಹಾರದ ಬಗ್ಗೆ ಗಂಭೀರವಾಗಿ ಮರು ಚಿಂತನೆ ನಡೆಸುವ ಕಾಲ ಸನ್ನಿಹಿತವಾಗಿದೆ.

ಒಂದೊಂದಾಗಿ ಕೆಲವು ಸನ್ನಿವೇಶಗಳನ್ನ ವಿಶ್ಲೇಷಿಸೋಣ. ಮೊದಲನೆಯದಾಗಿ ಹೆಚ್ಚಿನ ಸಹಕಾರಿಗಳು ಪತ್ತಿನ ಚಟುವಟಿಕೆ ನಡೆಸುತ್ತಿದ್ದು ಈಗಿನ ಪರಿಸ್ಥಿತಿ ಅವರಿಗೆ ಭಿನ್ನ ಸನ್ನಿವೇಶ ಎದುರಿಸುವಂತಾಗಿದೆ. ಹೆಚ್ಚಿನ ಸಹಕಾರಿಗಳಿಗೆ ತಾವು ನೀಡಿದ ಸಾಲಗಳನ್ನು ವಸೂಲು ಮಾಡುವುದು ಹೇಗೆ ಎಂಬ ಚಿಂತೆ ಶುರುವಾಗಿದೆ. ಒಂದು ಸಂಗತಿ ಗಮನದಲ್ಲಿರಲಿ, ನಾವು ಸಾಲ ನೀಡುವಾಗ ಸರಿಯಾಗಿ ಪರಿಶೀಲಿಸಿ ಸಾಲ ನೀಡಿದ್ದೇ ಆದಲ್ಲಿ ಅಂತಹ ಸಾಲಗಳ ಬಗ್ಗೆ ಚಿಂತೆ ಬೇಡ. ಅದರ ವಸೂಲಾತಿ ಸ್ವಲ್ಪ ನಿಧಾನವಾಗಬಹುದು. ಆದರೆ ಬರದೇ ಹೋಗಲಾರದು. ಪ್ರತಿಯೊಬ್ಬ ಸಾಲಗಾರರ ಸತತ ಸಂಪರ್ಕದಲ್ಲಿರೋಣ. ಎಲ್ಲ ಸಾಲಗಾರರೊಂದಿಗೆ ಸಾಮೂಹಿಕವಾಗಿ ಅಥವಾ ವೈಯಕ್ತಿಕವಾಗಿ

ಚರ್ಚಿಸೋಣ. ಅವಶ್ಯಕವಾದರೆ ಅಂತಹ ಸಾಲಗಳ ಕಂತು ಯಾ ಅವಧಿ ಯಾ ಬಡ್ಡಿ ದರವನ್ನು ಮರುನಿಗದಿಗೊಳಿಸೋಣ. ಇಂತಹ ಸಂದರ್ಭಗಳಲ್ಲಿ ನಮ್ಮ ಗ್ರಾಹಕರನ್ನು ಉಳಿಸಿಕೊಳ್ಳುವುದೂ ಅಷ್ಟೇ ಪ್ರಮುಖವಾಗುತ್ತದೆ. ಇದಕ್ಕೆ ನಾವು ಆದ್ಯತೆ ನೀಡಲೇಬೇಕಿದೆ.

ಎರಡನೆಯದಾಗಿ ನಮ್ಮ ಹಣಕಾಸಿನ ಮೂಲವಾದ ಠೇವಣಿಗಳ ಬಗ್ಗೆ ಯೋಚಿಸುವ ಕಾಲ ಬಂದಿದೆ. ನೆನಪಿರಲಿ ಸಹಕಾರಿಯಲ್ಲಿ ಠೇವಣಿ ಇರಿಸುವ ಹೆಚ್ಚಿನ ಸದಸ್ಯರು ನಮ್ಮ ಬಡ್ಡಿ ದರದ ಆಮಿಷಕ್ಕೊಳಗಾಗಿರುತ್ತಾರೆ. ನಂತರ ಭದ್ರತೆಯ ಬಗ್ಗೆ ಯೋಚಿಸುತ್ತಾರೆ. ಮತ್ತು ಪ್ರವರ್ತಕರ, ಆಡಳಿತ ಮಂಡಳಿಯವರೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡಿರುತ್ತಾರೆ. ನಮಗೆ ಕಾಯ್ದೆಯು ನಮ್ಮ ನಿವ್ವಳ ಬಂಡವಾಳದ (Net Owned Funds) ಇಂತಿಷ್ಟು ಪಟ್ಟು ಸಾಲ ಯಾ ಠೇವಣಿ ಸಂಗ್ರಹಿಸಲು ಅವಕಾಶ ಮಾಡಿಕೊಟ್ಟಿದೆ ಅಂದ ಮಾತ್ರಕ್ಕೆ ಅಷ್ಟು ಠೇವಣಿ ಸಂಗ್ರಹಿಸಲು ಮುಂದಾಗಬೇಕು ಎಂದಲ್ಲ. ನೆನಪಿರಲಿ ನಮ್ಮ ನಿವ್ವಳ ಬಂಡವಾಳವನ್ನು ಹೆಚ್ಚುಮಾಡಿಕೊಳ್ಳುವುದು ನಮ್ಮ ಆದ್ಯತೆಯಾಗಿರಬೇಕೇ ಹೊರತು ದುಡಿಯುವ ಬಂಡವಾಳ ಹೆಚ್ಚು ಮಾಡುವುದಲ್ಲ. ಅರ್ಥವಾಗಿರಬಹುದು. ಹೌದು, ದೀರ್ಘಾವಧಿಯಲ್ಲಿ ನಮ್ಮ ಸಂಸ್ಥೆ ಗಟ್ಟಿಯಾಗುವುದು, ಯಾವುದೇ ಸನ್ನಿವೇಶಗಳನ್ನೂ ಎದುರಿಸಲು ಶಕ್ತವಾಗುವುದು ಸಂಸ್ಥೆಯ ಆಂತರಿಕ ಆರ್ಥಿಕ ಮೌಲ್ಯದಿಂದಾಗಿಯೇ ಹೊರತು ಅದರ ವಹಿವಾಟು ಅಥವಾ ದುಡಿಯುವ ಬಂಡವಾಳದಿಂದಲ್ಲ. ಹಾಗಾಗಿ ಈಗ ನಮ್ಮ ಸಂಸ್ಥೆಯ ಬಗ್ಗೆ ಈ ನಿಟ್ಟಿನಿಂದ ಯೋಚಿಸುವ ಕಾಲಬಂದಿದೆ. ಠೇವಣಿಗಳನ್ನು ಠೇವಣಿ ಸಂಗ್ರಹಿಸುವ ವಿಧಾನವನ್ನು ಮರುಪರಿಶೀಲನೆಗೊಳಿಸೋಣವೇ. ಅವುಗಳ ಮೇಲಿನ ಖರ್ಚನ್ನು ಅಂದರೆ ಬಡ್ಡಿಯಾಗಿರಬಹುದು, ಸಂಗ್ರಹಣೆಯ ವೆಚ್ಚವಾಗಿರಬಹುದು, ನಿರ್ವಹಣೆಯ ವೆಚ್ಚವಾಗಿರಬಹುದು, ಮರುಪಾವತಿಯ ಹೊಣೆಗಾರಿಕೆಯಾಗಿರಬಹುದು ಎಲ್ಲವನ್ನೂ ಸೂಕ್ತವಾಗಿ ಯೋಚಿಸಿಯೇ ನಿರ್ವಹಿಸಬೇಕಲ್ಲವೆ? ಹಾಗಾಗಿ ಇದೀಗ ನಾವು ಚಿಂತನೆ ನಡೆಸಬೇಕಾಗಿದೆ, ನಮ್ಮ ಅಗತ್ಯವೇನು, ಅನಿವಾರ್ಯತೆಯೇನು, ಎಷ್ಟನ್ನು ನಾವು ಅರಗಿಸಿಕೊಳ್ಳಬಹುದು, ನಿರ್ವಹಿಸಬಹುದು, ಲಾಭವಾಗಿ ಪರಿವರ್ತಿಸಬಹುದು ಎಂಬುದನ್ನು ಲೆಕ್ಕಾಚಾರ ಹಾಕಿ ಅಂತಹ, ಅಷ್ಟು ಮಾತ್ರ ಠೇವಣಿ ಸಂಗ್ರಹಣೆಗೆ ಮುಂದಾಗೋಣ, ಈಗಾಗಲೇ ಈ ನಿಟ್ಟಿನಲ್ಲಿ ಯೋಚಿಸಿದಾಗ ನಮ್ಮಲ್ಲಿ ಹೆಚ್ಚಿದೆ ಎನಿಸಿದರೆ ಮರುಪಾವತಿಸಿ ಭಾರ ಇಳಿಸಿಕೊಳ್ಳೋಣ.

ಮೂರನೆಯದಾಗಿ ಮುಂದಿನ ದಿನಗಳನ್ನು ಅನುಶಾಸನ ಪರ್ವ ಎಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಸಹಕಾರ ಕ್ಷೇತ್ರವನ್ನು ಇದುವರೆಗೂ ಅಂದರೆ ಹಲವು ದಶಕಗಳಿಂದ ಬೇಕಾಗಿಯೋ ಅಥವಾ ರಾಜಕೀಯ ಕಾರಣಕ್ಕಾಗಿಯೋ ಶಿಶುಪಾಲನೆ (Incubator) ಕೇಂದ್ರದಲ್ಲಿಟ್ಟು ರಕ್ಷಿಸುತ್ತಾ ಬರಲಾಗಿದೆ. ಆದರೆ ಇದೀಗ ಬದಲಾವಣೆಯ ಪರ್ವಕಾಲ ಬಂದಿದೆ. ಸಹಕಾರ ಕ್ಷೇತ್ರವನ್ನು ಇತರೆ ಅಂದರೆ ಕಾರ್ಪೋರೇಟ್ ಅಥವಾ ಇನ್ನಿತರೆ ಬ್ಯಾಂಕಿಂಗ್ ಕ್ಷೇತ್ರಗಳಿಗೆ ಹೋಲಿಸಿ ಸಮಾನ ನೀತಿಗಳನ್ನು ರೂಪಿಸಲಾಗುತ್ತಿದೆ. ನಮಗಿರುವ ಅಥವಾ ನಮಗಿದ್ದ ಸವಲತ್ತುಗಳಿಗೆ ಕಡಿವಾಣ ಹಾಕಲಾಗುತ್ತಿದೆ. ಎಲ್ಲರಿಗೂ ಅನ್ವಯಿಸುವುದು ನಮಗೂ ಅನ್ವಯ ಎಂಬ ನೀತಿ ಕಂಡುಬರುತ್ತಿದೆ. ತೆರಿಗೆ ವಿಷಯದಲ್ಲಿರಬಹುದು, ನಿರ್ವಹಣೆಯ ವಿಷಯಗಳಿರಬಹುದು, ಅಂದರೆ ಸಹಕಾರೀ ಕ್ಷೇತ್ರದ ಪೋಷಣಾ ಅವಧಿ ಮುಗಿಯುತ್ತ ಬಂದಿದೆ, ವಿಶೇಷವಾಗಿ ಪತ್ತಿನ ಸಹಕಾರಿಗಳು, ನಾವು ಮುಂದಿನ ದಿನಗಳಲ್ಲಿ ನಮ್ಮ ಕ್ಷೇತ್ರಕ್ಕೆ ಸರಕಾರದಿಂದ ಹೆಚ್ಚಿನ ರಿಯಾಯಿತಿ, ಮೃದು ಧೋರಣೆ, ವಿನಾಯಿತಿಗಳನ್ನು ನಿರೀಕ್ಷಿಸುವುದನ್ನು ಬಿಡುವುದು ಒಳಿತು. ಬದಲಿಗೆ ನಾವೂ ಇತರರಂತೆ ಎಲ್ಲ ಶಾಸನ ಮತ್ತು ಅನುಶಾಸನಗಳಿಗೆ ಬದ್ಧರು ಎಂಬುದನ್ನು ಮನಗಾಣೋಣ. ಮಾನಸಿಕವಾಗಿ ಸಿದ್ಧರಾಗೋಣ ಇದರಿಂದಾಗಿ ನಮಗೆ ದೊರೆಯದ ವಿನಾಯಿತಿ, ರಿಯಾಯಿತಿಗಳ ಬಗ್ಗೆ ಮರುಗುವುದು ತಪ್ಪುತ್ತದೆ.

ನಾಲ್ಕನೆಯದಾಗಿ ನಾವು ಸಹಕಾರಿಗಳು ಒಂದನ್ನು ನೆನಪಿಡಬೇಕು ನಾವು ಯಾವುದೇ ಕಾನೂನಿಗೆ ಅತೀತರಲ್ಲ. ಕಾನೂನನ್ನು ಅದರ ಪರಿಮಿತಿಯಲ್ಲೇ ಗೌರವಿಸಬೇಕು. ಅಂದರೆ ಕಾನೂನುಗಳನ್ನು ನಮ್ಮ ಮೂಗಿನ ನೇರಕ್ಕೆ ಅರ್ಥೈಸುವುದರ ಬದಲಿಗೆ ಕಾನೂನಿನ ಘನ ಉದ್ದೇಶಗಳನ್ನು ಗೌರವಿಸುವ ರೀತಿಯಲ್ಲಿ ನಮ್ಮ ಬೈಲಾ, ಕಾರ್ಯವೈಖರಿ, ಆಡಳಿತಾತ್ಮಕ ನಡೆಗಳು, ವ್ಯಾವಹಾರಿಕ ರೀತಿನೀತಿಗಳು, ಆರ್ಥಿಕ ಚಟುವಟಿಕೆಗಳು, ದಾಖಲಾತಿ ಪದ್ಧತಿ, ಎಲ್ಲವೂ ಇರಬೇಕು. ಇಲ್ಲವಾದಲ್ಲಿ ಗಂಭೀರ ಆರ್ಥಿಕ ಪರಿಣಾಮ ಬೀರುವ ಕಾನೂನಿನ ಕ್ರಮಗಳಿಗೆ ತಲೆಕೊಡಬೇಕಾದೀತು. ಈಗಂತೂ ಅನೇಕಾನೇಕ ಕಾನುನುಗಳು ಬಂದಿವೆ, ಸಹಕಾರಿಗಳಿಗೂ ಸಂಪೂರ್ಣವಾಗಿ ಅನ್ವಯಿಸುತ್ತವೆ. ಆದ್ದರಿಂದ ಅವುಗಳ ಅನುಪಾಲನೆಗೆ ಒತ್ತುಕೊಟ್ಟೇ ನಮ್ಮ ವ್ಯವಹಾರವನ್ನು ಅಭಿವೃದ್ಧಿಗೊಳಿಸುವ ಯೋಜನೆಗಳನ್ನು ರೂಪಿಸಬೇಕು, ಹಮ್ಮಿಕೊಳ್ಳಬೇಕು, ಜಾರಿಗೊಳಿಸಬೇಕು. ಮೀಸಲು ಮತ್ತಿತರ ನಿಧಿಗಳ ನಿರ್ವಹಣೆ, ದ್ರವ್ಯಾಸ್ತಿ ನಿರ್ವಹಣೆ, ಜಿ.ಎಸ್.ಟಿ, ಆದಾಯ ತೆರಿಗೆ, ವೃತ್ತಿ ತೆರಿಗೆ, ಕಾರ್ಮಿಕ ಕಾನೂನುಗಳ ಪಾಲನೆ ಮುಂತಾದ ಪ್ರತಿಯೊಂದು ಶಾಸನಾತ್ಮಕ ಅನುಸರಣೆಗಳನ್ನೂ

ದೋಷರಹಿತವಾಗಿ ನಿರ್ವಹಿಸಬೇಕು.

ಐದನೆಯದಾಗಿ ನಮ್ಮ ಅತ್ಯಮೂಲ್ಯ ಆದರೆ ನಮ್ಮ ಆಸ್ತಿ–ಜವಾಬ್ದಾರಿ ಪಟ್ಟಿಯಲ್ಲಿ ಸೇರ್ಪಡೆಯಾಗದ ಸಿಬ್ಬಂದಿಗಳ ಬಗ್ಗೆ ಚಿಂತನೆ ಮಾಡಬಹುದಾ? ಅವರ ಆಯ್ಕೆ, ನೇಮಕಾತಿ, ತರಬೇತಿ, ಪದೋನ್ನತಿ, ವೇತನ ಶ್ರೇಣಿ, ಮೌಲ್ಯಮಾಪನ, ವರ್ಗಾವಣೆ, ಶಿಸ್ತು ಕ್ರಮಗಳು, ಹೀಗೆ ಅವರಿಗೆ ಸಂಬಂಧಿಸಿದ ಪ್ರತಿಯೊಂದು ಪ್ರಕ್ರಿಯೆಯಲ್ಲೂ ವೃತ್ತಿಪರತೆ, ಪಾರದರ್ಶಕತೆ, ದೂರದೃಷ್ಟಿ, ಸಂಸ್ಥೆಯ ಹಿತಚಿಂತನೆ, ಕಾನೂನುಗಳ ಪಾಲನೆ, – ಮುಂತಾದ ಎಲ್ಲ ಅಂಶಗಳನ್ನೂ ಗಮನಿಸಿ ನಿಯಮ ರೂಪಿಸೋಣವೇ, ಜಾರಿಗೊಳಿಸೋಣವೇ, ಅನುಕರಿಸೋಣವೆ? ಇದರಿಂದಾಗಿ ಸಿಬ್ಬಂದಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ಅವರ ಸಾಮರ್ಥ್ಯವನ್ನು ಸದ್ಬಳಕೆ ಮಾಡಿಕೊಳ್ಳೋಣ. ಒಳ್ಳೆಯ ಸಿಬ್ಬಂದಿಗಳನ್ನು ನೇಮಕಮಾಡಿಕೊಂಡು ಅವರಿಂದ ಕೆಲಸ ಮಾಡಿಸಿಕೊಳ್ಳುವುದರ ಜೊತೆಗೆ ಸಮರ್ಥ ಸಿಬ್ಬಂದಿಗಳನ್ನು ಉಳಿಸಿಕೊಳ್ಳಲೂ ನಾವು ಹೆಣಗಬೇಕಿದೆ. ಈ ಬಗ್ಗೆ ಹೆಚ್ಚಿನ ಚಿಂತನೆಯ ಅಗತ್ಯವಿದೆ

ಆರನೆಯದಾಗಿ ನಮ್ಮ ಕಾರ್ಯವೈಖರಿಯನ್ನು ಬದಲಾಯಿಸಿಕೊಳ್ಳೋಣ. ಪ್ರಪಂಚ ಬದಲಾಗುತ್ತಿದೆ. ಹಾಗೇ ನಾವೂ ಕೂಡ ಬದಲಾಗಬೇಕಿದೆ. ನಮ್ಮ ವ್ಯವಹಾರದ ರೀತಿನೀತಿ, ನಿಯಮಗಳು, ಕಟ್ಟುಪಾಡುಗಳು ಎಲ್ಲವನ್ನೂ ಮರುಪರಿಶೀಲನೆಗೆ ಒಳಪಡಿಸೋಣ. ಈಗಿರುವುದು ಮಾರುವವರ ಮಾರುಕಟ್ಟೆ (Sellers' Market) ಅಲ್ಲ ಕೊಳ್ಳುವವರ ಮಾರುಕಟ್ಟೆ (Buyers' Market). ಮೊದಲಿನಂತೆ ನಮ್ಮಲ್ಲಿರುವ ಸಾಲಗಳ ಯೋಜನೆಗಳು ಗ್ರಾಹಕರಿಗೆ ರುಚಿಸದಿರಬಹುದು. ಹಾಗಾಗಿ ಅವರಿಗೆ ಬೇಕಾದಂತೆ ನಮ್ಮ ಸಾಲ ಯೋಜನೆಗಳನ್ನು ಮರು ರೂಪಿಸಬಹುದೆ? ಟೈಲರ್ ಮೇಡ್ ಲೋನ್ ಸ್ಕೀಮುಗಳನ್ನು ಬಿಡುಗಡೆಗೊಳಿಸಬಹುದೆ? ಸಾಲದ ಮೊತ್ತ, ಅವಧಿ, ಮರುಪಾವತಿಯ ಕಂತುಗಳು, ಭದ್ರತೆಗಳು, ಸಾಲಗಾರರ ಅರ್ಹತೆಗಳು, ಜಾಮೀನುದಾರರ ಅರ್ಹತೆಗಳು, ಸಾಲ ಮಂಜೂರಾತಿ, ವಿತರಣಾ ಕ್ರಮಗಳು, ದಂಡ ಶುಲ್ಕಗಳು, ಅವುಗಳನ್ನು ಆಕರಿಸುವ ಪದ್ಧತಿ, ಸಾಲವಸೂಲಾತಿ ಕ್ರಮಗಳು, ಮರುಸಾಲ ನೀಡಿಕೆಯ ಕ್ರಮಗಳು, ವಿಸ್ತರಣೆಗಳ ನಿಯಮಗಳು – ಹೀಗೆ ಹತ್ತು ಹಲವು ವಿಷಯಗಳಲ್ಲಿ ನಾವು ಸಮಗ್ರವಾಗಿ ಯೋಚಿಸಿ ನೀತಿಗಳನ್ನು ಮರುರೂಪಿಸಬೇಕಿದೆ. ಸಾಲಗಾರರ ಆಯ್ಕೆ ಪ್ರಕ್ರಿಯೆಯೂ ಬದಲಾಗಬೇಕಿದೆ. ಈಗ ಹೆಚ್ಚಿನ ಸಹಕಾರಿಗಳಲ್ಲಿ ನಮ್ಮಲ್ಲಿ ಸಾಲಕ್ಕೆ ಬರುವವರ ಕೊನೆಯ ಆಯ್ಕೆ ನಾವಾಗಿರುತ್ತೇವೆ. ಅದನ್ನು ಬದಲಾಯಿಸಿ ನಾವು ಅವರ ಮೊದಲ ಆಯ್ಕೆ ಆಗಬಾರದೇಕೆ? ಯೋಚಿಸಿ.

**ಕೊನೆಯದಾಗಿ ಆರ್ಥಿಕ ಶಿಸ್ತಿಗೆ ಒತ್ತುಕೊಡೋಣ ಮತ್ತು ಮತ್ತಷ್ಟು ಅಗತ್ಯವಿದ್ದಲ್ಲಿ ಬಿಗಿಗೊಳಿಸೋಣ. ಉದಾಹರಣೆಗೆ,**

- ವೆಚ್ಚಗಳನ್ನು ಕಡಿಮೆ ಮಾಡುವುದು (ಭತ್ಯೆ, ಸ್ಟೇಷನರಿ, ಉಪಚಾರ), ಅನಗತ್ಯ ವೆಚ್ಚಗಳನ್ನು ಕಡಿತಮಾಡುವುದು (ಜಾಹೀರಾತು ನೀಡುವುದು, ಇತ್ಯಾದಿ,) ವೆಚ್ಚಗಳನ್ನು ರದ್ದು ಮಾಡುವುದು (ಪ್ರವಾಸ ಇತ್ಯಾದಿ) ಯಾ ವೆಚ್ಚಗಳನ್ನು ಮುಂದೂಡುವುದು, (ತಂತ್ರಾಂಶ ಬದಲಾವಣೆ ಇತ್ಯಾದಿ). ಮುಂದೂಡಬಹುದಾದ ಯೋಜನೆಗಳನ್ನು ಮುಂದೂಡೋಣ (ಶಾಖೆ ತೆರೆಯುವುದು ಇತ್ಯಾದಿ) ರದ್ದುಪಡಿಸಬಹುದಾದ ಯೋಜನೆಗಳನ್ನು ರದ್ದು ಪಡಿಸೋಣ ( ದಶಮಾನೋತ್ಸವ ಆಚರಣೆ ಇತ್ಯಾದಿ)
- ಠೇವಣಿ ಯೋಜನೆಗಳ ಮೇಲಿನ ಬಡ್ಡಿದರವನ್ನು ಅಲ್ಪಕಾಲಕ್ಕಾಗಿ ಯಾ ದೀರ್ಘಕಾಲಕ್ಕಾಗಿ ಕಡಿಮೆ ಮಾಡಬಹುದಾ? ಈ ವಿಚಾರದಲ್ಲಿ ಬಹು ಎಚ್ಚರಿಕೆಯ ನಡೆಯ ಅಗತ್ಯವಿದೆ.
- ಲಾಭಾಂಶ ಘೋಷಣೆಯನ್ನು ಮಿತಿಗೊಳಿಸೋಣ. ನೆನಪಿಡಿ, ಲಾಭಾಂಶ ಹೆಚ್ಚಿಸಿದಷ್ಟೂ ನಮ್ಮ ಸ್ವಂತ ಬಂಡವಾಳ ಕಡಿಮೆಯಾಗುತ್ತದೆ, ಸದಸ್ಯರ ನಿರೀಕ್ಷೆಗಳು ಹೆಚ್ಚಾಗುತ್ತವೆ. ಅದೇ ನಮ್ಮ ಸಂಸ್ಥೆಯ ಬಗ್ಗೆ ನಕರಾತ್ಮಕ ಪ್ರಚಾರಕ್ಕೆ ಕಾರಣವಾಗಬಹುದು
- ಸದಸ್ಯರಿಗೆ ಸಮಂಜಸವಾಗುವಷ್ಟು ಲಾಭಾಂಶ, ಠೇವಣಿದಾರರಿಗೆ ಆಮಿಷವೆನಿಸದಷ್ಟು ಬಡ್ಡಿ, ಸಾಲಗಾರರಿಗೆ ಹೊರೆಯಾಗದಷ್ಟು ಬಡ್ಡಿ, ಸಿಬ್ಬಂದಿಗಳಿಗೆ ತಕ್ಕ ವೇತನ ಮತ್ತು ಸವಲತ್ತುಗಳು,

ಒಟ್ಟಾರೆಯಾಗಿ ನಮ್ಮ ಮನಸ್ಥಿತಿಯನ್ನು ಮತ್ತು ಕಾರ್ಯವೈಖರಿಯನ್ನು ಬದಲಿಸಿಕೊಳ್ಳಲು ಅಣಿಯಾಗೋಣ. ಇದು ಪರ್ವಕಾಲ. ಇಂದು ನಾವು ಬದಲಾಗದಿದ್ದರೆ ಗ್ರಾಹಕರು ತಮ್ಮ ಆದ್ಯತೆಯನ್ನು ಬದಲಾಯಿಸುತ್ತಾರೆ, ನಮ್ಮೊಡನೆಯ ವ್ಯವಹಾರವನ್ನು ನಿಲ್ಲಿಸಿ ಅಥವಾ ಕಡಿಮೆಮಾಡಿ ಬೇರೆಯವರೊಂದಿಗೆ ಮಾಡಲು ಶುರುಮಾಡುತ್ತಾರೆ. ನಮ್ಮ ಸದಸ್ಯರ, ಗ್ರಾಹಕರ ಪ್ರಥಮ ಆದ್ಯತೆ ನಾವಾಗಬೇಕು ಎನ್ನುವುದಾದರೆ ನಾವು ಬದಲಾಗಬೇಕು ಅಷ್ಟೇ.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs)



– ಶ್ರೀ ಯಶವಂತ ಡೋಂಗ್ರೆ

'ಸುಸ್ಥಿರ ಅಭಿವೃದ್ಧಿಯ ಗುರಿಗಳು' (ಸಸ್ಟೈನಬಲ್ ಡೆವೆಲಪ್‌ಮೆಂಟ್ ಗೋಲ್ಸ್) ಎನ್ನುವುದು ಸಂಯುಕ್ತ ರಾಷ್ಟ್ರ ಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳು ಅನುಷ್ಠಾನಕ್ಕೆ ತರಲು ಒಪ್ಪಿ ಚಾಲ್ತಿಗೆ ತಂದಿರುವ ಯೋಜನೆ. 2015ರಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಂಸ್ಥೆಯ ಐತಿಹಾಸಿಕ ಸಮ್ಮೇಳನದಲ್ಲಿ ಜಗತ್ತಿನ ಎಲ್ಲ ನಾಯಕರೂ ಸರ್ವಾನುಮತದಿಂದ "ಟ್ರಾನ್ಸ್‌ಫಾರ್ಮಿಂಗ್ ಅವರ್ ವರ್ಲ್ಡ್: ದಿ 2030 ಅಜೆಂಡ ಫಾರ್ ಸಸ್ಟೈನಬಲ್ ಡೆವೆಲಪ್‌ಮೆಂಟ್" ಎನ್ನುವ ಹೆಸರಿನಲ್ಲಿ 17 ಪ್ರಮುಖ ಗುರಿಗಳನ್ನು ಒಪ್ಪಿ, 2030ರೊಳಗೆ ಈ ಗುರಿಗಳನ್ನು ಈಡೇರಿಸಬೇಕೆಂದು ಕಾರ್ಯಪ್ರವೃತ್ತರಾಗಿದ್ದಾರೆ. ಸಹಜವಾಗಿಯೇ, ಇಂತಹ ಮಹತ್ವಾಕಾಂಕ್ಷಿ ಗುರಿಯನ್ನು ಸಾಧಿಸಬೇಕಾದರೆ ದೇಶದ ಎಲ್ಲಿ ಕ್ಷೇತ್ರಗಳೂ ತಮ್ಮ ಕಾಣಿಕೆ ನೀಡಬೇಕಾಗುತ್ತದೆ. ಸಹಕಾರಿ ಕ್ಷೇತ್ರವೂ ಇದಕ್ಕೆ ಹೊರತಲ್ಲ. ಈ ವಿಷಯವನ್ನು ಮನಗಂಡು ಅಂತರಾಷ್ಟ್ರೀಯ ಸಹಕಾರಿ ಒಕ್ಕೂಟ (ಐಸಿಎ) ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಗಳು (ಐಎಲ್‌ಒ), ಸಹಕಾರಿ ಸಂಘಟನೆಗಳಿಗೆ ಕಾರ್ಯಸೂಚಿಯೊಂದನ್ನು ನೀಡಿವೆ. ಪ್ರತಿ ಗುರಿಯ ಸಾಧನೆಗೆ ಸಹಕಾರಿ ಸಂಸ್ಥೆಗಳು ಏನು ಮಾಡಬೇಕು ಅಥವ ಏನು ಮಾಡಬಹುದು ಎನ್ನುವುದನ್ನು ಸೂಚ್ಯವಾಗಿ ಈ ಕಾರ್ಯಸೂಚಿಯು ತಿಳಿಸುತ್ತದೆ. ಈ ಕಾರ್ಯಸೂಚಿಯ ಆಶಯವನ್ನು ನಮ್ಮ ದೇಶದ ಸಹಕಾರಿ ಸಂಸ್ಥೆಗಳ ಸಂದರ್ಭಕ್ಕೆ ಹೊಂದುವಂತೆ ವಿವರಿಸಲು ಈ ಲೇಖನ ಮಾಲೆಯಲ್ಲಿ ಪ್ರಯತ್ನಿಸಲಾಗಿದೆ.

**ಎಸ್‌ಡಿಜಿ 1 : ಬಡತನವನ್ನು ಎಲ್ಲೆಡೆ, ಅದರ ಎಲ್ಲ ರೂಪದಲ್ಲಿ ನಿರ್ಮೂಲನೆ ಮಾಡುವುದು (End poverty in all its forms, everywhere)**

ಈ ಗುರಿಯು 2030ರ ವೇಳೆಗೆ ಜಗತ್ತಿನ ಯಾವ ಭಾಗದಲ್ಲಿಯೂ ಕಡು ಬಡತನ, ಅಂದರೆ ದಿನಕ್ಕೆ 1.25 ಅಮೆರಿಕನ್ ಡಾಲರ್‌ಗಿಂತ ಕಡಿಮೆ ಆದಾಯವಿರುವ ಜನರು ಇರದಿರುವಂತೆ ಮಾಡುವ ಆಶಯವನ್ನು ಹೊಂದಿದೆ. ಇದೇ ಅವಧಿಯಲ್ಲಿ ಪ್ರತಿ ದೇಶವೂ ತಮ್ಮ ತಮ್ಮ ದೇಶದ ಮಾನದಂಡಗಳನುಸಾರ ಬಡವರೆಂದು ಗುರುತಿಸಲ್ಪಡುವ ಜನಸಂಖ್ಯೆಯ ಪ್ರಮಾಣವನ್ನು ಅರ್ಧದಷ್ಟು ಕಡಿಮೆ ಮಾಡಬೇಕು, ಎಲ್ಲರಿಗೂ ಸೂಕ್ತವಾದ ಸಾಮಾಜಿಕ ರಕ್ಷಣಾ ವ್ಯವಸ್ಥೆಯನ್ನು ಜಾರಿ ಮಾಡಬೇಕು, ಪ್ರತಿಯೊಬ್ಬ ಪುರುಷ ಮತ್ತು ಮಹಿಳೆಗೂ ಆರ್ಥಿಕ ಸಂಪನ್ಮೂಲಗಳ ಬಗ್ಗೆ ಸಮಾನ ಹಕ್ಕು ಮತ್ತು ಅವಕಾಶಗಳು ದೊರೆಯುವಂತೆ ಕ್ರಮಕೈಗೊಳ್ಳಬೇಕು ಮತ್ತು ಎಲ್ಲ ಜನರು ಅದರಲ್ಲೂ ವಿಶೇಷವಾಗಿ ಬಡವರು ಆರ್ಥಿಕ, ಸಾಮಾಜಿಕ ಮತ್ತು ಪ್ರಾಕೃತಿಕ ಕಾರಣಗಳಿಂದಾಗಿ ಅವಕಾಶ ವಂಚಿತರಾಗುವುದು ಅಥವ ಬಲಿಪಶುಗಳಾಗುವುದನ್ನು ಸಂಪೂರ್ಣವಾಗಿ ತಡೆಯಬೇಕು – ಇವು ಬಡತನ ನಿರ್ಮೂಲನೆಗಾಗಿ ಪ್ರತಿದೇಶವೂ ತೆಗೆದುಕೊಳ್ಳಬೇಕಾದ ಕ್ರಮವೆಂದು ಈ ಗುರಿಯು ಪರಿಭಾವಿಸುತ್ತದೆ.

1990ರ ನಂತರ ಜಾಗತಿಕ ನೆಲೆಯಲ್ಲಿ ಸರಾಸರಿ ಬಡತನದ ಪ್ರಮಾಣದಲ್ಲಿ ಗಣನೀಯ ಇಳಿಕೆಯಾಗಿದೆಯಾದರೂ, ಬಡವ ಮತ್ತು ಶ್ರೀಮಂತರ ನಡುವಿನ ಅಂತರ ಕಡಿಮೆಯಾಗಿಲ್ಲ. ಭಾರತವೂ ಸೇರಿದಂತೆ ಹಲವು ಅಭಿವೃದ್ಧಿಶೀಲ ದೇಶಗಳಲ್ಲಿ ಬಡತನ ರೇಖೆಯ ಕೆಳಗಿನ ಜನಸಂಖ್ಯೆಯ ಪ್ರಮಾಣ ಕಡಿಮೆಯಾಗಿದೆಯಾದರೂ ಬಡವ ಮತ್ತು ಶ್ರೀಮಂತರ ನಡುವಿನ ಅಂತರ ಮೊದಲಿಗಿಂತ ಹೆಚ್ಚಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಜಗತ್ತಿನಾದ್ಯಂತ ಸುಮಾರು 1.29 ಬಿಲಿಯನ್ ಜನ ಇಂದಿಗೂ ಕಡು ಬಡತನದಲ್ಲಿ ಜೀವಿಸುತ್ತಿದ್ದಾರೆ. ಭಾರತದಲ್ಲಿ ಒಟ್ಟು ಜನಸಂಖ್ಯೆಯ ಸುಮಾರು ಶೇಕಡ 30ರಷ್ಟು ಜನ ಕಡು ಬಡತನದಲ್ಲಿದ್ದಾರೆ. ಬಡತನ ಕೇವಲ ವರಮಾನದ ಪ್ರಶ್ನೆಯಾಗಿರದೆ ಅದಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ. ಶಿಕ್ಷಣ, ವಸತಿ, ಆರೋಗ್ಯ ಮುಂತಾದ ಪ್ರಾಥಮಿಕ ಅಗತ್ಯಗಳನ್ನು ಪಡೆಯುವುದು ಈ ಸಮುದಾಯಕ್ಕೆ ತೀರ ಕಷ್ಟವಾಗಿದೆ. ಜೊತೆಗೆ ಸಾಲದ ವರ್ತುಲದಲ್ಲಿ ಸಿಲುಕಿರುವುದರಿಂದ ಕಡುಬಡವರ ಬಹುಭಾಗ ತಮಗೆ ದೊರೆಯುವ ಅಲ್ಪ ವರಮಾನವನ್ನೂ ಸಾಲ ತೀರಿಸಲು ವ್ಯಯಿಸಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ. ಇತ್ತೀಚಿನ ವರೆಗೆ ಭಾರತದಲ್ಲಿ ಕಡುಬಡವರು ಹೆಚ್ಚಾಗಿ

ಗ್ರಾಮೀಣವಾಸಿಗಳೆಂದು ಭಾವಿಸಲಾಗಿತ್ತು. ಆದರೆ ಬದಲಾದ ಕೈಗಾರಿಕೀಕರಣ ಮತ್ತು ನಗರೀಕರಣದಿಂದಾಗಿ ದೊಡ್ಡ ಸಂಖ್ಯೆಯ ಗ್ರಾಮೀಣ ಜನ ನಗರಗಳಿಗೆ ವಲಸೆ ಬಂದಿರುವುದರಿಂದ, ನಗರವಾಸಿಗಳ ಬಡತನದ ಸಂಖ್ಯೆಯೂ ದೊಡ್ಡ ಪ್ರಮಾಣದಲ್ಲಿದೆ. ಆದುದರಿಂದ 2030ರೊಳಗೆ ಕಡುಬಡತನದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದ್ದಲ್ಲಿ ಅರ್ಥವ್ಯವಸ್ಥೆಯ ಎಲ್ಲ ಸಾಂಸ್ಥಿಕ ರಚನೆಗಳ ಕೊಡುಗೆ ಅನಿವಾರ್ಯ.

**ಸಹಕಾರಿ ಕ್ಷೇತ್ರದ ಪಾತ್ರ :** ಸಮುದಾಯದ ಬಗೆಗಿನ ಕಾಳಜಿ (ಕನ್ಸರ್ನ್ ಫಾರ್ ಕಮ್ಯುನಿಟಿ) ಸಹಕಾರಿ ಚಳುವಳಿಯ ಪ್ರಮುಖ ತತ್ವಗಳಲ್ಲೊಂದು. ಆದುದರಿಂದ ತಮ್ಮ ಸಾಂಸ್ಥಿಕ ರಚನೆ ಮತ್ತು ಉದ್ದೇಶಗಳಿಂದಾಗಿ ಸಹಕಾರಿ ಸಂಘಟನೆಗಳು ಸಹಜವಾಗಿಯೇ ಮೂರು ಪ್ರಮುಖ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಆರ್ಥಿಕ ನೆಲೆಯಲ್ಲಿ ಅವು ಉದ್ಯೋಗ ಮತ್ತು ಆದಾಯದ ಅವಕಾಶಗಳನ್ನು ಸೃಷ್ಟಿಸುತ್ತವೆ. ಸಾಮಾಜಿಕ ನೆಲೆಯಲ್ಲಿ ಅವು ರಕ್ಷಣೆ ಮತ್ತು ಸಮಾನತೆಯನ್ನು ಸಾಧ್ಯವಾಗಿಸುತ್ತವೆ. ಪ್ರಜಾಸತ್ತಾತ್ಮಕ ಸಂಘಟನೆಗಳಾದುದರಿಂದ ಅವು ಸಮುದಾಯ ಬದ್ಧತೆಯನ್ನೂ, ರಾಜಕೀಯ ಒಳನೋಟಗಳನ್ನೂ ನೀಡುತ್ತವೆ.

ಸಹಕಾರಿ ಕ್ಷೇತ್ರ ಜಗತ್ತಿನ ಪರೋಗಾಮಿ ಚಳುವಳಿಯ ಭಾಗವಾಗಿದ್ದು ಸಹಕಾರಿ ಸಂಘಗಳು ಮೌಲ್ಯಗಳು ಮತ್ತು ತತ್ವಗಳ ಆಧಾರದಲ್ಲಿ ನಡೆಯುವ ಸಂಸ್ಥೆಗಳಾಗಿರುವುದರಿಂದ, ಸಹಜವಾಗಿಯೇ ಬಡತನದಂತಹ ಸಮಸ್ಯೆಗಳಿಗೆ ಸ್ಪಂದಿಸುವ ಸಂಘಟನೆಗಳಾಗಿವೆ. ಭಾರತದ ಸಹಕಾರ ಚಳುವಳಿ ಮೊದಲಿನಿಂದಲೂ ಬಡ ಸಮುದಾಯಗಳ ಏಳಿಗೆಗಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿವೆ. ಆದುದರಿಂದ ಸುಸ್ಥಿರ ಅಭಿವೃದ್ಧಿಯ ಪ್ರಥಮ ಗುರಿಯಾದ ಕಡುಬಡತನದ ನಿರ್ಮೂಲನೆಯಲ್ಲಿ ಸಹಕಾರಿ ಸಂಘಗಳ ಪಾತ್ರ ಅತ್ಯಂತ ಮುಖ್ಯವಾಗಿದೆ. ನಮ್ಮ ಸಂದರ್ಭವನ್ನು ಗಮನದಲ್ಲಿರಿಸಿಕೊಂಡರೆ ವಿವಿಧ ಸಹಕಾರಿ ಸಂಘಗಳು ಈ ಕೆಳಗಿನ ಕೆಲವು ಪ್ರಮುಖ ಕಾರ್ಯನೀತಿಗಳನ್ನು ಅನುಸರಿಸಬಹುದಾಗಿದೆ.

ಸಹಕಾರಿ ಸಂಘಟನೆಗಳು ಬಡತನ ನಿರ್ಮೂಲನೆಯಲ್ಲಿ ನಿರ್ವಹಿಸಬಹುದಾದ ಪಾತ್ರವು ಅವುಗಳು ಯಾವ ರೀತಿಯ ವ್ಯವಹಾರ ಚಟುವಟಿಕೆಗಳನ್ನು ನಡೆಸುತ್ತಿವೆ (ಪತ್ತು, ಮಾರಾಟ, ಉತ್ಪಾದನೆ ಹೀಗೆ) ಮತ್ತು ಯಾವ ಭೌಗೋಳಿಕ ಪರಿಸರದಲ್ಲಿ ಕಾರ್ಯನಿರ್ವಹಿಸುತ್ತಿವೆ (ಗ್ರಾಮೀಣ, ಪಟ್ಟಣ, ನಗರ ಹೀಗೆ) ಎನ್ನುವುದನ್ನು ಅವಲಂಬಿಸಿರುತ್ತದೆ. ಈ ಪಾತ್ರವು ಪ್ರತ್ಯಕ್ಷವಾಗಿರಬಹುದು ಅಥವ ಪರೋಕ್ಷವಾಗಿರಬಹುದು, ನೇರವಾಗಿ ಆರ್ಥಿಕ ನೆರವು ನೀಡುವ ರೂಪದಲ್ಲಿರಬಹುದು ಅಥವ ಬಡವರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವ ಯಾವುದೇ ಯೋಜನೆಯ ರೂಪದಲ್ಲಿರಬಹುದು. ಬಡವರಿಗೆ ಸಾಮಾಜಿಕ ರಕ್ಷಣೆಯನ್ನು ಒದಗಿಸುವ ರೂಪದಲ್ಲಿಯೂ ಇರಬಹುದು. ಈ ಕೆಳಗೆ ಪಟ್ಟಿಮಾಡಿರುವ ಹಲವು ಚಟುವಟಿಕೆಗಳಲ್ಲಿ ತಮಗೆ ಅನ್ವಯವಾಗುವ, ಸರಿಕಾಣುವ ಅಥವ ಸಾಧ್ಯವಿರುವ ಯಾವುದೆ ಮಾರ್ಗಗಳನ್ನು ಸಹಕಾರಿ ಸಂಘಗಳು ಅನುಸರಿಸಬಹುದು.

1. ಸಹಕಾರಿ ಸಂಸ್ಥೆಗಳು ಸದಸ್ಯರಿಗೆ ಸಾಲ ನೀಡುವಾಗ ಸದಸ್ಯರ ಆರ್ಥಿಕ ಸ್ಥಾನಮಾನ ಮತ್ತು ಸಾಲ ಪಡೆಯುವ ಉದ್ದೇಶದ ಆಧಾರದಲ್ಲಿ ಬಡ್ಡಿದರಗಳಲ್ಲಿ ವ್ಯತ್ಯಯ ಮಾಡಬಹುದು. ಉದಾಹರಣೆಗೆ ಬಡ ಸದಸ್ಯರಿಗೆ ಶೇ. 1 ರಷ್ಟು ಕಡಿಮೆ ಬಡ್ಡಿ ದರ ವಿಧಿಸುವುದು, ಅವರುಗಳು ಸಾಮಾನ್ಯಕ್ಕಿಂತ ಹಚ್ಚಿನ ಕಂತಿನಲ್ಲಿ ಸಾಲ ಮರುಪಾವತಿಗೆ ಅವಕಾಶ ಮಾಡಿಕೊಡುವುದು, ಕೆಲವು ಅಗತ್ಯಗಳಿಗಾಗಿ ಸಾಲ ಪಡೆದಾಗ (ಉದಾಹರಣೆಗೆ ಶಿಕ್ಷಣ, ಆರೋಗ್ಯ ಮುಂತಾದುವುಗಳು) ಕಡಿಮೆ ಬಡ್ಡಿ ವಿಧಿಸುವುದು ಇತ್ಯಾದಿ.
2. ಆರ್ಥಿಕವಾಗಿ ಹಿಂದುಳಿದವರಿಗಾಗಿಯೇ ವಿಶೇಷ ಪತ್ತಿನ ಯೋಜನೆಗಳನ್ನು ರೂಪಿಸುವುದು. ಉದಾಹರಣೆಗೆ ಸ್ವಂತ ಉದ್ಯೋಗಕ್ಕಾಗಿ ಸಾಲ, ಕಡಿಮೆ ಅವಧಿಗೆ ಆಪತ್ತು ಸಾಲ (ಉದಾಹರಣೆಗೆ ಒಂದು ವಾರದ ಅವಧಿಯ ಸಾಲ), ಬಡ ಕುಟುಂಬದ ಯುವಕರಿಗೆ ಮತ್ತು ಮಹಿಳೆಯರಿಗೆ ವಿಶೇಷ ಸಾಲ ಯೋಜನೆಗಳು ಇತ್ಯಾದಿ.
3. ಪಿಗ್ಮಿ ಠೇವಣಿ ಮಾದರಿಯಲ್ಲಿ ಕಡಿಮೆ ಮತ್ತು ಅನಿಶ್ಚಿತ ಆದಾಯದ ಜನ ಉಳಿತಾಯ ಮಾಡುವುದು ಸಾಧ್ಯವಾಗುವಂತಹ ಯೋಜನೆಯನ್ನು ಚಾಲ್ತಿಗೆ ತರಬಹುದು.
4. ಆರ್ಥಿಕವಾಗಿ ಹಿಂದುಳಿದವರ ಸ್ವಸಹಾಯ ಸಂಘಗಳನ್ನು ಆರಂಭಿಸುವುದು, ಅಂತಹ ಸಂಘಗಳ ಖಾತೆಗಳನ್ನು ಸಹಕಾರಿ ಸಂಘದಲ್ಲಿ ತೆರೆಯುವುದು ಮತ್ತು ಸ್ವಸಹಾಯ ಸಂಘಗಳಿಗೆ ವಿಶೇಷ ಸಾಲ ನೀಡುವ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು.
5. ಸಹಕಾರಿ ಸಂಸ್ಥೆಗಳು ಗಳಿಸುವ ಲಾಭದ ಒಂದಂಶವನ್ನು ಬಡ ಕುಟುಂಬಗಳ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 48
Licensed to post without Prepayment License No. PMG BG/WPP-384/2020-2022.



ಸಹಾಯಕ್ಕಾಗಿ – ವಿಶೇಷವಾಗಿ ಇಂತಹ ಕುಟುಂಬಗಳಿಗೆ ಅಗತ್ಯವಾದ ಆರೋಗ್ಯ, ವಸತಿಗಳಿಗೆ ಸಹಾಯ ನೀಡಲು ಮತ್ತು ಇಂತಹ ಕುಟುಂಬಗಳ ಮಕ್ಕಳಿಗೆ ಶಿಕ್ಷಣಕ್ಕೆ ಸಹಾಯ ಮಾಡಬಹುದು.

6. ಪ್ರತಿ ಸಹಕಾರಿ ಸಂಘವು ಪ್ರತಿ ವರ್ಷ ಕೆಲವು ಬಡ ಕುಟುಂಬಗಳನ್ನು ಸಂಘದ ಸದಸ್ಯರನ್ನಾಗಿ ಮಾಡಿಕೊಂಡು, ಆ ಕುಟುಂಬಗಳಿಗೆ ಅಗತ್ಯ ಸಹಾಯ ನೀಡಬಹುದು.

7. ಸಹಕಾರಿ ಸಂಘಗಳಲ್ಲಿ ಉದ್ಯೋಗಿಗಳನ್ನು ನೇಮಕ ಮಾಡುವಾಗ ಬಡ ಕುಟುಂಬದ ಯುವಕ/ಯುವತಿಯರಿಗೆ ಆದ್ಯತೆ ನೀಡಬಹುದು.

8. ಒಂದು ಅಥವಾ ಹಲವು ಸಹಕಾರಿ ಸಂಘಗಳು ಸೇರಿ ಅಥವ ಸಹಕಾರಿ ಯೂನಿಯನ್/ಮಹಾಮಂಡಳಗಳ ನೇತೃತ್ವದಲ್ಲಿ ಕಡುಬಡವ ಸಮುದಾಯದ ಸಹಕಾರಿ ಸಂಘಗಳನ್ನು ಸ್ಥಾಪಿಸಿ (ಉದಾಹರಣೆಗೆ ರದ್ದಿ ಹೆರಕುವವರ ಸಹಕಾರಿ ಸಂಘ, ಭಿಕ್ಷುಕರ ಸಹಕಾರಿ ಸಂಘ, ಹಾವಾಡಿಕಗರ ಸಹಕಾರಿ ಸಂಘ, ವಸತಿ ಹೀನರ ಸಹಕಾರಿ ಸಂಘ ಇತ್ಯಾದಿ) ಆಯಾ ಸಮುದಾಯವು ಸ್ವಸಹಾಯ ನೆಲೆಯಲ್ಲಿ ಉತ್ತಮ ಆರ್ಥಿಕ ನೆಲೆಯನ್ನು ಕಂಡುಕೊಳ್ಳಲು ಸಹಕರಿಸಬಹುದು.

9. ಮಾರಾಟ ಸಹಕಾರ ಸಂಘಗಳು ಬಡತನದ ರೇಖೆಯಿಂದ ಕೆಳಗಿರುವರು ಬೆಳೆದ, ತಯಾರಿಸಿದ ವಸ್ತುಗಳ ಮಾರಾಟಕ್ಕೆ ವಿಶೇಷ ಯೋಜನೆಗಳನ್ನು ಅನುಷ್ಠಾನಕ್ಕೆ ತರಬಹುದು.

10. ಹಲವು ಸಹಕಾರ ಸಂಘಗಳು ಒಟ್ಟಾಗಿ ತಮ್ಮ ಹತ್ತಿರದಲ್ಲಿರುವ ವಸತಿ ಹೀನರಿಗೆ ಸಹಕಾರಿ ಮಾದರಿಯಲ್ಲಿ ವಸತಿ ಸೌಕರ್ಯ ಕಲ್ಪಿಸಬಹುದು.

11. ಅತಿ ಸಣ್ಣ ರೈತರು ಅದರಲ್ಲೂ ಹಣ್ಣು, ತರಕಾರಿ ಬೆಳೆಯುವವರನ್ನು ಸಂಘಟಿಸಿ ಸಹಕಾರಿ ಸಂಸ್ಕರಣ ಘಟಕಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬಹುದು.

12. ಕೂಲಿ ಕಾರ್ಮಿಕರನ್ನು ಸಂಘಟಿಸಿ ಶ್ರಮಿಕ ಸಹಕಾರಿ ಸಂಘಗಳನ್ನು ರಚಿಸಿ ಸಹಾಯ ಮಾಡಬಹುದು.

13. ಬಡಕುಟುಂಬಗಳ ಬಳಿ ಲಭ್ಯವಿರುವ ಸಂಪನ್ಮೂಲಗಳನ್ನು ಗುರುತಿಸಿ, ಅವುಗಳನ್ನು ಹೆಚ್ಚು ಉಪಯುಕ್ತವಾಗಿ ಉಪಯೋಗಿಸುವ ಮಾರ್ಗೋಪಾಯಗಳನ್ನು ಸೂಚಿಸಬಹುದು (ಉದಾಹರಣೆಗೆ ಸಣ್ಣ ಪ್ರಮಾಣದ ಭೂಮಿ ಇದ್ದಲ್ಲಿ ಅದನ್ನು ಯಾವ ಆರ್ಥಿಕ ಚಟುವಟಿಕೆಗಳಿಗೆ ಉಪಯೋಗಿಸಬಹದೆಂಬ ಬಗ್ಗೆ ಮಾಹಿತಿ, ತರಬೇತಿ ನೀಡುವುದು)

14. ಆಯ್ದ ಕುಟುಂಬಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಅವರ ಬಡತನಕ್ಕೆ ಕಾರಣಗಳನ್ನು ಗುರುತಿಸಿ, ಅವರಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಬೇಕಾದ ತರಬೇತಿ ಮತ್ತು ಪರಿಕರಗಳನ್ನು ನೀಡಬಹುದು.

15. ಬಡತನ ರೇಖೆಯಿಂದ ಕೆಳಗಿರುವ ಕುಟುಂಬದ ಸದಸ್ಯರಿಗೆ ಸಹಕಾರಿ ಸಂಘಗಳ ಸದಸ್ಯರಾಗಲು ಅನುಕೂಲವಾಗುವಂತೆ ಸುಲಭ ಸದಸ್ಯತ್ವದ ಯೋಜನೆಗಳನ್ನು ಚಾಲ್ತಿಗೆ ತರಬಹುದು.

ಮೇಲೆ ತಿಳಿಸಿರುವ ಕಾರ್ಯ ಯೋಜನೆ ಕೇವಲ ಕೆಲವು ಸಾಧ್ಯತೆಗಳು ಮಾತ್ರ. ಸಹಕಾರಿ ಸಂಘಗಳು ಬಡತನ ಪರಿಹಾರಕ್ಕೆ ಏನು ಮಾಡಬಹುದೆನ್ನುವುದು ಆಯಾ ಪ್ರದೇಶದ ಜನ ಸಮುದಾಯ ನಿರ್ದಿಷ್ಟ ಸಮಯದಲ್ಲಿ ಯಾವ ಸಮಸ್ಯೆ ಎದುರಿಸುತ್ತಿರುತ್ತಾರೆ, ಅವರ ಅಗತ್ಯಗಳೇನು ಎನ್ನುವುದನ್ನು ಅವಲಂಬಿಸಿರುತ್ತದೆ. ಜಗತ್ತಿನಾದ್ಯಂತ ಸಹಕಾರಿ ಸಂಸ್ಥೆಗಳು 'ಬಡವರ ಪರವಾದ ಸಂಘಟನೆಗಳು' ಎಂದೇ ಗುರುತಿಸಲ್ಪಡುತ್ತಿವೆ. ಜಗತ್ತಿನ ಪ್ರಥಮ ಸಹಕಾರಿ ಸಂಘ ಇಂಗ್ಲೆಂಡ್‌ನಲ್ಲಿ ಆರಂಭವಾದ್ದು ಅಂದಿನ ಬಡ ಶ್ರಮಿಕವರ್ಗದ ಏಳಿಗೆಗಾಗಿ ಎನ್ನುವುದನ್ನು ಸಹಕಾರಿ ಸಂಸ್ಥೆಗಳು ಮರೆಯಬಾರದು. ನಮ್ಮ ದೇಶದಲ್ಲಿ ಬಡತನ ನಿರ್ಮೂಲನೆಯ ಬಗೆಗಿನ 2030ರ ಗುರಿಯನ್ನು ಸಾಧಿಸಬೇಕಾದರೆ ಬೇರೆಲ್ಲ ಕ್ಷೇತ್ರಕ್ಕಿಂತ ಸಹಕಾರಿ ಕ್ಷೇತ್ರದ ಪಾತ್ರ ಹಿರಿದಾದುದು ಎನ್ನುವ ಪೂರ್ಣ ಪರಿಜ್ಞಾನದಿಂದ ಯೋಜನೆಗಳನ್ನು ರೂಪಿಸಬೇಕಾದುದು ಎಲ್ಲ ಸಹಕಾರಿ ಸಂಸ್ಥೆಗಳ ಜವಾಬ್ದಾರಿ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010